# ಸಮಗ್ರ ಶಿಕ್ಷಣ ಕರ್ನಾಟಕ
# ವಾರ್ಷಿಕ ವರದಿ
# 2023–24





# ಸಮಗ್ರ ಶಿಕ್ಷಣ ಕರ್ನಾಟಕ
## ವಾರ್ಷಿಕ ವರದಿ
## 2023–24




**ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–560 001**
**ದೂರವಾಣಿ : 080–22483040, ಫ್ಯಾಕ್ಸ್ : 080–22126718**
**ವೆಬ್ ತಾಣ : www.schooleducation.kar.nic.com**

**ಪರಿವಿಡಿ**

# ವಿಷಯಾನುಕ್ರಮಣಿಕೆ


| ಕ್ರ.ಸಂ | ಅಧ್ಯಾಯಗಳು | ಪುಟ ಸಂಖ್ಯೆ |
|---|---|---|
| 1 | ಯೋಜನೆ ಮತ್ತು ಹಣಕಾಸು | **4-16** |
| 2 | ಪ್ರವೇಶ ಅವಕಾಶ ಮತ್ತು ಉಳಿಯುವಿಕೆ | **17-46** |
| 3 | ಕಾರ್ಯಕ್ರಮಗಳು | **47--75** |
| 4 | ಗುಣಾತ್ಮಕ ಶಿಕ್ಷಣಕ್ಕಾಗಿ ಪ್ರಯತ್ನಗಳು | **76-115** |

# ಅಧ್ಯಾಯ–01

# ಯೋಜನೆ ಮತ್ತು ಹಣಕಾಸು

# ಯೋಜನಾ ಪ್ರಕ್ರಿಯೆ ಮತ್ತು ಅನುಷ್ಠಾನ ವ್ಯವಸ್ಥೆ

**1. ಸಂದರ್ಭ:**

ಕರ್ನಾಟಕ ರಾಜ್ಯವು ಉತ್ತಮ ಆಡಳಿತದ ಭಾಗವಾಗಿ ಸಾರ್ವಜನಿಕ ವೆಚ್ಚ ನಿರ್ವಹಣೆಯಲ್ಲಿ ಅನೇಕ ಸುಧಾರಣೆಗಳು ಮತ್ತು ಉಪಕ್ರಮಗಳ ಲಾಭವನ್ನು ಪಡೆದುಕೊಂಡಿದೆ. 2018-19 ರಿಂದ ಹಿಂದಿನ ಮೂರು ಕೇಂದ್ರ ಪುರಸ್ಕೃತ ಯೋಜನೆಗಳಾದ 'ಸರ್ವ ಶಿಕ್ಷಣ ಅಭಿಯಾನ', 'ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ' ಮತ್ತು 'ಶಿಕ್ಷಕರ ಶಿಕ್ಷಣ' ಗಳು ವಿಲೀನಗೊಂಡು 'ಸಮಗ್ರ ಶಿಕ್ಷಣ ಕರ್ನಾಟಕ' ಜಾರಿಗೆ ಬಂದಿದೆ. ಈ ಕಾರ್ಯಕ್ರಮದ ಗುರಿಯು ಎಲ್ಲಾ ಹಂತಗಳಲ್ಲಿ (ಪ್ರಾಥಮಿಕ ಹಂತದಿಂದ ಪದವಿ ಪೂರ್ವ ಶಿಕ್ಷಣದವರೆಗೆ) ಗುಣಮಟ್ಟ ಶಿಕ್ಷಣವನ್ನು ಸಾಧಿಸಲು ಸಮನಾದ ಕಲಿಕಾ ಅವಕಾಶ ನೀಡಿ ಕಲಿಕೆಯ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳುವುದಾಗಿದೆ.

**2. ಸಮಗ್ರ ಶಿಕ್ಷಣ ಕರ್ನಾಟಕದಡಿಯಲ್ಲಿ ಆದೇಶ ಸಂಖ್ಯೆ ಇಪಿ 26 ಡಿಪಿಐ 2023, ಬೆಂಗಳೂರು, ದಿನಾಂಕ: 25 ಏಪ್ರಿಲ್, 2023ರ ಪ್ರಕಾರ ಸರ್ಕಾರದಿಂದ ಮಂಜೂರಾದ ಅನುಮೋದಿತ ಹುದ್ದೆಗಳು**

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಕಾರ್ಯಕ್ರಮದಡಿಯಲ್ಲಿ ಒಟ್ಟು ಮಂಜೂರಾದ ಹುದ್ದೆಗಳು |
|---|---|---|
| 1. | ರಾಜ್ಯ ಯೋಜನಾ ನಿರ್ದೇಶಕರು | 01 |
| 2. | ನಿರ್ದೇಶಕರು (ಕಾರ್ಯಕ್ರಮ) | 01 |
| 3. | ನಿರ್ದೇಶಕರು (ಗುಣಮಟ್ಟ) | 01 |
| 4. | ಸಹ ನಿರ್ದೇಶಕರು (ಆಡಳಿತ, ಕಾರ್ಯಕ್ರಮ, ಗುಣಮಟ್ಟ, ಗುಣಮಟ್ಟ ಖಾತ್ರಿ ) | 04 |
| 5. | ಮುಖ್ಯ ಲೆಕ್ಕಾಧಿಕಾರಿ | 01 |
| 6. | ಹಿರಿಯ ಕಾರ್ಯಕ್ರಮಾಧಿಕಾರಿಗಳು(ಆಡಳಿತ, ಕಾರ್ಯಕ್ರಮ, ಗುಣಮಟ್ಟ, ಯೋಜನೆ, ಗುಣಮಟ್ಟ ಖಾತ್ರಿ ) | 05 |
| 7. | ರಾಜ್ಯ ಯೋಜನಾ ಅಭಿಯಂತರರು | 01 |
| 8. | ಹಿರಿಯ ಸಹಾಯಕ ನಿರ್ದೇಶಕರು/ ಕಾರ್ಯಕ್ರಮಾಧಿಕಾರಿಗಳು | 09 |
| 9. | ಸಹಾಯಕ ಕಾರ್ಯಪಾಲಕ ಅಭಿಯಂತರರು | 17 |
| 10. | ಸಹಾಯಕ ನಿರ್ದೇಶಕರು/ ಕಿರಿಯ ಕಾರ್ಯಕ್ರಮಾಧಿಕಾರಿಗಳು | 10 |
| 11. | ಪತ್ರಾಂಕಿತ ವ್ಯವಸ್ಥಾಪಕರು | 01 |
| 12. | ಅಧೀಕ್ಷಕರು (ಆಡಳಿತ) | 01 |
| 13. | ಅಧೀಕ್ಷಕರು (ಲೆಕ್ಕ) | 03 |
| 14. | ತಾಂತ್ರಿಕ ಸಹಾಯಕರು (ಪ್ರಾಥಮಿಕ/ಪ್ರೌಢ ಶಾಲಾ) | 06 |
| 15. | ಪ್ರಥಮ ದರ್ಜೆ ಸಹಾಯಕ (ಲೆಕ್ಕ) | 02 |
| 16. | ಪ್ರಥಮ ದರ್ಜೆ ಸಹಾಯಕ | 07 |
| 17. | ದ್ವಿತೀಯ ದರ್ಜೆ ಸಹಾಯಕ | 02 |
| 18. | ಡಿ ದರ್ಜೆ ನೌಕರರು | 04 |
| | **ಒಟ್ಟು** | **76** |

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಒಟ್ಟು ಹುದ್ದೆಗಳು |
|---|---|---|
| 01 | ರಾಜ್ಯ ಮಟ್ಟ | 76 |
| 02 | ಜಿಲ್ಲಾ ಮಟ್ಟ | 370 |
| 03 | ವಲಯ ಮಟ್ಟ | 15105 |
| 04 | ಡಿ.ಪಿ.ಇ.ಪಿ (ರಾಜ್ಯ/ಜಿಲ್ಲೆ) | 11 |
| 05 | ಹೊರಗುತ್ತಿಗೆ(ರಾಜ್ಯ/ಜಿಲ್ಲೆ/ಬ್ಲಾಕ್) | 816 |
| 06 | ಗುತ್ತಿಗೆ ಆಧಾರ | 7 |
| | **ಒಟ್ಟು** | **16385** |

### 3. ಯೋಜನೆ ಪ್ರಕ್ರಿಯೆ

ಯೋಜನಾ ಪ್ರಕ್ರಿಯೆಯು ಅನೇಕ ಹಂತಗಳನ್ನು ಒಳಗೊಂಡಿದೆ. ಪ್ರಸಕ್ತ ವರ್ಷದಲ್ಲಿ ಎಲ್ಲಾ ಜಿಲ್ಲಾ ಹಂತದ ಅಧಿಕಾರಿಗಳಿಗೆ, ವಿವಿಧ ಅನುಷ್ಠಾನ ಹಂತಗಳಲ್ಲಿ ಇರುವ ಅಂತರ ಮತ್ತು ಅವಶ್ಯಕತೆಗಳನ್ನು ಗುರುತಿಸುವ ಕುರಿತು ಮಾಹಿತಿಯನ್ನು Zoom ಸಭೆಗಳ ಮೂಲಕ ತಿಳಿಸಲಾಗುತ್ತದೆ. ಇದಲ್ಲದೆ, ಡಿಸೆಂಬರ್ 2022 ರಲ್ಲಿ ಶಿಕ್ಷಣ ಮಂತ್ರಾಲಯ ಹೊರಡಿಸಿದ ಮಾರ್ಗಸೂಚಿಗಳ ಆಧಾರದ ಮೇಲೆ, (ಎ) ಜಿಲ್ಲಾ ಯೋಜನಾ ತಂಡಗಳು ಬ್ಲಾಕ್ ಮತ್ತು ಶಾಲಾ ಮಟ್ಟದ ತಮ್ಮ ಯೋಜನಾ ತಂಡಗಳೊಂದಿಗೆ ಸಮಾಲೋಚಿಸಿ ಅವಶ್ಯಕತೆಗಳನ್ನು ಗುರುತಿಸಿ ಯೋಜನೆಯನ್ನು ತಯಾರಿಸುವಂತೆ ಸೂಚಿಸಲಾಗುತ್ತದೆ. (ಬಿ) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ (11 ಮತ್ತು 12 ನೇ ತರಗತಿಗಳು)ರವರು ತಮ್ಮ ಜಿಲ್ಲಾ ಯೋಜನಾ ತಂಡಗಳಿಗೆ ಅಗತ್ಯ ಮಾರ್ಗದರ್ಶನ ನೀಡುವಂತೆ ಕೋರಲಾಗುತ್ತದೆ. ಇದಲ್ಲದೆ, ಜಿಲ್ಲಾ ಯೋಜನಾ ತಂಡಗಳು ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ವಾಸ್ತವಿಕ ಯೋಜನೆಯನ್ನು ಸಿದ್ಧಪಡಿಸಲು, ಜಿಲ್ಲಾ ಮಟ್ಟಕ್ಕಿಂತ ಕೆಳಗಿನ ಸ್ತರದಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ. ಜಿಲ್ಲಾ ಹಂತದಲ್ಲಿ ಯೋಜನೆ ಸಿದ್ಧಪಡಿಸಲು ಶಾಲೆಯಿಂದ ಜಿಲ್ಲೆಯವರೆಗೆ ಯೋಜನೆಯ ಪ್ರಸ್ತಾವನೆಯನ್ನು ತಯಾರಿಸುವ ವಿಧಾನವನ್ನು ಅನುಸರಿಸಲಾಗುತ್ತದೆ. ಶಾಲಾ ಹಂತದಲ್ಲಿ, ಶಾಲಾ ತಂಡ ಮತ್ತು ಎಸ್‌ಡಿಎಂಸಿ, ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದರೊಂದಿಗೆ ಯೋಜನಾ ಪ್ರಕ್ರಿಯೆಯು ಪ್ರಾರಂಭವಾಗುತ್ತದೆ. ಈ ಸಮಗ್ರ ಯೋಜನೆಯು ನಿರ್ದಿಷ್ಟ ಅವಶ್ಯಕತೆಗಳು ಮತ್ತು ಅಂದಾಜು ಆಯವ್ಯಯವನ್ನು ಸೂಚಿಸುತ್ತದೆ. ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಅಗತ್ಯವಿದ್ದಾಗ ಮಾರ್ಗದರ್ಶನ ನೀಡುತ್ತಾರೆ. ಈ ಯೋಜನೆಗಳನ್ನು ಕ್ಲಸ್ಟರ್ ಸಂಪನ್ಮೂಲ ಕೇಂದ್ರ, ಕ್ಷೇತ್ರ ಸಂಪನ್ಮೂಲ ಕೇಂದ್ರ, ನಂತರ ಜಿಲ್ಲಾ ಯೋಜನಾ ಕಛೇರಿಯ ಹಂತದಲ್ಲಿ ಕ್ರೋಢೀಕರಿಸಲಾಗುತ್ತದೆ. ಪದವಿ ಪೂರ್ವ (PU) ಹಂತದಲ್ಲಿ, ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ/ ಜಿಲ್ಲಾ ಯೋಜನಾ ತಂಡದ ಮಾರ್ಗದರ್ಶನದಲ್ಲಿ ಯೋಜನೆಯನ್ನು ಕೋಢೀಕರಿಸಲಾಗುತ್ತದೆ.

ಪ್ರತಿ ಹಂತದಲ್ಲೂ, ಹೀಗೆ ಸಿದ್ಧಪಡಿಸಿದ ಕರಡು ಯೋಜನೆಗಳನ್ನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ನಂತರ ಜಿಲ್ಲಾ ಹಂತದಲ್ಲಿ ಕ್ರೋಢೀಕರಿಸಲಾಗುತ್ತದೆ. ಒಟ್ಟಾರೆಯಾಗಿ, ಸಮಾಲೋಚನಾ ಪ್ರಕ್ರಿಯೆಯ ಮೂಲಕ ಸಿದ್ಧಪಡಿಸಲಾಗುವ ಜಿಲ್ಲಾ ಯೋಜನೆಯನ್ನು ಜಿಲ್ಲಾ ಅನುಷ್ಠಾನ ಸಮಿತಿಯ ಮುಂದೆ ಮಂಡಿಸಲಾಗುತ್ತದೆ. ಸಭೆಯಲ್ಲಿ ತೆಗೆದುಕೊಳ್ಳಲಾದ ಸಲಹೆಗಳು ಮತ್ತು ನಿರ್ಧಾರಗಳನ್ನು ಮಾರ್ಗಸೂಚಿಯನ್ವಯ ಅಳವಡಿಸಿ ನಂತರ ಅಂತಿಮ ಯೋಜನೆಯನ್ನು ರಾಜ್ಯ ಯೋಜನಾ ಕಚೇರಿಗೆ ಸಲ್ಲಿಸಲಾಗುತ್ತದೆ.

2023-24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವ ಯೋಜನಾ ಪ್ರಕ್ರಿಯೆಯ ಭಾಗವಾಗಿ, ರಾಜ್ಯ ಕಚೇರಿಯಿಂದ 2023ರ ಜನವರಿಯಲ್ಲಿ ಜಿಲ್ಲಾಹಂತದ ಅಧಿಕಾರಿಗಳಿಗೆ ಪೂರ್ವಭಾವಿ

ಸಭೆಯನ್ನು ಆಯೋಜಿಸಲಾಗಿತ್ತು ಮತ್ತು ಶಿಕ್ಷಣ ಮಂತ್ರಾಲಯ ತಿಳಿಸಿದಂತೆ ಆದ್ಯತೆಗಳನ್ನು ತಿಳಿಸಲಾಯಿತು. ಜಿಲ್ಲಾ ಹಂತದಲ್ಲಿ ಅಗತ್ಯತೆಗಳು ಮತ್ತು ಆದ್ಯತೆಗಳನ್ನು ನಿರ್ಣಯಿಸುವ ಮೂಲಕ ಆವರ್ತಕ ಮತ್ತು ಆವರ್ತಕವಲ್ಲದ ಚಟುವಟಿಕೆಗಳಡಿಯಲ್ಲಿ ವಿವರವಾದ ಯೋಜನೆಗಳನ್ನು ಸಿದ್ಧಪಡಿಸುವ ಬಗ್ಗೆಯೂ ಮಾಹಿತಿ ನೀಡಲಾಯಿತು. ಅದರ ನಂತರ, ಉಪನಿರ್ದೇಶಕರುಗಳು ತಮ್ಮ ಜಿಲ್ಲೆಯ 2023-24ರ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದರು. ಈ ರೀತಿ ತಯಾರಿಸಿದ ಕರಡು ಯೋಜನೆಯನ್ನು ಜಿಲ್ಲೆಯ ತಂಡದವರಿಂದ ಮಾರ್ಚ್ 2023 ರಲ್ಲಿ ಪ್ರಸ್ತುತಪಡಿಸಲಾಯಿತು. ಜಿಲ್ಲೆಯ ಯೋಜನೆಗಳನ್ನು ಅಂತಿಮಗೊಳಿಸುವ ಮತ್ತು ನಂತರ PRABANDH ಸಾಫ್ಟ್‌ವೇರ್‌ನಲ್ಲಿ ಅಪ್‌ಲೋಡ್ ಮಾಡುವ ಬಗ್ಗೆ ಶಿಕ್ಷಣ ಮಂತ್ರಾಲಯ ನೀಡಿರುವ ನಿರ್ದೇಶನವನ್ನು ಅನುಸರಿಸಲಾಗಿದೆ. ಜಿಲ್ಲೆಯ ಯೋಜನೆಗಳ ಪರಿಶೀಲನೆ ಮತ್ತು PRABANDH ಸಾಫ್ಟ್‌ವೇರ್ e-costing ಶೀಟ್‌ನಲ್ಲಿ ಅವರ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕುರಿತು ಇ–ಮೇಲ್‌ಗಳು, ಚರ್ಚೆಗಳು ಹಾಗೂ ಝೂಮ್ ಸಭೆಗಳ ಮೂಲಕ ನಡೆಸಲಾಯಿತು. ರಾಜ್ಯ ಕಚೇರಿಯಲ್ಲಿನ ಸಂಬಂಧಿಸಿದ ಕಾರ್ಯಕ್ರಮಾಧಿಕಾರಿಗಳು ಜಿಲ್ಲಾ ತಂಡಗಳಿಗೆ ಅಗತ್ಯ ನೆರವು/ ಮಾರ್ಗದರ್ಶನ ನೀಡಿದರು ಮತ್ತು ಸಂಪೂರ್ಣ ಪ್ರಕ್ರಿಯೆಯನ್ನು ಯೋಜನಾ ಶಾಖೆಯಿಂದ ನಿರ್ವಹಿಸಲಾಗಿದೆ

## 4. ದತ್ತಾಂಶದ ಮೂಲಗಳು

ಯೋಜನೆಗೆ ಅಗತ್ಯವಾದ ದತ್ತಾಂಶದ ಮುಖ್ಯ ಮೂಲಗಳೆಂದರೆ, ಸಮೀಕ್ಷೆಗಳು, ಇಲಾಖೆಯ ಎಂ.ಐ.ಎಸ್. ಡೇಟಾ ಮತ್ತು ಸಂಶೋಧನಾ ಅಧ್ಯಯನಗಳು. ಯೋಜನೆಗಾಗಿ ಹೆಚ್ಚಿನ ದತ್ತಾಂಶವನ್ನು ಯುಡೈಸ್+(UDISE+)/ಸ್ಟೂಡೆಂಟ್ ಅಚೀವ್‌ಮೆಂಟ್ ಟ್ರ್ಯಾಕಿಂಗ್ ಸಿಸ್ಟಮ್ (SATS)ನಿಂದ ಪಡೆಯಲಾಗಿದೆ. ಈ ದತ್ತಾಂಶಗಳನ್ನು ಶಾಲೆಯ ಮುಖ್ಯಸ್ಥರು ವಾರ್ಷಿಕವಾಗಿ ಇಂದೀಕರಿಸುತ್ತಾರೆ. SATS ತಂತ್ರಾಂಶದ ಮೂಲಕ 2017-18 ರಿಂದ ಮಕ್ಕಳ ದಾಖಲಾತಿ, ಹಾಜರಾತಿ, ಮತ್ತು ಫಲಿತಾಂಶಗಳನ್ನು ಸಂಗ್ರಹಿಸಲಾಗುತ್ತಿದೆ. ಅಲ್ಲದೆ ಪ್ರತಿವರ್ಷ ನಡೆಸುವ ಸಮೀಕ್ಷೆಗಳ ಫಲಿತಾಂಶಗಳನ್ನು ಮುಂದಿನ ವರ್ಷದ ಯೋಜನೆಗೆ ಬಳಸಲಾಗುತ್ತದೆ. ವಾರ್ಷಿಕ ಕ್ರಿಯಾ ಯೋಜನೆ(2023–24)ಯನ್ನು ಶಿಕ್ಷಣ ಮಂತ್ರಾಲಯದ ನಿರ್ದೇಶನದಂತೆ ಸಿದ್ಧಪಡಿಸುವುದಕ್ಕಾಗಿ SATS/UDISE+ 2021–22 ರ ದತ್ತಾಂಶವನ್ನು ಪರಿಗಣಿಸಲಾಗಿದೆ.

## 5. ಅನುಷ್ಠಾನ ಹಂತದ ಸಮಾಲೋಚನೆಗಳು

ಈಗಾಗಲೇ ಕಂಡಿಕೆ 1.2 ರಲ್ಲಿ ಸೂಚಿಸಿರುವಂತೆ, ಶಾಲೆ/ಪಿಯು ಕಾಲೇಜು ಅನುಷ್ಠಾನದ ಒಂದು 'ಘಟಕ' ವಾಗಿ, ಶಾಲಾ ಹಂತದಲ್ಲಿ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿ.ಎಂ.ಸಿ) ಮತ್ತು ಪದವಿ ಪೂರ್ವ ಹಂತದಲ್ಲಿ ಪ್ರಾಂಶುಪಾಲರು, ಉಪನ್ಯಾಸಕರು ಮತ್ತು ಪಿ.ಟಿ.ಎ ಒಳಗೊಂಡ ಶಾಲಾ ತಂಡದ ಮೂಲಕ ಸಮಾಲೋಚನೆಗಳು ಪ್ರಾರಂಭವಾಗುತ್ತವೆ. ಹೀಗೆ ಪಡೆದ ಅಭಿಪ್ರಾಯಗಳನ್ನು ಕ್ಲಸ್ಟರ್ ಹಂತದಿಂದ ಜಿಲ್ಲಾ ಹಂತದವರೆಗೆ ಕ್ರೋಢೀಕರಿಸಲಾಗುತ್ತದೆ. ಪ್ರತಿ ಹಂತದಲ್ಲಿ, ಯೋಜನೆಗಳನ್ನು ಪರಿಶೀಲಿಸಲಾಗುತ್ತದೆ. ನಂತರ ಅದನ್ನು ಅನುಮೋದನೆಗಾಗಿ ಜಿಲ್ಲಾ ಅನುಷ್ಠಾನ ಸಮಿತಿಯ ಮುಂದೆ ಮಂಡಿಸಲಾಗುತ್ತದೆ. ಜಿಲ್ಲಾ ಅನುಷ್ಠಾನ ಸಮಿತಿಯು ಅನುಮೋದಿಸಿರುವ ಯೋಜನೆಯನ್ನು ರಾಜ್ಯ ಯೋಜನಾ ಕಚೇರಿಗೆ ಸಲ್ಲಿಸಲಾಗುತ್ತದೆ.

## 6. ಯೋಜನಾ ತಂಡಗಳು

ಈ ಸಂಯೋಜಿತ ವಿಧಾನವು ಸಮುದಾಯ ಆಧಾರಿತ ಯೋಜನಾ ಪ್ರಕ್ರಿಯೆಯ ಅಗತ್ಯವನ್ನು ಒತ್ತಿ ಹೇಳುತ್ತದೆ. ಮೊದಲೇ ಹೇಳಿದಂತೆ, ಯೋಜನೆ ಪ್ರಕ್ರಿಯೆಯು ಶಾಲೆ/ಕಾಲೇಜು, ಕ್ಲಸ್ಟರ್, ಬ್ಲಾಕ್ ಮತ್ತು ಜಿಲ್ಲಾ ಹಂತ ಎಂಬ ನಾಲ್ಕು ಹಂತಗಳಲ್ಲಿ ನಡೆಯುತ್ತದೆ. ಪ್ರತಿ ಹಂತದಲ್ಲಿ ತಂಡದ ಸದಸ್ಯರ ಆಯ್ಕೆ ಯೋಜನಾ ಪ್ರಕ್ರಿಯೆಯ ನಿರ್ಣಾಯಕ ಅಂಶವಾಗಿದೆ.

ಎ).**ಶಾಲಾ ಹಂತದ ತಂಡ:** ಶಾಲಾ ಹಂತದ ತಂಡವು ಎಸ್‌ಡಿಎಂಸಿ, ಸಮುದಾಯ ಮುಖಂಡರು, ಮುಖ್ಯ ಶಿಕ್ಷಕರು, ಪೋಷಕರನ್ನು ಒಳಗೊಂಡಿದೆ. ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಯೋಜನಾ ಪ್ರಕ್ರಿಯೆಯಲ್ಲಿ ಶಾಲಾ ತಂಡಕ್ಕೆ ಸಹಾಯ ನೀಡುತ್ತಾರೆ.

ಬಿ). **ಕಾಲೇಜು ಹಂತದ ತಂಡ:** ಪ್ರಾಂಶುಪಾಲರು, ಶಿಕ್ಷಕರು/ಉಪನ್ಯಾಸಕರು, ಪೋಷಕರು/ಪಿಟಿಎ.

ಸಿ).**ಜಿಲ್ಲಾ ಹಂತದ ತಂಡಗಳು:** ಅಧಿಕಾರಿಗಳಲ್ಲದೆ, ಸ್ವಯಂ ಸೇವಾ ಸಂಘ ಸಂಸ್ಥೆಗಳು (ಎನ್.ಜಿ.ಓ), ಶಿಕ್ಷಕರು/ಉಪನ್ಯಾಸಕರು ಮತ್ತು ಪೋಷಕರೂ ಸಹ ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ.ಕೆಲವು ಜಿಲ್ಲೆಗಳಲ್ಲಿ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆರೋಗ್ಯ ಇಲಾಖೆ, ಕಾರ್ಮಿಕ ಇಲಾಖೆ, ಅಂಗವಿಕಲ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮುಂತಾದ ವಿವಿಧ ಇಲಾಖೆಗಳ ಪ್ರತಿನಿಧಿಗಳೂ ಸಹ ಭಾಗಿಯಾಗಿರುತ್ತಾರೆ.ಇದರಿಂದ ಚಟುವಟಿಕೆಗಳನ್ನು ಸಮನ್ವಯಗೊಳಿಸಲು ಅನುಕೂಲವಾಗುತ್ತದೆ.

ಡಿ).**ರಾಜ್ಯ ಹಂತದ ತಂಡ**: ಆಯಾ ಮಧ್ಯವರ್ತನೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಾಧಿಕಾರಿಗಳು ಕರಡು ಯೋಜನೆಗಳನ್ನು ಪರಿಶೀಲಿಸುತ್ತಾರೆ ಮತ್ತು ಲಭ್ಯವಿರುವ ದತ್ತಾಂಶದ ಮೂಲಗಳು ಮತ್ತು ಶಿಕ್ಷಣ ಮಂತ್ರಾಲಯ ಮಾರ್ಗಸೂಚಿ / ಮಾನದಂಡಗಳ (UDISE + / SATS, ಸಮೀಕ್ಷೆ ವರದಿಗಳು, ಸಂಶೋಧನಾ ವರದಿಗಳು, ಇತ್ಯಾದಿ) ಆಧಾರದ ಮೇಲೆ ಜಿಲ್ಲಾ ಮುಖ್ಯಸ್ಥರೊಂದಿಗೆ ಅವರ ಅವಶ್ಯಕತೆಗಳನ್ನು ಕುರಿತು ಚರ್ಚಿಸುತ್ತಾರೆ. ಈ ಸಂವಾದದ ಸಮಯದಲ್ಲಿ ಸೂಚಿಸಲಾದ ಮಾರ್ಪಾಡುಗಳನ್ನು ಜಿಲ್ಲೆಗಳು ಅಳವಡಿಸಿಕೊಳ್ಳುತ್ತವೆ. ಅದರನ್ವಯ ಯೋಜನೆಗೆ ಮತ್ತು ಅಂದಾಜು ಆಯವ್ಯಯವನ್ನು ರಾಜ್ಯ ಯೋಜನಾ ಕಚೇರಿಯಲ್ಲಿ ಸಮಾಲೋಚನಾ ಪ್ರಕ್ರಿಯೆಯ ಮೂಲಕ ಕ್ರೋಢೀಕರಿಸಲಾಗುತ್ತದೆ ಮತ್ತು ರಾಜ್ಯ ಯೋಜನಾ ನಿರ್ದೇಶಕರಿಂದ ಪರಿಶೀಲಿಸಲಾಗುತ್ತದೆ. ಈ ರೀತಿ ತಯಾರಿಸಿದ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಮಗ್ರ ಶಿಕ್ಷಣ ಕರ್ನಾಟಕದ ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗುತ್ತದೆ. ಸಮಗ್ರ ಶಿಕ್ಷಣ ಕರ್ನಾಟಕದ ಕಾರ್ಯಕಾರಿ ಸಮಿತಿಯ ಅಧ್ಯಕ್ಷತೆಯನ್ನು ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ವಹಿಸುತ್ತಾರೆ. ಈ ಸಭೆಯಲ್ಲಿ ಸೂಚಿಸಲಾದ ಮಾರ್ಪಾಡುಗಳನ್ನು ಅಳವಡಿಸಿ ಶಿಕ್ಷಣ ಮಂತ್ರಾಲಯ ನೀಡಿರುವ ನಿರ್ದೇಶನಗಳ ಅನುಸಾರ ಕ್ರೋಢೀಕೃತ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತದೆ (ಇ–ಆಯವ್ಯಯ, ಮಾದರಿ ಕೋಷ್ಟಕಗಳು ಮತ್ತು ಮೌಲ್ಯಮಾಪನ ನಮೂನೆಗಳನ್ನು PRABANDH ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಲಾಗುವುದು).

## 7. ಸಾಮರ್ಥ್ಯ ವೃದ್ಧಿ

ಯೋಜನಾ ತಂಡಗಳಿಗೆ ಶಾಲಾ ಶಿಕ್ಷಣದ ಸಮಗ್ರ ಚೌಕಟ್ಟು, ಸಮಗ್ರ ಶಿಕ್ಷಣ ವೆಬ್ ಪೋರ್ಟಲ್, ಶಿಕ್ಷಣ ಮಂತ್ರಾಲಯದಿಂದ ಪಡೆದ ಮಾರ್ಗಸೂಚಿಗಳು ಮತ್ತು ಯೋಜನೆಯ ತಯಾರಿಕೆಗೆ ಅಗತ್ಯವಾದ ಇತರೆ ಮಾಹಿತಿಯ ಬಗ್ಗೆ ತರಬೇತಿ ನೀಡಲಾಗುತ್ತದೆ. ಈ ನಿಟ್ಟಿನಲ್ಲಿ, ಸಾಮರ್ಥ್ಯ ವೃದ್ಧಿ ಕಾರ್ಯಾಗಾರಗಳನ್ನು ವಿಭಾಗ ಮಟ್ಟದಲ್ಲಿ ರಾಜ್ಯ ಕಛೇರಿಯಿಂದ ಆಯೋಜಿಸಲಾಗುತ್ತದೆ. ಯೋಜನಾ ತಂಡಗಳಿಗೆ, ಮಧ್ಯವರ್ತನೆಗಳು, ಮಾನದಂಡಗಳು, ಮಧ್ಯವರ್ತನೆಗಳ ಅನುಮೋದನೆಗೆ ಶಿಕ್ಷಣ ಮಂತ್ರಾಲಯದಿಂದ ನಿಗದಿಪಡಿಸಿದ ನಮೂನೆಗಳು/ ಮಾಹಿತಿಗಳು/ಪೂರಕ ಸಾಕ್ಷ್ಯಗಳು/ ದಾಖಲೆಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. (ಏಪ್ರಿಲ್ 2023 ರಲ್ಲಿ), ಸಿದ್ಧಪಡಿಸಿರುವ ಕರಡು ಜಿಲ್ಲಾ ವಾರ್ಷಿಕ ಕ್ರಿಯಾ ಯೋಜನೆಯನ್ನು ರಾಜ್ಯ ಕಛೇರಿ ಹಂತದಲ್ಲಿ ಆಯೋಜಿಸಲಾದ ಆನ್‌ಲೈನ್ ಕಾರ್ಯಾಗಾರದಲ್ಲಿ ಅಂತಿಮಗೊಳಿಸಲಾಗಿದೆ

## 8. 2023-24ರ ಅವಧಿಯಲ್ಲಿ ಸಮಗ್ರ ಶಿಕ್ಷಣ ಕರ್ನಾಟಕದ ಯೋಜನೆ

### 8.1. 2023-24 ನೇ ಸಾಲಿಗೆ ಚಟುವಟಿಕೆ–ವಾರು ಪಿಎಬಿ ಅನುಮೋದಿತ ಅಂದಾಜು:

| ಕ್ರಮ ಸಂಖ್ಯೆ | ವಿವರಗಳು | ಅನುಮೋದಿತ ಅನುದಾನ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|---|
| ಲಭ್ಯತೆ ಮತ್ತು ಉಳಿಕೆ | | | |
| 1. | ವಸತಿ ಸಹಿತ ಶಾಲೆಗಳು | 401.54 | 336.18 |
| 2. | ಸಾರಿಗೆ/ಬೆಂಗಾವಲು ಸೌಲಭ್ಯ (ಪ್ರಾಥಮಿಕ ಮತ್ತು ಪ್ರೌಢ) | 1383.36 | 1253.38 |
| ಆರ್.ಟಿ.ಇ ಉಪಲಬ್ಧಗಳು | | | |
| 3. | ಉಚಿತ ಸಮವಸ್ತ್ರ | 9801.73 | 9801.73 |
| 4. | ಉಚಿತ ಪಠ್ಯಪುಸ್ತಕ | 2512.32 | 2512.32 |
| 5. | ಆರ್.ಟಿ.ಇ ಕಾಯ್ದೆ, 2009 ರ 2(1)(ಸಿ) ಅಡಿಯಲ್ಲಿ 25% ದಾಖಲಾತಿಗಾಗಿ ತಗುಲಿದ ಶುಲ್ಕ ಮರುಪಾವತಿ | 20000.00 | 20000.00 |
| 6. | ಶಾಲೆಯಿಂದ ಹೊರಗುಳಿದ ಮಕ್ಕಳ ತರಬೇತಿ (OoSC) | 162.59 | 63.35 |
| 7. | ಮಾಧ್ಯಮ ಮತ್ತು ಸಮುದಾಯ ಜಾಗೃತಿ – ಪ್ರಾಥಮಿಕ | 425.93 | 425.93 |
| 8. | ಮಾಧ್ಯಮ ಮತ್ತು ಸಮುದಾಯ ಜಾಗೃತಿ– ಪ್ರೌಢ | 53.07 | 0.00 |
| 9. | SMC ಯ ತರಬೇತಿ ಮತ್ತು ಸಭೆ– ಪ್ರಾಥಮಿಕ | 425.93 | 212.97 |
| 10. | SDMC ಯ ತರಬೇತಿ ಮತ್ತು ಸಭೆ– ಪ್ರೌಢ | 53.07 | 0.00 |
| 11. | SCPCR ಗೆ ಬೆಂಬಲ | 21.29 | 0.00 |
| ಗುಣಮಟ್ಟ ಮಧ್ಯವರ್ತನೆಗಳು – ಗುಣಮಟ್ಟಕ್ಕಾಗಿ ಅನುದಾನ (ಎಲ್.ಇ.ಪಿ, ಮಾರ್ಗದರ್ಶನ, ಆವಿಷ್ಕಾರ ಇತ್ಯಾದಿ) | | | |
| 12. | ಆವಿಷ್ಕೃತ ಯೋಜನಾ ಚಟುವಟಿಕೆಗಳು (ಪ್ರಾಥಮಿಕ ಮತ್ತು ಪ್ರೌಢ) | 40.00 | 40.00 |
| 13. | ಕಲಾ ಉತ್ಸವ | 12.00 | 12.00 |
| 14. | ಕಲಿಕಾ ಅಭಿವೃದ್ಧಿ ಕಾರ್ಯಕ್ರಮ (VI-VIII), (IX-XII) | 2921.15 | 2921.15 |
| 15. | ಸಂಯುಕ್ತ ಶಾಲಾ ಅನುದಾನ (ಪ್ರಾಥಮಿಕ, ಪ್ರೌಢ ಮತ್ತು ಪಿ.ಯು ವಿಭಾಗ) | 11144.85 | 11075.92 |
| 16. | ಗ್ರಂಥಾಲಯ ಅನುದಾನ | 3051.83 | 1199.92 |
| 17. | ರಾಷ್ಟ್ರೀಯ ಆವಿಷ್ಕಾರ ಅಭಿಯಾನ (ಪ್ರಾಥಮಿಕ ಮತ್ತು ಪ್ರೌಢ) | 1185.40 | 807.40 |
| 18. | ಪೂರ್ವ ಪ್ರಾಥಮಿಕ ಹಂತಕ್ಕೆ ಬೆಂಬಲ (ಆವರ್ತಕ) | 554.40 | 554.40 |
| 19. | ಸೇವಾ ನಿರತ ಶಿಕ್ಷಕರ ಹಾಗೂ ಮುಖ್ಯಶಿಕ್ಷಕರ ತರಬೇತಿ ಕಾರ್ಯಕ್ರಮ ((IX-X) | 1094.10 | 250.00 |
| 20. | BRC/URC/CRC ಮೂಲಕ ಶೈಕ್ಷಣಿಕ ಬೆಂಬಲ | 23926.34 | 23926.34 |

| | | | |
|---|---|---|---|
| 21. | ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನ (ನಿಪುಣ್ ಭಾರತ್ ಮಿಷನ್) | 9018.81 | 8887.73 |
| 22. | ರಾಜ್ಯ ಮಟ್ಟದ PMU ರಚನೆ (ಪ್ರಾಥಮಿಕ) | 10.00 | 10.00 |
| 23 | ಕಲಿಕಾ ಕೇಂದ್ರಗಳು | 2120.00 | 2120.00 |
| 24 | ಸಂಪನ್ಮೂಲ ಕೇಂದ್ರಗಳಾಗಿ ಹಬ್ ಶಾಲೆಗಳು | 31.00 | 31.00 |
| | **ಶಿಕ್ಷಕರ ಶಿಕ್ಷಣ** | | |
| 25. | ಶಿಕ್ಷಕರ ಶಿಕ್ಷಣ ಸಂಸ್ಥೆಗಳಲ್ಲಿ (TEI) ಶಿಕ್ಷಕರ ಶಿಕ್ಷಣ (ಶೈಕ್ಷಣಿಕ ಹುದ್ದೆಗಳು) | 4132.90 | 4132.90 |
| 26. | ಶಿಕ್ಷಕ ಶಿಕ್ಷಕರ ಶಿಕ್ಷಣ ವೃತ್ತಿಪರ ಬೆಳವಣಿಗೆಯನ್ನು ಒಳಗೊಂಡ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು | 490.00 | 340.00 |
| 27. | ಶಿಕ್ಷಕರ ಶಿಕ್ಷಣ ಸಂಸ್ಥೆಗಳಿಗೆ (TEI) ತಾಂತ್ರಿಕ ಬೆಂಬಲ | 48.00 | 48.00 |
| 28. | ಶಿಕ್ಷಕರ ಶಿಕ್ಷಣ ಸಂಸ್ಥೆಗಳಿಗೆ (TEI) ವಾರ್ಷಿಕ ಅನುದಾನ | 300.00 | 300.00 |
| 29. | ದೀಕ್ಷಾ | 37.00 | 37.00 |
| | **ಶಿಕ್ಷಕರ ವೇತನ (ಮುಖ್ಯ ಶಿಕ್ಷಕರು/ಶಿಕ್ಷಕರು)** | | |
| 30. | ಶಿಕ್ಷಕರ ವೇತನ (ಮುಖ್ಯ ಶಿಕ್ಷಕರು/ಶಿಕ್ಷಕರು)–ಪ್ರಾಥಮಿಕ | 29525.58 | 29525.58 |
| | **ಲಿಂಗ ಮತ್ತು ಸಮಾನತೆ** | | |
| 31. | ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ– ಟೈಪ್–I | 3959.79 | 3873.08 |
| 32. | ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ– ಟೈಪ್–III | 663.14 | 644.38 |
| 33. | ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ– ಟೈಪ್–IV | 2311.82 | 2205.88 |
| 34. | ರಾಣಿ ಲಕ್ಷ್ಮೀಬಾಯಿ ಆತ್ಮ ರಕ್ಷಾ ಪ್ರಶಿಕ್ಷಣ (ಪ್ರಾಥಮಿಕ ಮತ್ತು ಪ್ರೌಢ) | 159.21 | 159.21 |
| 35. | ಸಮಾನತೆಗಾಗಿ ವಿಶೇಷ ಯೋಜನೆ–ಹದಿಹರೆಯದ ಹೆಣ್ಣುಮಕ್ಕಳ ವ್ಯಕ್ತಿವಿಕಸನ ಮಾರ್ಗದರ್ಶನ ಕಾರ್ಯಕ್ರಮ | 26.54 | 26.54 |
| | **ಸಮನ್ವಯ ಶಿಕ್ಷಣ** | | |
| 36. | ಸಮನ್ವಯ ಶಿಕ್ಷಣ –ಪ್ರಾಥಮಿಕ (VIII ನೇ ತರಗತಿಯವರೆಗೆ) | 3245.79 | 2778.45 |
| 37. | ಸಮನ್ವಯ ಶಿಕ್ಷಣ –ಮಾಧ್ಯಮಿಕ (XIIನೇ ತರಗತಿಯವರೆಗೆ) | 956.72 | 727.44 |
| 38. | ಸಮನ್ವಯ ಶಿಕ್ಷಣ (ವೇತನ) | 2203.20 | 2203.20 |
| | **ವೃತ್ತಿಪರ ಶಿಕ್ಷಣ** | | |
| 39. | ವೃತ್ತಿಪರ ಶಿಕ್ಷಣ (ಪ್ರೌಢ ಮತ್ತು ಪಿಯು ವಿಭಾಗ) –ಹೊಸ ಮತ್ತು ಪ್ರಸ್ತುತ | 2665.04 | 1043.18 |
| | **ಕ್ರೀಡೆ ಮತ್ತು ದೈಹಿಕ ಶಿಕ್ಷಣ** | | |
| 40. | ಕ್ರೀಡೆ ಮತ್ತು ದೈಹಿಕ ಶಿಕ್ಷಣ (XIIನೇ ತರಗತಿಯವರೆಗೆ) | 474.50 | 474.50 |

| | | | |
|---|---|---|---|
| **ಯೋಜನೆಯ ಮೇಲುಸ್ತುವಾರಿ** | | | |
| 41. | ಯೋಜನೆಯ ಮೇಲುಸ್ತುವಾರಿ | 327.19 | 327.19 |
| **ಕಾರ್ಯಕ್ರಮ ನಿರ್ವಹಣೆ** | | | |
| 42. | ಕಾರ್ಯಕ್ರಮ ನಿರ್ವಹಣೆ | 7551.52 | 6500.00 |
| **ಒಟ್ಟು (ಆವರ್ತಕ)** | | **149428.65** | **141575.29** |

| | | |
|---|---|---|
| **ಅನಾವರ್ತಕ ಅಂಶಗಳು** | | |
| **ಕ್ರ ಸಂ** | **ಚಟುವಟಿಕೆಯ ಹೆಸರು** | **ವೆಚ್ಚ (ರೂ. ಲಕ್ಷಗಳಲ್ಲಿ)** |
| 43. | ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ – ಪೂರ್ವ ಪ್ರಾಥಮಿಕ ಹಂತದಲ್ಲಿ ಬೆಂಬಲ (ಹೊಸ) | 144.10 |
| 44. | ICT ಮತ್ತು ಡಿಜಿಟಲ್ ಉಪಕ್ರಮಗಳು – ಡಿಜಿಟಲ್ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ (ಟೈಪ್–I) (ಪ್ರಾಥಮಿಕ<100) | 3212.80 |
| 45. | ICT ಮತ್ತು ಡಿಜಿಟಲ್ ಉಪಕ್ರಮಗಳು – ಸ್ಮಾರ್ಟ್ ಕ್ಲಾಸ್ ರೂಮ್ (ಟೈಪ್– II) (ಪ್ರಾಥಮಿಕ) | 1958.40 |
| 46. | ICT ಮತ್ತು ಡಿಜಿಟಲ್ ಉಪಕ್ರಮಗಳು – ಸ್ಮಾರ್ಟ್ ಕ್ಲಾಸ್ ರೂಮ್ (ಟೈಪ್– II) (ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ) | 328.80 |
| 47. | ಗುಣಮಟ್ಟಕ್ಕಾಗಿ ನಿಧಿ (LEP, ನಾವೀನ್ಯತೆ, ಮಾರ್ಗದರ್ಶನ ಇತ್ಯಾದಿ)–BRC ಗಳಿಗೆ ಐಸಿಟಿ ಸೌಲಭ್ಯ | 1305.60 |
| 48. | ಪ್ರವೇಶ ಮತ್ತು ಉಳಿಯುವಿಕೆ | |
| 49. | ಹೊಸ/ಉನ್ನತೀಕರಿಸಿದ ಶಾಲೆಯ ಪ್ರಾರಂಭ–(2 (ಎರಡು) ವಿಭಾಗ ಶಾಲೆ (ವರ್ಗ IX-X) | 5158.01 |
| 50. | ಅಸ್ತಿತ್ವದಲ್ಲಿರುವ ಶಾಲೆಗಳ ಬಲವರ್ಧನೆ–ಪ್ರಮುಖ ದುರಸ್ತಿ | 425.50 |
| 51. | ಅಸ್ತಿತ್ವದಲ್ಲಿರುವ ಶಾಲೆಗಳ ಬಲವರ್ಧನೆ–ಪ್ರಮುಖ ದುರಸ್ತಿ | 30.00 |
| 52. | ಅಸ್ತಿತ್ವದಲ್ಲಿರುವ ಶಾಲೆಗಳ ಬಲವರ್ಧನೆ– ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಶೌಚಾಲಯಗಳು | 131.11 |
| 53. | ಅಸ್ತಿತ್ವದಲ್ಲಿರುವ ಶಾಲೆಗಳ ಬಲವರ್ಧನೆ– ವಿಜ್ಞಾನ ಪ್ರಯೋಗಾಲಯ | 15.61 |
| 54. | ಅಸ್ತಿತ್ವದಲ್ಲಿರುವ ಶಾಲೆಗಳ ಬಲವರ್ಧನೆ–ಪ್ರಮುಖ ದುರಸ್ತಿ | 293.11 |
| 55. | ಹೊಸ/ಉನ್ನತೀಕರಿಸಿದ ಶಾಲೆಯ ಪ್ರಾರಂಭ –1 (ಒಂದು) ವಿಭಾಗ ಶಾಲೆ (ವರ್ಗ IX- X) | 356.29 |
| 56. | ನೇತಾಜಿ ಸುಭಾಸ್ ಚಂದ್ರ ಆವಾಸೀಯ ವಿದ್ಯಾಲಯ – ಹಾಸಿಗೆ ಸೌಲಭ್ಯ (ಹೊಸ) | 5.00 |
| 57. | ಅಸ್ತಿತ್ವದಲ್ಲಿರುವ ಶಾಲೆಗಳ ಬಲವರ್ಧನೆ– ಗ್ರಂಥಾಲಯ ಕೊಠಡಿ | 26.03 |
| 58. | ಅಸ್ತಿತ್ವದಲ್ಲಿರುವ ಶಾಲೆಗಳ ಬಲವರ್ಧನೆ–ಬಾಲಕಿಯರ ಶೌಚಾಲಯ | 58.70 |

| | | |
|---|---|---|
| 59. | ನೇತಾಜಿ ಸುಭಾಸ್ ಚಂದ್ರ ಆವಾಸೀಯ ವಿದ್ಯಾಲಯ–TLM ಮತ್ತು ಗ್ರಂಥಾಲಯ ಪುಸ್ತಕಗಳು ಸೇರಿದಂತೆ ಉಪಕರಣಗಳು (ಹೊಸ) | 2.00 |
| 60. | ಅಸ್ತಿತ್ವದಲ್ಲಿರುವ ಶಾಲೆಗಳ ಬಲವರ್ಧನೆ–ಕುಡಿಯುವ ನೀರು | 1.63 |
| 61. | ಅಸ್ತಿತ್ವದಲ್ಲಿರುವ ಶಾಲೆಗಳ ಬಲವರ್ಧನೆ–ಹೆಚ್ಚುವರಿ ತರಗತಿ | 288.79 |
| 62. | ಅಸ್ತಿತ್ವದಲ್ಲಿರುವ ಶಾಲೆಗಳ ಬಲವರ್ಧನೆ–ಕಲೆ/ಕ್ರಾಫ್ಟ್ ಕೊಠಡಿ | 15.61 |
| 63. | ಅಸ್ತಿತ್ವದಲ್ಲಿರುವ ಶಾಲೆಗಳ ಬಲವರ್ಧನೆ–ಬಾಲಕರ ಶೌಚಾಲಯ | 61.43 |
| 64. | ಅಸ್ತಿತ್ವದಲ್ಲಿರುವ ಶಾಲೆಗಳ ಬಲವರ್ಧನೆ–ಕಂಪ್ಯೂಟರ್ ಕೊಠಡಿ | 7.81 |
| 65. | ಕೌಶಲ್ಯ ಶಿಕ್ಷಣ | |
| 66. | ಸೆಕೆಂಡರಿ ಮತ್ತು ಹೈಯರ್ ಸೆಕೆಂಡರಿ ಹಂತದಲ್ಲಿ ವೃತ್ತಿ ಶಿಕ್ಷಣ – ಉಪಕರಣಗಳು ಮತ್ತು ಪೀಠೋಪಕರಣಗಳು (ಹೊಸ) | 445.00 |
| 67. | ಯೋಜನೆಯ ಮೇಲ್ವಿಚಾರಣೆ | |
| 68. | ಮೇಲ್ವಿಚಾರಣ ಮಾಹಿತಿ ವ್ಯವಸ್ಥೆ MIS-ವಿದ್ಯಾ ಸಮೀಕ್ಷಾ ಕೇಂದ್ರ–ಪುನರಾವರ್ತಿತವಲ್ಲದ (CE/SE/TE) | 415.00 |
| 69. | ಅಂತರ್ಗತ ಶಿಕ್ಷಣ | |
| 70. | ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ (CWSN)- ಸೌಲಭ್ಯ ಸಂಪನ್ಮೂಲ ಕೊಠಡಿಗಾಗಿ ಉಪಕರಣಗಳು – ಅತ್ಯುನ್ನತ ವರ್ಗ VIII (NR) | 148.00 |
| 71. | ಲಿಂಗ ಮತ್ತು ಸಮಾನತೆ | |
| 72. | ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಟೈಪ್-III- ಹಾಸಿಗೆ ಸೌಲಭ್ಯ | 2.40 |
| 73. | ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಟೈಪ್ -I- ಹಾಸಿಗೆ ಸೌಲಭ್ಯ | 16.50 |
| 74. | ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ Type- III - ಪೀಠೋಪಕರಣಗಳು/ಸಲಕರಣೆಗಳು (ಅಡುಗೆಮನೆ ಸೇರಿದಂತೆ) | 2.00 |
| 75. | ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಟೈಪ್ - IV- ಹಾಸಿಗೆಯ ಬದಲಾವಣೆ (3 ವರ್ಷಗಳಿಗೊಮ್ಮೆ) | 58.40 |
| 76. | ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಟೈಪ್ - I - ಹಾಸಿಗೆ ಸೌಲಭ್ಯ | 2.40 |
| 77. | ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಟೈಪ್– III -TLM ಮತ್ತು ಗ್ರಂಥಾಲಯ ಪುಸ್ತಕಗಳು ಸೇರಿದಂತೆ ಉಪಕರಣಗಳು. | 0.60 |
| 78. | ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಪ್ರಕಾರ –I ಹಾಸಿಗೆಯ ಬದಲಾವಣೆ (3 ವರ್ಷಗಳಿಗೊಮ್ಮೆ) | 59.20 |
| 79. | ಶಿಕ್ಷಕರ ಶಿಕ್ಷಣ | |
| 80. | TLM ಗಳಿಗೆ ತಂತ್ರಜ್ಞಾನ ಬೆಂಬಲ – ಡಯಟ್‌ಗಳು | 194.40 |
| **ಒಟ್ಟು (ಅನಾವರ್ತಕ)** | | **15170.21** |

**ಮೂಲ:** ಮಾರ್ಚ್ 2024 ರವರೆಗೆ PRABANDH ನಲ್ಲಿ ಪಡೆದಿರುವ ಮಾಹಿತಿಯಂತೆ

## 8.2. ಪ್ರಸ್ತಾವನೆ, ಅನುಮೋದನೆ, ಬಿಡುಗಡೆ ಮತ್ತು ಖರ್ಚು – 2023-24ರ ಅವಧಿಯಲ್ಲಿ ಹಂಚಿಕೆ

'ಸಮಗ್ರ ಶಿಕ್ಷಣ' ಯೋಜನೆಯು 2018-19 ರಿಂದ ಜಾರಿಗೆ ಬಂದಿದ್ದರೂ, ಸರ್ವ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಶಿಕ್ಷಕರ ಶಿಕ್ಷಣದಡಿಯಲ್ಲಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಒದಗಿಸಿದ ಅನುದಾನವು 60:40 ಅನುಪಾತದಲ್ಲಿರುತ್ತದೆ. ಕೆಳಗಿನ ಕೋಷ್ಟಕವು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ನಡುವೆ ಖರ್ಚುಗಳ ಹಂಚಿಕೆಯನ್ನು ತೋರಿಸುತ್ತದೆ. 2023-24ರ ಅವಧಿಯಲ್ಲಿ ಪಿಎಬಿಯಲ್ಲಿ ಅನುಮೋದಿಸಿದ ಆಯವ್ಯಯದ ಪ್ರಕಾರ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ರೂ. 827.49 ಕೋಟಿಗಳನ್ನು ಹಾಗೂ ರಾಜ್ಯ ಸರ್ಕಾರವು ರೂ.551.66 ಕೋಟಿ ಬಿಡುಗಡೆ ಮಾಡಬೇಕಾಗಿತ್ತು. ಕೇಂದ್ರ ಸರ್ಕಾರ ರೂ. 827.49 ಕೋಟಿ ಬಿಡುಗಡೆ ಮಾಡಿರುತ್ತದೆ. ರಾಜ್ಯ ಸರ್ಕಾರವು ರೂ. 2090.00ಕೋಟಿ ಬಿಡುಗಡೆ ಮಾಡಿದ್ದು, ಇದು ನಿರೀಕ್ಷಿತ ಹಂಚಿಕೆಗಿಂತ ಬಹಳ ಹೆಚ್ಚಾಗಿದೆ. 2023-24ರ ಪಿ.ಎ.ಬಿಯಲ್ಲಿ ಪ್ರಸ್ತಾಪಿಸಿದಂತೆ ರಾಜ್ಯ ಸರ್ಕಾರದ ಪಾಲು ಎರಡು ಪಟ್ಟಿಗಿಂತ ಹೆಚ್ಚು ಖರ್ಚು ಮಾಡಿರುವುದನ್ನು ಗಮನಿಸಬಹುದಾಗಿದೆ.

## 8.3 2023-24ರ ಅವಧಿಯಲ್ಲಿ, ಪಿಎಬಿ ನಡವಳಿಯಲ್ಲಿದ್ದಂತೆ ಒಟ್ಟು ಆಯವ್ಯಯ ಅಂದಾಜು, ವಾಸ್ತವ ಬಿಡುಗಡೆಗಳು ಮತ್ತು ಒಪ್ಪಿರುವ ಬಿಡುಗಡೆಗಳ ವಿವರಗಳು ಈ ಕೆಳಗಿನಂತಿವೆ.

**ಅಂದಾಜು ಆಯವ್ಯಯ ಮತ್ತು ಅನುಮೋದನೆ 2023-24** (ಮೊತ್ತ ರೂ ಲಕ್ಷಗಳಲ್ಲಿ)

| ಯೋಜನೆಯ ಹೆಸರು | ಮುಂದೂಡಿರುವ ಮೊತ್ತ (Spill over) | ಅನಾವರ್ತಕ (ಹೊಸ) | ಆವರ್ತಕ (ಹೊಸ) | ಒಟ್ಟು (ಹೊಸ) | ಒಟ್ಟು (ಮುಂದೂಡಿರುವ ಮೊತ್ತ ಒಳಗೊಂಡಂತೆ) |
|---|---|---|---|---|---|
| ಪ್ರಾಥಮಿಕ ಶಿಕ್ಷಣ | 24586.14 | 3928.58 | 131860.75 | 135789.33 | 160375.47 |
| ಪ್ರೌಢ ಶಿಕ್ಷಣ | 18792.89 | 4563.92 | 13290.69 | 17854.61 | 36647.50 |
| ಶಿಕ್ಷಕ ಶಿಕ್ಷಣ | 82.78 | 0.00 | 4937.98 | 4937.98 | 5020.76 |
| **ಒಟ್ಟು** | **43461.81** | **8492.50** | **150089.42** | **158581.92** | **202043.73** |

9. ಬಿಡುಗಡೆಯಾದ ಮೊತ್ತ – ಕೇಂದ್ರ ಪಾಲು: ರೂ. **827.49** ಕೋಟಿ, ಹೊಂದಾಣಿಕೆಯ ರಾಜ್ಯ ಪಾಲು: ರೂ. **551.66** ಕೋಟಿ ಕರ್ನಾಟಕ ಸರ್ಕಾರದಿಂದ ವಿವಿಧ ಮಧ್ಯವರ್ತನೆಗಳಿಗೆ ಎಸ್ಎಸ್‌ಕೆ ಸಂಘಕ್ಕೆ ನೇರವಾಗಿ ಬಿಡುಗಡೆ ಮಾಡಲಾದ ಹಂಚಿಕೆಯ ವಿವರ

(ಮೊತ್ತ ರೂ ಲಕ್ಷಗಳಲ್ಲಿ)

| ಅಂಶಗಳು | ಅನುಮೋದಿತ ವಿನಿಯೋಗ | ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಮೊತ್ತ | GoK ಹೊಂದಾಣಿಕೆಯ ಹಂಚಿಕೆ ಬಿಡುಗಡೆ | ಪ್ರಾರಂಭಿಕ ಶಿಲ್ಕು ಮತ್ತು ಇತರೆ ರಸೀದಿಗಳು | ಲಭ್ಯವಿರುವ ಒಟ್ಟು ಮೊತ್ತ | ವೆಚ್ಚ | | |
|---|---|---|---|---|---|---|---|---|
| | | | | | | ವೇತನ | ಕಾರ್ಯಕ್ರಮಗಳು | ಒಟ್ಟು |
| **1** | **2** | **3** | **4** | **5** | **6** | **7** | **8** | **10** |
| ಪ್ರಾಥಮಿಕ ಶಿಕ್ಷಣ | 151670.23 | 69114.36 | 46076.23 | 49709.48 | 164900.07 | 50703.06 | 73750.56 | 124453.62 |
| ಪ್ರೌಢ ಶಿಕ್ಷಣ | 19303.55 | 10209.40 | 6806.27 | 17328.54 | 34344.21 | 0.00 | 12263.74 | 12263.74 |
| ಶಿಕ್ಷಕರ ಶಿಕ್ಷಣ | 9989.00 | 3425.01 | 2283.34 | 2695.00 | 8403.35 | 4132.90 | 725.00 | 4857.90 |
| **ಒಟ್ಟು** | **180962.78** | **82748.77** | **55165.84** | **69733.02** | **207647.63** | **54835.96** | **86739.30** | **141575.26** |

**ಮೂಲ:** *ಆರ್ಥಿಕ ನಿರ್ವಹಣೆಯ ಅನುಬಂಧ 'ಎ' (ತಾತ್ಕಾಲಿಕ) ಪ್ರಬಂಧ್ ಪೋರ್ಟಲ್ ನಲ್ಲಿ ದಿನಾಂಕ: 31-03-2024ರಲ್ಲಿದ್ದಂತೆ

**10.ಮಹತ್ವಾಕಾಂಕ್ಷೆಯ ಜಿಲ್ಲೆಗಳು**

ಎ). ಕರ್ನಾಟಕದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳನ್ನು ನೀತಿ ಆಯೋಗವು ಮಹತ್ವಾಕಾಂಕ್ಷೆಯ ಜಿಲ್ಲೆಗಳೆಂದು ಗುರುತಿಸಿದ್ದು, ಈ ಎರಡು ಜಿಲ್ಲೆಗಳ ಸಮಗ್ರ ಅಭಿವೃದ್ಧಿಯ ಯೋಜನೆಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಶಿಕ್ಷಣ ಕ್ಷೇತ್ರವನ್ನು ನೀತಿ ಆಯೋಗವು ಸುಧಾರಣೆಯ ಪ್ರಮುಖ ಕ್ಷೇತ್ರಗಳಲ್ಲಿ ಒಂದು ಎಂದು ಗುರುತಿಸಿದೆ. ಈ ಎರಡೂ ಜಿಲ್ಲೆಗಳು ಭೌಗೋಳಿಕ, ಹವಾಮಾನ ಮತ್ತು ಅಭಿವೃದ್ಧಿ ಕಾರಣಗಳಿಂದಾಗಿ ಹಿಂದುಳಿದ ಪ್ರದೇಶವೆಂದು ಪರಿಗಣಿಸಲ್ಪಟ್ಟ ಕಲ್ಯಾಣ-ಕರ್ನಾಟಕ ಪ್ರದೇಶಕ್ಕೆ (ಕೆಕೆ ಪ್ರದೇಶ) ಸೇರುತ್ತವೆ. ಈ ಜಿಲ್ಲೆಗಳಲ್ಲಿನ ಎಲ್ಲಾ ತಾಲ್ಲೂಕುಗಳು ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಾಗಿವೆ. ಶೈಕ್ಷಣಿಕವಾಗಿ ಹಿಂದುಳಿದ ವಲಯಗಳಿಗೆ ಆದರ್ಶ ವಿದ್ಯಾಲಯಗಳಂತಹ ಅರ್ಹವಾದ ಸೌಲಭ್ಯಗಳನ್ನು ಖಾತರಿಪಡಿಸಿದ ನಂತರವೂ, ಈ ಜಿಲ್ಲೆಗಳ ಬಹುಪಾಲು ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶದ ಮಟ್ಟವು ರಾಜ್ಯದ ಸರಾಸರಿಗಿಂತ ತೀರಾ ಕಡಿಮೆಯಿರುತ್ತದೆ. ನಲಿ-ಕಲಿ ಮ್ಯಾಕ್ರೋ ಅಧ್ಯಯನ, ರಾಜ್ಯ ಸಾಧನೆ ಸಮೀಕ್ಷೆ ಮತ್ತು ಇತ್ತೀಚಿನ ಎಸ್‌ಎಸ್‌ಎಲ್‌ಸಿ ಫಲಿತಾಂಶಗಳು ರಾಜ್ಯದ ಸರಾಸರಿಗಿಂತ ತೀರಾ ಕಡಿಮೆ ಇದ್ದು, ಇದು ರಾಜ್ಯದಲ್ಲಿ ಹಿಂದುಳಿಯುವಿಕೆಯ ಅಂತರವನ್ನು ಗುರುತಿಸಲು ಸಹಕಾರಿಯಾಗಿದೆ.

ಬಿ). ಇತರ ಜಿಲ್ಲೆಗಳಂತೆ ಈ ಜಿಲ್ಲೆಗಳಲ್ಲಿನ ಕಲಿಕೆಯ ಮಟ್ಟ ಮತ್ತು ತರಗತಿ ಪ್ರಕ್ರಿಯೆಗಳನ್ನು ಸುಧಾರಿಸಲು ವಿಶೇಷ ಮಧ್ಯವರ್ತನೆಗಳು/ಯೋಜನೆಗಳಾದ ಓದು ಕರ್ನಾಟಕ, ನಲಿ-ಕಲಿ, ಗುರು ಚೇತನಾ, ಗಣಿತ ಕಲಿಕಾ ಆಂದೋಲನ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಈ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಹಲವು ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವಲ್ಲಿ ಅನುಷ್ಠಾನಾಧಿಕಾರಿಗಳನ್ನು (ರಾಯಚೂರಿನಲ್ಲಿ ಅಜೀಮ್ ಪ್ರೇಮ್ ಜೀ ಫೌಂಡೇಶನ್ ಮತ್ತು ಯಾದಗಿರಿಯಲ್ಲಿ ಕಲಿಕೆ) ಬೆಂಬಲಿಸಲು ಸ್ವಯಂ ಸೇವಾ ಸಂಘಟನೆಗಳನ್ನು ಗುರುತಿಸಲಾಗಿದೆ.

ಸಿ). ನೀತಿ ಆಯೋಗ 2018 ರಲ್ಲಿ ಪ್ರಕಟಿಸಿದ DEEP DIVE Insights from Champions of Change 'The Aspirational Districts Dashboard' ವರದಿಯು ರಾಯಚೂರು ಜಿಲ್ಲೆಯು ಸಂಯೋಜಿತ ಅಂಕಗಳಲ್ಲಿ 10ಕ್ಕಿಂತ ಹೆಚ್ಚಿನ ಅಂಕಗಳ ಹೆಚ್ಚಳವನ್ನು ದಾಖಲಿಸಿರುವುದನ್ನು ನಮೂದಿಸಿದೆ.

**11. ಕಾರ್ಯ ನಿರ್ವಹಣೆ ಶ್ರೇಣಿ ಸೂಚಕಗಳು**

ಎ).ಪಿಜಿಐ ಪೋರ್ಟಲ್ (ಶಿಕ್ಷಣ ಮಂತ್ರಾಲಯ ವಿನ್ಯಾಸಗೊಳಿಸಿದ ಮತ್ತು ಅಭಿವೃದ್ಧಿಪಡಿಸಿದ) ಪ್ರಮುಖ ಶೈಕ್ಷಣಿಕ ಸೂಚಕಗಳನ್ನು ಬಳಸಿಕೊಂಡು ಶಿಕ್ಷಣದಲ್ಲಿ ರಾಜ್ಯದ ಕಾರ್ಯಕ್ಷಮತೆಯನ್ನು ಅಳೆಯಲು ಆನ್‌ಲೈನ್ ಉಸ್ತುವಾರಿ ಸಾಧನವನ್ನು ಒಳಗೊಂಡಿದೆ.ಚೌಕಟ್ಟಿನಲ್ಲಿರುವ 70 ಪ್ರಮುಖ ಶೈಕ್ಷಣಿಕ ಸೂಚಕಗಳಲ್ಲಿ, ರಾಜ್ಯವು ಮೂಲಸೌಕರ್ಯ ಮತ್ತು ಆಡಳಿತ ಪ್ರಕ್ರಿಯೆ ಸೂಚಕಗಳಲ್ಲಿ ಮಾತ್ರ ನಿರೀಕ್ಷಿತ ಅಂಕಗಳನ್ನು ಗಳಿಸಲು ಸಾಧ್ಯವಾಗಿರುವುದಿಲ್ಲ.

**2017-18, 2018-19, 2019-20, 2020-21 ಮತ್ತು 2021-22 ವರ್ಷಗಳ ಕರ್ನಾಟಕದ ಪಿಜಿಐ ಅಂಕಗಳು ಕೆಳಕಂಡಂತಿವೆ:**

| PGI ಸೂಚಕಗಳು | ಗುರಿ | 2017-18 | 2018-19 | 2019-20 | 2020-21 | ಗುರಿ 2020-21 | 2021-22 |
|---|---|---|---|---|---|---|---|
| ಕ್ಷೇತ್ರ 1- ಕಲಿಕಾ ಫಲಗಳು ಮತ್ತು ಗುಣಮಟ್ಟ | 180 | 160 | 160 | 160 | 160 | 240 | 59.4 |
| ಕ್ಷೇತ್ರ 2- ಲಭ್ಯತೆ | 80 | 69 | 75 | 72 | 76 | 80 | 62.4 |
| ಕ್ಷೇತ್ರ 3- ಮೂಲಸೌಕರ್ಯ ಮತ್ತು ಸೌಲಭ್ಯಗಳು | 150 | 100 | 81 | 96 | 123 | 190 | 75.0 |

| | | | | | | | |
|---|---|---|---|---|---|---|---|
| ಕ್ಷೇತ್ರ 4– ಸಮತೆ | 230 | 212 | 199 | 206 | 211 | 260 | 227.60 |
| TOTAL CATEGORY 1 WEIGHT | **640** | **541** | **515** | **534** | **570** | **770** | **423.40** |
| ಕ್ಷೇತ್ರ 5- ಆಡಳಿತ ಪ್ರಕ್ರಿಯೆಗಳು | 360 | 165 | 240 | 279 | 292 | 130 | 51.60 |
| ಕ್ಷೇತ್ರ 6- ಶಿಕ್ಷಕರ ಶಿಕ್ಷಣ ಮತ್ತು ತರಬೇತಿ | --- | --- | --- | --- | --- | 100 | 73.70 |
| TOTAL CATEGORY 2 WEIGHT | **360** | **165** | **240** | **279** | **292** | **292** | **125.30** |
| TOTAL WEIGHT | **1000** | **706** | **755** | **813** | **862** | **1000** | **548.70** |

## 12. ಯೋಜನಾ ಪ್ರಕ್ರಿಯೆಯಲ್ಲಿನ ನಿರ್ಬಂಧಗಳು

ಎ).ಶಿಕ್ಷಣ ಮಂತ್ರಾಲಯದಿಂದ ಮಾರ್ಗಸೂಚಿಗಳನ್ನು ಸ್ವೀಕರಿಸುವ ಮೊದಲು, ಯೋಜನಾ ಪ್ರಕ್ರಿಯೆಗೆ ಸಂಬಂಧಿಸಿದ ಚಟುವಟಿಕೆಗಳು ಪ್ರಾರಂಭವಾಗಿದ್ದವು. ಶಿಕ್ಷಣ ಮಂತ್ರಾಲಯದಿಂದ ಸ್ವೀಕರಿಸಿದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಲು ಹೆಚ್ಚಿನ ಮಾಹಿತಿಯನ್ನು ಜಿಲ್ಲೆಗಳಿಗೆ ನೀಡಲಾಯಿತು. ಜಿಲ್ಲಾ ಮುಖ್ಯಸ್ಥರು ತಮ್ಮ ಯೋಜನೆಗಳನ್ನು ವಿಶ್ಲೇಷಿಸಲು ಮತ್ತು ರೂಪಿಸಲು ಸಿದ್ಧತೆ ಮಾಡಿಕೊಂಡಿದ್ದರು. ಆದರೆ ಕೆಲವು ಚಟುವಟಿಕೆಗಳಾದ 10 ಕ್ಕಿಂತ ಕಡಿಮೆ ದಾಖಲಾತಿ ಇರುವ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಸಾರಿಗೆ ಸೌಲಭ್ಯಗಳನ್ನು ಒದಗಿಸುವುದು ಮತ್ತು ಹತ್ತಿರದ ಕರ್ನಾಟಕ ಪಬ್ಲಿಕ್ ಶಾಲೆಗಳೊಂದಿಗೆ ವಿಲೀನಗೊಳಿಸುವುದು, ಸಿಆರ್‌ಸಿ ಮತ್ತು ಬಿಆರ್‌ಸಿ ಕೇಂದ್ರಗಳನ್ನು ಬಲವರ್ಧನೆಗೊಳಿಸುವುದು, ಎಸ್.ಆರ್.ಸಿ ಕೇಂದ್ರಗಳನ್ನು ಬಲವರ್ಧನೆಗೊಳಿಸುವುದು ಇತ್ಯಾದಿ ಚಟುವಟಿಕೆಗಳನ್ನು ಸಂಬಂಧಿಸಿದ ಭಾಗೀದಾರರೊಂದಿಗೆ ವ್ಯಾಪಕ ಸಮಾಲೋಚನೆಗಳನ್ನು ನಡೆಸಿದ್ದರೂ, ನಿರ್ದಿಷ್ಟ ಕಾರ್ಯತಂತ್ರಗಳನ್ನು ವಾರ್ಷಿಕ ಕ್ರಿಯಾ ಯೋಜನೆ (2023-24)ಯಲ್ಲಿ ಅಳವಡಿಸಲು ನಿರ್ಬಂಧಗಳಿದ್ದವು.

# ಅಧ್ಯಾಯ–2

# ಪ್ರವೇಶ ಅವಕಾಶ ಮತ್ತು ಉಳಿಯುವಿಕೆ

# ಪ್ರವೇಶ ಅವಕಾಶ ಮತ್ತು ಉಳಿಯುವಿಕೆ

**ಪೀಠಿಕೆ:**

ರಾಜ್ಯದ ದಾಖಲಾತಿ ಹಕ್ಕು ನಿಯಮಗಳಲ್ಲಿ 1 ರಿಂದ 5ರ ವರೆಗಿನ ಕಿರಿಯ ಪ್ರಾಥಮಿಕ ಶಾಲೆಗಳಿಗೆ, 1 ರಿಂದ 7ರ ವರೆಗಿನ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಹಾಗೂ 8ನೇ ತರಗತಿ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ 01 ಮತ್ತು 01 ಕಿಮೀ ಕಡಿಮೆ, 03 ಮತ್ತು 03ಕ್ಕಿಂತ ಕಡಿಮೆ. 05 ಮತ್ತು 05ಕ್ಕಿಂತ ಕಡಿಮೆ – ಹೀಗೆ ಮೂರು ಬಗೆಯ ನೀತಿಯನ್ನು ರೂಪಿಸಿದೆ. ಇಲ್ಲಿ ಅರ್ಹ ವಸತಿ ಪ್ರದೇಶಗಳಲ್ಲಿ ಶೇಕಡಾ 100ರಷ್ಟು ಪ್ರವೇಶಾವಕಾಶ ದೊರಕಿಸುವುದೇ ಉದ್ದೇಶವಾಗಿದೆ. ಜನಸಂಖ್ಯೆ ಮತ್ತು ವಸತಿ ಪ್ರದೇಶಗಳ ವಿಷಯದಲ್ಲಿ ಶಾಲೆಗಳಿಗೆ ಅವಕಾಶ ದೊರಕುವಂತೆ ಮಾಡುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಲಾಗಿದೆ. 10 ಮಕ್ಕಳು ಶಾಲೆಗೆ ಹೋಗುವ 6+ ಮತ್ತು 10+ ವಯೋಗುಂಪಿನ ಮಕ್ಕಳಿರುವ 100 ಮತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಎಲ್ಲಾ ವಸತಿಪ್ರದೇಶಗಳಿಗೆ ಪ್ರಾಥಮಿಕ ಶಾಲಾ ಪ್ರವೇಶಾವಕಾಶವನ್ನು ನೀಡಲಾಗಿದೆ.

ಹಾಗೆಯೇ ಮಕ್ಕಳ ದಾಖಲಾತಿಯೂ ಸುಧಾರಣೆಗೊಂಡಿದೆ. ಶಾಲೆಗೆ ಹೋಗಬೇಕೆಂಬ ಬೇಡಿಕೆಯು ಮೂಡಿದೆ ಮತ್ತು ಪಾಲಕರು ತಮ್ಮ ಮಕ್ಕಳನ್ನು ಸ್ವಯಂ ಪ್ರೇರಿತವಾಗಿ ದಾಖಲಾತಿ ಮಾಡಿಸುತ್ತಿದ್ದಾರೆ. ಅದಲ್ಲದೆ ಈ ದಾಖಲಾತಿ ಪ್ರಮಾಣವು ಕೆಲವು ವರ್ಷಗಳಲ್ಲಿ ಸ್ಥಿರೀಕರಣಗೊಂಡಿದೆ ಎಂಬುದೂ ಮುಖ್ಯ. ದಾಖಲಾತಿಯ ಇಳಿಕೆಯ ವಿದ್ಯಮಾನಕ್ಕೆ ರಾಜ್ಯದಲ್ಲಿ ಇಳಿಯುತ್ತಿರುವ ಜನಸಂಖ್ಯಾ ಹೆಚ್ಚಳದ ಗತಿಯು ಒಂದು ಕಾರಣವಾಗಿದೆ.

**ಪ್ರವೇಶಾವಕಾಶ ಅನುಪಾತ**

**ಕಿರಿಯ ಪ್ರಾಥಮಿಕ ಶಾಲೆಗಳು**

2023–24ರಲ್ಲಿ ಒಟ್ಟು 61473 ವಸತಿ ಪ್ರದೇಶಗಳಿದ್ದವು. ಇವುಗಳಲ್ಲಿ 58525 ವಸತಿಪ್ರದೇಶಗಳು ಕಿರಿಯ ಪ್ರಾಥಮಿಕ ಶಾಲೆಗಳನ್ನು (1 ರಿಂದ 5) ಹೊಂದಿದ್ದವು. ಕಿರಿಯ ಪ್ರಾಥಮಿಕ ಶಾಲೆಗಳ ಪ್ರವೇಶಾವಕಾಶದ ಯಶಸ್ಸಿನ ಶೇಕಡಾವಾರು ಪ್ರಮಾಣವು ಶೇ.95.20% ಆಗಿತ್ತು.

**ಈ ಕೆಳಗಿನ 18 ಜಿಲ್ಲೆಗಳು ಪ್ರತಿಯೊಂದೂ ವಸತಿಪ್ರದೇಶದಲ್ಲಿ ಒಂದು ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿವೆ:**

ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಚಿಕ್ಕೋಡಿ, ಬಳ್ಳಾರಿ, ಬೀದರ್, ಬಿಜಾಪುರ, ಚಿತ್ರದುರ್ಗ, ಧಾರವಾಡ, ಗದಗ, ಕಲ್ಬುರ್ಗಿ, ಹಾವೇರಿ, ಕೋಲಾರ, ಕೊಪ್ಪಳ, ರಾಯಚೂರು, ವಿಜಯನಗರ ಮತ್ತು ಯಾದಗಿರಿ.

**ಒಟ್ಟು 61473 ವಸತಿಪ್ರದೇಶಗಳಲ್ಲಿ 2948 ವಸತಿಪ್ರದೇಶಗಳು ನಿಯಮಾನುಸಾರ ಕಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯುವುದಕ್ಕೆ ಅರ್ಹವಾಗಲಿಲ್ಲ. ಈ ವಸತಿ ಪ್ರದೇಶಗಳಿರುವ 17 ಜಿಲ್ಲೆಗಳು ಈ ಕೆಳಗಿನಂತಿವೆ:**

ಬೆಳಗಾವಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಕ್ಷಿಣಕನ್ನಡ, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ಶಿರಸಿ, ತುಮಕೂರು, ಮಧುಗಿರಿ, ಉಡುಪಿ ಮತ್ತು ಉತ್ತರಕನ್ನಡ.

**ಹಿರಿಯ ಪ್ರಾಥಮಿಕ ಶಾಲೆಗಳು:**

61473 ವಸತಿಪ್ರದೇಶದ, 56344 ವಸತಿಪ್ರದೇಶಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳ ಸೌಕರ್ಯವಿದೆ. ಆದ್ದರಿಂದ 91.65% ಪ್ರವೇಶಾತಿ ಸಾಧಿಸಿದೆ.

**ಈ ಕೆಳಗಿನ 18 ಜಿಲ್ಲೆಗಳ ಪ್ರತಿಯೊಂದೂ ವಸತಿ ಪ್ರದೇಶಗಳು ಹಿರಿಯ ಪ್ರಾಥಮಿಕ ಶಾಲೆಗಳನ್ನು ಹೊಂದಿವೆ.**

ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಚಿಕ್ಕೋಡಿ, ಬಳ್ಳಾರಿ, ಬೀದರ್, ಬಿಜಾಪುರ, ಚಿತ್ರದುರ್ಗ, ಧಾರವಾಡ, ಗದಗ, ಕಲ್ಬುರ್ಗಿ, ಹಾವೇರಿ, ಕೋಲಾರ, ಕೊಪ್ಪಳ, ರಾಯಚೂರು, ವಿಜಯನಗರ ಮತ್ತು ಯಾದಗಿರಿ.

**61473 ವಸತಿಪ್ರದೇಶಗಳಲ್ಲಿ ಒಟ್ಟು 5129 ವಸತಿಪ್ರದೇಶಗಳು ನಿಯಮಾನುಸಾರ ಹಿರಿಯ ಪ್ರಾಥಮಿಕ ಶಾಲೆಗಳನ್ನು ಹೊಂದುವುದಕ್ಕೆ ಅರ್ಹವಾಗಲಿಲ್ಲ. ಈ ವಸತಿಪ್ರದೇಶಗಳು ಈ ಕೆಳಗಿನ 17 ಜಿಲ್ಲೆಗಳಾಗಿರುತ್ತದೆ.**

ಬೆಳಗಾವಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಕ್ಷಿಣಕನ್ನಡ, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ಶಿರಸಿ, ತುಮಕೂರು, ಮಧುಗಿರಿ, ಉಡುಪಿ ಮತ್ತು ಉತ್ತರ ಕನ್ನಡ.

**ಪ್ರೌಢ ಶಾಲೆಗಳು:**

61473 ವಸತಿ ಪ್ರದೇಶದ, 57596 ವಸತಿ ಪ್ರದೇಶಗಳಲ್ಲಿ ಪ್ರೌಢ ಶಾಲೆಗಳ ಸೌಕರ್ಯವಿದೆ. ಆದ್ದರಿಂದ 93.69% ಪ್ರವೇಶಾತಿ ಸಾಧಿಸಿದೆ.

ಈ ಕೆಳಗಿನ 22 ಜಿಲ್ಲೆಗಳ ಪ್ರತಿಯೊಂದೂ ವಸತಿ ಪ್ರದೇಶಗಳು ಪ್ರೌಢಶಾಲೆಗಳನ್ನು ಹೊಂದಿವೆ.

ಬಾಗಲಕೋಟೆ, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ಬೀದರ್, ಚಿಕ್ಕೋಡಿ, ಚಿಕ್ಕಬಳ್ಳಾಪುರ, ಬಿಜಾಪುರ, ಚಿತ್ರದುರ್ಗ, ಧಾರವಾಡ, ಮಂಡ್ಯ, ತುಮಕೂರು, ಗದಗ, ಕಲ್ಬುರ್ಗಿ, ಹಾವೇರಿ, ಕೋಲಾರ, ಕೊಪ್ಪಳ, ರಾಮನಗರ, ರಾಯಚೂರು, ವಿಜಯನಗರ ಮತ್ತು ಯಾದಗಿರಿ.

61473 ವಸತಿ ಪ್ರದೇಶಗಳಲ್ಲಿ ಒಟ್ಟು 3555 ವಸತಿ ಪ್ರದೇಶಗಳು ನಿಯಮಾನುಸಾರ ಪ್ರೌಢಶಾಲೆಗಳನ್ನು ಹೊಂದುವುದಕ್ಕೆ ಅರ್ಹವಾಗಲಿಲ್ಲ. ಈ ವಸತಿಪ್ರದೇಶಗಳು ಈ ಕೆಳಗಿನ 13 ಜಿಲ್ಲೆಗಳಾಗಿರುತ್ತವೆ.

ಬೆಳಗಾವಿ, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ದಾವಣಗೆರೆ, ಹಾಸನ, ಕೊಡಗು, ಮೈಸೂರು, ಶಿವಮೊಗ್ಗ, ಮಧುಗಿರಿ, ಉಡುಪಿ, ಶಿರಸಿ ಮತ್ತು ಉತ್ತರ ಕನ್ನಡ.

**2023–24ರಲ್ಲಿ ರಾಜ್ಯದಲ್ಲಿ ಇರುವ ಶಾಲಾ ಸೌಲಭ್ಯಕ್ಕೆ ಅವಕಾಶ ಕುರಿತ ಸಂಕ್ಷಿಪ್ತ ವರದಿ**

| ಕ್ರ. ಸಂ. | ವಿವರ | ಕಿ.ಪ್ರಾ.ಶಾ. ಹಂತ | ಹಿ.ಪ್ರಾ.ಶಾ. ಹಂತ | ಪ್ರೌ.ಶಾ ಹಂತ | ಒಟ್ಟು |
|---|---|---|---|---|---|
| 1 | ಒಟ್ಟು ಜಿಲ್ಲೆಗಳು (ಕಂದಾಯ) | 35 | 35 | 35 | – |
| 2 | ಶಾಲಾ ಸೌಲಭ್ಯಇರುವ ವಸತಿ ಪ್ರದೇಶಗಳು (30 ಜಿಲ್ಲೆಗಳು) | 61473 | 61473 | 61473 | 61473 |
| | ಸೌಲಭ್ಯ ಅವಕಾಶ ಇರುವ ಶೇಕಡಾವಾರು ವಸತಿಪ್ರದೇಶಗಳು (30 ಜಿಲ್ಲೆಗಳು) | 58525<br>95.20% | 56344<br>91.65% | 57596<br>93.69% | –<br>– |
| 3 | ಎಲ್ಲಾ ವಸತಿ ಪ್ರದೇಶಗಳಲ್ಲೂ ಸೌಲಭ್ಯಇರುವ ಜಿಲ್ಲೆಗಳು | 18 | 18 | 18 | |

| | | | | | |
|---|---|---|---|---|---|
| 4 | ಎಲ್ಲಾ ವಸತಿಪ್ರದೇಶಗಳಲ್ಲೂ ಸೌಲಭ್ಯಇಲ್ಲದ ಜಿಲ್ಲೆಗಳು | 17 | 17 | 17 | - |
| 5 | ಎ) ಶಾಲೆಗಳು ಇರಬೇಕಾದ ಅರ್ಹತೆ ಇರುವ ವಸತಿ ಪ್ರದೇಶಗಳ ಸಂಖ್ಯೆ | 03 | 04 | 19 | – |
| | ಬಿ) ಅರ್ಹತೆ ಇರುವ ವಸತಿ ಪ್ರದೇಶಗಳ ಸಂಖ್ಯೆ | 00 | 00 | 25 | – |
| | ಸಿ) 5(ಬಿ)ಯಲ್ಲಿ ನಮೂದಿಸಿದ ವಸತಿಪ್ರದೇಶಗಳಲ್ಲಿ ಇರುವ ಮಕ್ಕಳ ಸಂಖ್ಯೆ | 12219 | 8709 | 1536 | 22464 |
| | ಡಿ) ತೆರೆದ/ ಮೇಲ್ದರ್ಜೆಗೇರಿಸಿದ ಶಾಲೆಗಳ ಸಂಖ್ಯೆ | 00 | 00 | 08 | – |
| 6 | ಎ) ಸೇವೆ ಇಲ್ಲದ, ಆದರೆ ಶಾಲೆಗಳನ್ನು ತೆರೆಯಲು ಅರ್ಹತೆ ಇಲ್ಲದ ಜಿಲ್ಲೆಗಳು | 15 | 18 | 25 | – |
| | ಬಿ) ಸೇವೆ ಇಲ್ಲದ ಆದರೆ ಕಿ.ಪ್ರಾ.ಶಾ. ತೆರೆಯಲು ಅರ್ಹತೆ ಇಲ್ಲದ ವಸತಿಪ್ರದೇಶಗಳು | 2578 | 2860 | 25 | – |
| | ಸಿ) 6(ಬಿ)ಯಲ್ಲಿ ನಮೂದಿಸಿದ ವಸತಿಪ್ರದೇಶಗಳಲ್ಲಿ ಇರುವ ಮಕ್ಕಳ ಸಂಖ್ಯೆ | 18782 | | 2108 | 20890 |
| 7 | ಸಾರಿಗೆ ಸೌಲಭ್ಯ ಅಗತ್ಯ ಇರುವ ಮಕ್ಕಳ ಸಂಖ್ಯೆ | 18782 | | 2108 | 20890 |

**ರಾಜ್ಯದಲ್ಲಿ ಶಾಲಾ ಸೌಲಭ್ಯಗಳು:**

ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಸಂಘಟನೆಯಲ್ಲಿ ಶಾಲೆಯೇ ಮೂಲ ಘಟಕವಾಗಿದೆ. ಜಿಲ್ಲಾ ಶಿಕ್ಷಣ ಮಾಹಿತಿ ವ್ಯವಸ್ಥೆ (ಯುಡೈಸ್2023–24) ಪ್ರಕಾರ ರಾಜ್ಯದಲ್ಲಿ 83354 ಶಾಲೆಗಳಿವೆ. ಇವುಗಳಲ್ಲಿ 26396 ಕಿರಿಯ ಪ್ರಾಥಮಿಕ ಶಾಲೆಗಳು, 32951 ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು 24007 ಮಾಧ್ಯಮಿಕ ಶಾಲೆಗಳು (ಹೈಸ್ಕೂಲ್‌ಗಳು).

**ರಾಜ್ಯದಲ್ಲಿ 8ನೇ ತರಗತಿಯ ಶಾಲಾ ಲಭ್ಯತೆಯು ಈ ಕೆಳಗಿನಂತಿದೆ.**

- 1 ರಿಂದ 8ನೇ ತರಗತಿಗಳನ್ನು ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ. (Higher Primary Schools)
- 1 ರಿಂದ 10ನೇ ತರಗತಿಗಳನ್ನು ಹೊಂದಿರುವ ಪ್ರೌಢಶಾಲೆಗಳಲ್ಲಿ.(Secondary Schools)
- 8 ರಿಂದ 10ನೇ ತರಗತಿಗಳನ್ನು ಮಾತ್ರ ಹೊಂದಿರುವ ಪ್ರೌಢಶಾಲೆಗಳಲ್ಲಿ.(Secondary Schools)
- 1 ರಿಂದ 12ನೇ ತರಗತಿಗಳನ್ನು ಹೊಂದಿರುವ ಹಿರಿಯ ಪ್ರೌಢ ಶಾಲೆಗಳಲ್ಲಿ (Higher Secondary Schools)

1 ರಿಂದ 7ನೇ ತರಗತಿಗಳು ಇರುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳು ಹತ್ತಿರದ ಪ್ರೌಢ/ಹಿರಿಯ ಶಾಲೆಗಳಿಗೆ ಅಥವಾ ಹತ್ತಿರದ 8ನೇ ತರಗತಿ ಉನ್ನತೀಕರಿಸಿರುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿಗೆ ದಾಖಲಾತಿಯನ್ನು ಪಡೆಯಬೇಕಾಗುತ್ತದೆ.

**2023–24 ಶಾಲಾ ನಿರ್ವಹಣೆಯ ಆಧಾರದ ಮೇಲೆ ಶಾಲೆಗಳ ಲಭ್ಯತೆ (ಶೇಕಡವಾರು ಮಾಹಿತಿ)**

| ನಿರ್ವಹಣೆ | ಕಿರಿಯ ಪ್ರಾಥಮಿಕ ಶಾಲೆಗಳು | | ಹಿರಿಯ ಪ್ರಾಥಮಿಕ ಶಾಲೆಗಳು | | ಒಟ್ಟು ಪ್ರಾಥಮಿಕ ಶಾಲೆಗಳು | | ಪ್ರೌಢ ಶಾಲೆಗಳು | | ಒಟ್ಟು ಶಾಲೆಗಳು | |
|---|---|---|---|---|---|---|---|---|---|---|
| | ಸಂಖ್ಯೆ | ಶೇಕಡ | ಸಂಖ್ಯೆ | ಶೇಕಡ | ಸಂಖ್ಯೆ | ಶೇಕಡ | ಸಂಖ್ಯೆ | ಶೇಕಡ | ಸಂಖ್ಯೆ | ಶೇಕಡ |
| ಶಿಕ್ಷಣ ಇಲಾಖೆ | 22341 | 84.64 | 22802 | 67.71 | 45143 | 75.15 | 4850 | 20.83 | 49993 | 59.98 |
| ಸಮಾಜಕಲ್ಯಾಣ ಹಾಗೂ ಸ್ಥಳೀಯ ಸಂಸ್ಥೆ | 45 | 0.17 | 22 | 0.07 | 67 | 0.11 | 521 | 2.24 | 588 | 0.71 |
| ಅನುದಾನಿತ | 273 | 1.03 | 2919 | 8.67 | 3192 | 5.31 | 4637 | 19.92 | 7829 | 9.39 |
| ಅನುದಾನರಹಿತ | 3589 | 13.60 | 7866 | 23.36 | 11455 | 19.07 | 12420 | 53.35 | 23875 | 28.64 |
| ಇತರೆ ಹಾಗೂ ಕೇಂದ್ರಿಯ | 148 | 0.56 | 67 | 0.20 | 215 | 0.36 | 854 | 3.67 | 1069 | 1.28 |
| **ಒಟ್ಟು** | **26396** | **100** | **33676** | **100.00** | **60072** | **100.00** | **23282** | **100.00** | **83354** | **100.00** |

**ಮೂಲ: ಯು–ಡೈಸ್ 2023–24**

**ಮೇಲಿನ ಕೋಷ್ಟಕದಿಂದ ಈ ಅಂಶಗಳನ್ನು ಗಮನಿಸಬಹುದು.**

- ಪ್ರತಿ 4 ಪ್ರಾಥಮಿಕ ಶಾಲೆಗಳ ಪೈಕಿ 3 ಪ್ರಾಥಮಿಕ ಶಾಲೆಗಳು ಸರಕಾರಿ ಶಾಲೆಗಳು ಅಥವಾ ಸರಕಾರದ ವಿವಿಧ ಇಲಾಖೆಗಳಿಂದ ನಡೆಸಲ್ಪಡುವ ಶಾಲೆಗಳಾಗಿವೆ.
- ಒಟ್ಟು ಪ್ರಾಥಮಿಕ ಶಾಲೆಗಳಲ್ಲಿ, ಶೇಕಡ 86.40 ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು ಹಾಗೂ ಶೇಕಡ 76.64 ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಸರ್ಕಾರಿ ಅಥವಾ ಸರ್ಕಾರದ ವಿವಿಧ ಇಲಾಖೆಗಳಿಂದ ನಡೆಸಲ್ಪಟ್ಟಿರುವ ಶಾಲೆಗಳಾಗಿವೆ.
- ಶೇಕಡ 84.64 ರಷ್ಟು ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು ಶೇಕಡ 67.71ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳ ನಿರ್ವಹಣೆಯು ಶಿಕ್ಷಣ ಇಲಾಖೆಯಿಂದ ಆಗುತ್ತದೆ.
- ಪ್ರೌಢ ಶಾಲಾ ಹಂತದಲ್ಲಿ ಮಾತ್ರ ಖಾಸಗಿ ಸಂಸ್ಥೆಗಳ ಪಾಲುಗೊಳ್ಳುವಿಕೆಯನ್ನು ನೋಡಬಹುದು. ಆದಾಗ್ಯೂ ಶೇಕಡಾ 46.65 ಕ್ಕೂ ಹೆಚ್ಚಿನ ಪ್ರೌಢಶಾಲೆಗಳು ಸರಕಾರಿ ಅಥವಾ ಸರ್ಕಾರದ ವಿವಿಧ ಇಲಾಖೆಗಳಿಂದ ನಡೆಯುತ್ತಿರುವುದನ್ನು ಗಮನಿಸಬಹುದು.

**, ವಾರ್ಷಿಕ ಶಾಲಾ ಅನುದಾನ**

- ಶಾಲಾ ಅನುದಾನವನ್ನು ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮಾತ್ರ ನೀಡಲಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ಮಕ್ಕಳ ದಾಖಲಾತಿಯನ್ನು ಆಧರಿಸಿ ಶಾಲಾನುದಾನವನ್ನು ಬಿಡುಗಡೆ ಮಾಡಲಾಗಿದೆ. ದಾಖಲಾತಿ ಆಧರಿಸಿ ಬಿಡುಗಡೆ ಮಾಡಲಾದ ಶಾಲಾನುದಾನದ ವಿವರ ಈ ಕೆಳಕಂಡಂತಿದೆ.

## ಪ್ರಾಥಮಿಕ ಶಾಲೆಗಳಿಗೆ ಬಿಡುಗಡೆಯಾದ ಶಾಲಾನುದಾನದ ವಿವರ:

(ರೂ. ಲಕ್ಷಗಳಲ್ಲಿ)

| ಮಂಜೂರಾದ ಅನುದಾನ | | | | | ಬಿಡುಗಡೆಯಾದ ಅನುದಾನ | |
|---|---|---|---|---|---|---|
| ಕ್ರ.ಸಂ | ವಿದ್ಯಾರ್ಥಿಗಳ ಸಂಖ್ಯೆ | ಶಾಲೆಗಳ ಸಂಖ್ಯೆ | ಘಟಕ ವೆಚ್ಚ | ಮಂಜೂರಾದ ಅನುದಾನ | ಶಾಲೆಗಳ ಸಂಖ್ಯೆ | ಬಿಡುಗಡೆಯಾದ ಅನುದಾನ |
| 1 | ದಾಖಲಾತಿ 1 ರಿಂದ 30 | 15779 | 7,500 | 1183.43 | 15779 | 1180.38 |
| 2 | ದಾಖಲಾತಿ 31 ರಿಂದ 100 | 15042 | 18,750 | 2820.38 | 15041 | 2817.31 |
| 3 | ದಾಖಲಾತಿ 101 ರಿಂದ 250 | 8684 | 37,500 | 3256.50 | 8625 | 3232.87 |
| 4 | ದಾಖಲಾತಿ 251 ರಿಂದ 1000 | 3083 | 56,250 | 1734.19 | 3023 | 1700.06 |
| 5 | ದಾಖಲಾತಿ 1000 ಕ್ಕಿಂತ ಹೆಚ್ಚು | 5 | 75,000 | 3.75 | 5 | 3.75 |
| | **ಒಟ್ಟು** | **42593** | | **8998.24** | **42473** | **8934.38** |

## ಶಾಲಾನುದಾನವನ್ನು ಬಳಸಿಕೊಂಡು ಶಾಲೆಗೆ ಬಣ್ಣ ಬಳಿದಿರುವುದು ಮತ್ತು ಶೌಚಾಲಯ ಸ್ವಚ್ಚತೆ – ಕೊಡಗು ಜಿಲ್ಲೆ





## ಸೆಕೆಂಡರಿ ಶಾಲೆಗಳಿಗೆ ಬಿಡುಗಡೆಯಾದ ಶಾಲಾನುದಾನದ ವಿವರ:

(ರೂ.ಲಕ್ಷಗಳಲ್ಲಿ)

| ಮಂಜೂರಾದ ಅನುದಾನ | | | | | ಬಿಡುಗಡೆಯಾದ ಅನುದಾನ | |
|---|---|---|---|---|---|---|
| ಕ್ರ.ಸಂ | ವಿದ್ಯಾರ್ಥಿಗಳ ಸಂಖ್ಯೆ | ಶಾಲೆಗಳ ಸಂಖ್ಯೆ | ಘಟಕ ವೆಚ್ಚ | ಮಂಜೂರಾದ ಅನುದಾನ | ಶಾಲೆಗಳ ಸಂಖ್ಯೆ | ಬಿಡುಗಡೆಯಾದ ಅನುದಾನ |
| 1 | ದಾಖಲಾತಿ 1 ರಿಂದ 30 | 59 | 7500.00 | 4.43 | 59 | 4.43 |
| 2 | ದಾಖಲಾತಿ 31 ರಿಂದ 100 | 1132 | 18750.00 | 212.25 | 1132 | 212.25 |
| 3 | ದಾಖಲಾತಿ 101 ರಿಂದ 250 | 2174 | 37500.00 | 815.25 | 2174 | 815.25 |
| 4 | ದಾಖಲಾತಿ 251 ರಿಂದ 1000 | 1823 | 56250.00 | 1025.44 | 1814 | 1020.38 |
| 5 | ದಾಖಲಾತಿ 1000 ಕ್ಕಿಂತ ಹೆಚ್ಚು | 119 | 75000.00 | 89.25 | 119 | 89.25 |
| | **ಒಟ್ಟು** | **5307** | | **2146.61** | **5298** | **2141.55** |

ಶಾಲಾನುದಾನವನ್ನು ಶಾಲೆಗೆ ಅಗತ್ಯವಾದ ಸಾದಿಲ್ವಾರು ಖರೀದಿ, ಶಾಲಾ ದಾಖಲೆ ಪುಸ್ತಕಗಳ ಖರೀದಿ, ಶಾಲಾಭಿವೃದ್ಧಿಯೋಜನೆ ಸಿದ್ಧಪಡಿಸಲು ಹಾಗೂ ತರಗತಿಯಲ್ಲಿ ಪಾಠ ಬೋಧನಾ ಸಂದರ್ಭದಲ್ಲಿ ಅಗತ್ಯವಿರುವ ಬೋಧನೋಪಕರಣಗಳ ತಯಾರಿಸಲು ಉಪಯೋಗಿಸಲಾಗುವುದು.

2023–24ನೇ ಸಾಲಿನಲ್ಲಿ ಪ್ರಾಥಮಿಕ ಶಾಲೆಗಳಿಗೆ ರೂ. **8998.24** ಲಕ್ಷ ಶಾಲಾ ಅನುದಾನ ಮಂಜೂರಾಗಿದ್ದು, ಅನುದಾನ ರೂ. **8934.37** ಲಕ್ಷವನ್ನು ಶಾಲೆಗಳಿಗೆ ಬಿಡುಗಡೆ ಮಾಡಲಾಗಿದೆ ಹಾಗೂ ಪ್ರೌಢಶಾಲೆಗಳಿಗೆ ರೂ. **2146.61** ಲಕ್ಷ ಶಾಲಾ ಅನುದಾನ ಮಂಜೂರಾಗಿದ್ದು, ರೂ. **2141.55** ಲಕ್ಷವನ್ನು ಶಾಲೆಗಳಿಗೆ ಬಿಡುಗಡೆ ಮಾಡಲಾಗಿದೆ.

### 2023–24ನೇ ಸಾಲಿನ ಶಾಲಾನುದಾನದ ಜಿಲ್ಲಾವಾರು ಅನುಮೋದನೆ ಹಾಗೂ ಸಾಧನೆ ಕುರಿತ ಮಾಹಿತಿ

| ಕ್ರ.ಸಂ | ಜಿಲ್ಲೆ | ಪ್ರಾಥಮಿಕ ಶಾಲೆಗಳ ಶಾಲಾನುದಾನ (ಲಕ್ಷಗಳಲ್ಲಿ) | | ಸೆಕೆಂಡರಿ ಶಾಲೆಗಳ ಶಾಲಾನುದಾನ (ಲಕ್ಷಗಳಲ್ಲಿ) | |
|---|---|---|---|---|---|
| | | ಅನುಮೋದನೆ | ಬಿಡುಗಡೆ | ಅನುಮೋದನೆ | ಬಿಡುಗಡೆ |
| 1 | ಬಾಗಲಕೋಟೆ | 352.84 | 351.71 | 99.26 | 98.14 |
| 2 | ಬಳ್ಳಾರಿ | 181.69 | 181.69 | 59.33 | 58.76 |
| 3 | ಬೆಳಗಾವಿ | 377.48 | 373.91 | 69.38 | 69.38 |
| 4 | ಬೆಳಗಾವಿ ಚಿಕ್ಕೋಡಿ | 468.04 | 468.04 | 97.31 | 97.31 |
| 5 | ಬೆಂಗಳೂರು ಗ್ರಾಮಾಂತರ | 155.70 | 154.39 | 30.19 | 30.19 |
| 6 | ಬೆಂಗಳೂರು ಉತ್ತರ | 129.53 | 128.59 | 30.94 | 30.94 |
| 7 | ಬೆಂಗಳೂರು ದಕ್ಷಿಣ | 221.25 | 220.13 | 44.33 | 44.33 |
| 8 | ಬೀದರ್ | 269.03 | 269.03 | 67.84 | 67.84 |

| | | | | | |
|---|---|---|---|---|---|
| 9 | ಚಾಮರಾಜನಗರ | 147.26 | 145.58 | 41.81 | 41.81 |
| 10 | ಚಿಕ್ಕಬಳ್ಳಾಪುರ | 200.59 | 189.98 | 44.33 | 44.33 |
| 11 | ಚಿಕ್ಕಮಂಗಳೂರು | 188.51 | 185.33 | 46.95 | 46.95 |
| 12 | ಚಿತ್ರದುರ್ಗ | 326.96 | 325.84 | 47.89 | 47.33 |
| 13 | ದಕ್ಷಿಣ ಕನ್ನಡ | 196.31 | 193.13 | 64.24 | 63.68 |
| 14 | ದಾವಣಗೆರೆ | 237.83 | 235.39 | 53.51 | 53.51 |
| 15 | ಧಾರವಾಡ | 249.49 | 247.61 | 57.19 | 57.19 |
| 16 | ಗದಗ | 183.23 | 182.29 | 61.28 | 61.28 |
| 17 | ಹಾಸನ | 286.35 | 282.79 | 73.76 | 73.76 |
| 18 | ಹಾವೇರಿ | 318.11 | 316.05 | 72.00 | 71.44 |
| 19 | ಕಲ್ಬುರ್ಗಿ | 453.49 | 453.49 | 136.95 | 136.95 |
| 20 | ಕೊಡಗು | 62.29 | 60.60 | 14.18 | 14.18 |
| 21 | ಕೋಲಾರ | 242.63 | 242.63 | 49.69 | 49.69 |
| 22 | ಕೊಪ್ಪಳ | 296.10 | 296.10 | 92.51 | 92.51 |
| 23 | ಮಂಡ್ಯ | 240.98 | 238.73 | 71.25 | 71.25 |
| 24 | ಮೈಸೂರು | 354.71 | 350.96 | 105.64 | 105.64 |
| 25 | ರಾಯಚೂರು | 412.31 | 410.06 | 110.63 | 110.63 |
| 26 | ರಾಮನಗರ | 171.04 | 170.10 | 41.03 | 41.03 |
| 27 | ಶಿವಮೊಗ್ಗ | 306.19 | 303.00 | 64.76 | 64.76 |
| 28 | ತುಮಕೂರು | 279.79 | 276.79 | 47.51 | 47.51 |
| 29 | ತುಮಕೂರು ಮಧುಗಿರಿ | 197.33 | 195.26 | 34.54 | 34.54 |
| 30 | ಉಡುಪಿ | 113.33 | 111.26 | 38.48 | 38.48 |
| 31 | ಉತ್ತರ ಕನ್ನಡ | 132.83 | 132.45 | 24.26 | 23.70 |
| 32 | ಉತ್ತರ ಕನ್ನಡ ಸಿರ್ಸಿ | 172.95 | 171.64 | 35.44 | 34.88 |
| 33 | ವಿಜಯನಗರ | 285.83 | 283.58 | 68.06 | 68.06 |
| 34 | ವಿಜಯಪುರ | 504.38 | 504.38 | 78.75 | 78.75 |
| 35 | ಯಾದಗಿರಿ | 281.93 | 281.93 | 71.44 | 70.88 |
| | | **8998.24** | **8934.38** | **2146.61** | **2141.55** |

**ದಾಖಲಾತಿ ವಿವರ:**

## ರಾಜ್ಯದಲ್ಲಿ 2023–24 ನೇ ಸಾಲಿನ 1 ರಿಂದ 10 ನೇ ತರಗತಿಯಲ್ಲಿ ದಾಖಲಾದ ಮಕ್ಕಳ ವಿವರ:

| ತರಗತಿ | ಶಿಕ್ಷಣ ಇಲಾಖೆ | | ಅನುದಾನಿತ | | ಅನುದಾನ ರಹಿತ | | ಇತರೆ (ಸಮಾಜ ಕಲ್ಯಾಣ+ಸ್ಥಳೀಯ ಸಂಸ್ಥೆಯ-ಕೇಂದ್ರಿಯ ಶಾಲೆಗಳು) | | Others | | ಒಟ್ಟು | | |
|---|---|---|---|---|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | Toral |
| ತರಗತಿ 1 | 190324 | 200814 | 31150 | 30095 | 290792 | 242157 | 1296 | 1142 | 2826 | 2574 | 516388 | 476782 | 993170 |
| ತರಗತಿ 2 | 220491 | 229327 | 34596 | 33326 | 271222 | 227908 | 1772 | 1585 | 3442 | 3121 | 531523 | 495267 | 1026790 |
| ತರಗತಿ 3 | 269402 | 274911 | 42836 | 40180 | 297723 | 244404 | 2462 | 2100 | 3477 | 3230 | 615900 | 564825 | 1180725 |
| ತರಗತಿ 4 | 229350 | 244371 | 34663 | 33747 | 271792 | 225342 | 2154 | 1825 | 3397 | 3210 | 541356 | 508495 | 1049851 |
| ತರಗತಿ 5 | 234633 | 248687 | 41185 | 38658 | 270877 | 224676 | 2507 | 2184 | 3495 | 3160 | 552697 | 517365 | 1070062 |
| ತರಗತಿ 6 | 228073 | 235426 | 45649 | 41285 | 263598 | 214508 | 20836 | 26250 | 9982 | 9223 | 568138 | 526692 | 1094830 |
| ತರಗತಿ 7 | 220620 | 221288 | 47402 | 40305 | 250956 | 205742 | 20496 | 25298 | 9603 | 9092 | 549077 | 501725 | 1050802 |
| ತರಗತಿ 8 | 176454 | 190996 | 108544 | 99256 | 234191 | 191353 | 21405 | 24961 | 10062 | 9230 | 550656 | 515796 | 1066452 |
| **ತರಗತಿ 1-8** | **1769347** | **1845820** | **386025** | **356852** | **2151151** | **1776090** | **72928** | **85345** | **46284** | **42840** | **4425735** | **4106947** | **8532682** |
| ತರಗತಿ 9 | 172896 | 177525 | 130529 | 121491 | 219204 | 182749 | 20154 | 25599 | 9864 | 9103 | 552647 | 516467 | 1069114 |
| ತರಗತಿ 10 | 159191 | 169791 | 118945 | 118101 | 200589 | 169900 | 17738 | 24642 | 8864 | 8551 | 505327 | 490985 | 996312 |
| **ತರಗತಿ 9-10** | **332087** | **347316** | **249474** | **239592** | **419793** | **352649** | **37892** | **50241** | **18728** | **17654** | **1057974** | **1007452** | **2065426** |
| **ತರಗತಿ 1-10** | **2101434** | **2193136** | **635499** | **596444** | **2570944** | **2128739** | **110820** | **135586** | **65012** | **60494** | **5483709** | **5114399** | **10598108** |

## 2013–14 ರಿಂದ 2023–24ರ ವರೆಗೆ ತರಗತಿವಾರು ದಾಖಲಾತಿಗಳು (ಎಲ್ಲಾ ವಿಧದ ಶಾಲೆಗಳಲ್ಲಿ)

| ತರಗತಿ | 2013–14 | 2014–15 | 2015–16 | 2016–17 | 2017–18 | 2018–19 | 2019–20 | 2020–21 | 2021–22 | 2022–23 | 2023–24 | Variation (decrease) in enrolment figures from the previous class to present class (2022-23 and 2023-24) |
|---|---|---|---|---|---|---|---|---|---|---|---|---|
| ತರಗತಿ 1 | 1133874 | 1136224 | 1133379 | 1109163 | 1076110 | 1127782 | 1081317 | 1001774 | 1186191 | 1026402 | 993170 | -33232 |
| ತರಗತಿ 2 | 1100735 | 1094982 | 1100095 | 1101605 | 1094650 | 1077610 | 1115865 | 1075699 | 1041492 | 1185327 | 1026790 | -158537 |
| ತರಗತಿ 3 | 1054947 | 10777112 | 1076006 | 1099874 | 1095342 | 1102743 | 1069009 | 1107127 | 1070692 | 1052563 | 1180725 | 128162 |
| ತರಗತಿ 4 | 1041413 | 1036186 | 1059128 | 1074298 | 1082229 | 1105053 | 1095510 | 1060884 | 1100556 | 1076399 | 1049851 | -26548 |
| ತರಗತಿ 5 | 1020737 | 1025255 | 1020431 | 1059480 | 1056503 | 1090682 | 1097827 | 1087346 | 1057032 | 1101464 | 1070062 | -31402 |
| ತರಗತಿ 6 | 999021 | 989279 | 991142 | 996314 | 1023177 | 1056407 | 1074504 | 1080399 | 1074042 | 1054616 | 1094830 | 40214 |
| ತರಗತಿ 7 | 1009367 | 991191 | 974135 | 987467 | 986859 | 1034878 | 1048699 | 1069425 | 1069335 | 1081708 | 1050802 | -30906 |
| ತರಗತಿ 8 | 962140 | 990048 | 958600 | 934386 | 949917 | 981551 | 1013242 | 1024512 | 1053279 | 1068432 | 1066452 | -1980 |
| **1 ರಿಂದ 8** | **8322234** | **18040277** | **8312916** | **8362587** | **8364787** | **8576706** | **8595973** | **8507166** | **8652619** | **8646911** | **8532682** | **-114229** |
| ತರಗತಿ 9 | 895975 | 1144039 | 916957 | 904899 | 910942 | 947844 | 959566 | 991402 | 1002256 | 1053579 | 1069114 | 15535 |
| ತರಗತಿ 10 | 788729 | 1081114 | 848142 | 897340 | 848795 | 852830 | 879467 | 927460 | 967838 | 974538 | 996312 | 21774 |
| 9 ರಿಂದ 10 | 1684704 | 2225153 | 1765099 | 1802239 | 1759737 | 1800674 | 1839033 | 1918862 | 1970094 | 2028117 | 2065426 | 37309 |
| **1 ರಿಂದ 10** | **10006938** | **20265430** | **10078015** | **10164826** | **10124524** | **10377380** | **10435006** | **10426028** | **10622713** | **10675028** | **10598108** | **-76920** |

**ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಹಂತದ ದಾಖಲಾತಿಗಳು:**

| **1 ರಿಂದ 8 ದಾಖಲಾತಿಗಳು** | | | | |
|---|---|---|---|---|
| ಎಲ್ಲಾ ಆಡಳಿತಗಳು | ಶಿಕ್ಷಣ ವಿಭಾಗ | ಅನುದಾನ | ಅನುದಾನ ರಹಿತ | ಇತರರು |
| 8532682 | 3615167 | 764749 | 3784743 | 240593 |
| ಅನುಪಾತಗಳು | 42.37 | 8.96 | 44.36 | 2.82 |
| **1 ರಿಂದ 7 ದಾಖಲಾತಿಗಳು** | | | | |
| ಎಲ್ಲಾ ಆಡಳಿತಗಳು | ಶಿಕ್ಷಣ ವಿಭಾಗ | ಅನುದಾನ | ಅನುದಾನರಹಿತ | ಇತರರು |
| 7466230 | 3247717 | 535077 | 3501697 | 181739 |
| ಅನುಪಾತಗಳು | 43.50 | 7.17 | 46.90 | 2.43 |
| **1 ರಿಂದ 5 ದಾಖಲಾತಿಗಳು** | | | | |
| ಎಲ್ಲಾ ಆಡಳಿತಗಳು | ಶಿಕ್ಷಣ ವಿಭಾಗ | ಅನುದಾನ | ಅನುದಾನ ರಹಿತ | ಇತರರು |
| 5320598 | 2342310 | 360436 | 2566893 | 50959 |
| ಅನುಪಾತಗಳು | 44.02 | 6.77 | 48.24 | 0.96 |

**ಮೂಲ: ಯು–ಡೈಸ್2023–24**

**ರಾಜ್ಯದಲ್ಲಿ ಸರ್ಕಾರಿ ವಲಯದ ಒಂದನೇ ತರಗತಿಯ ಶಾಲೆಗಳಲ್ಲಿ ಸಾಮಾಜಿಕ ವರ್ಗಗಳಿಂದ ನಡೆದ ದಾಖಲಾತಿಗಳ ಸಂಬಂಧಿತ ಪಾಲು: 2023–24.**

| ಆಡಳಿತಗಳು | ಪ.ಜಾ | ಪ.ಪಂ | ಇತರ ಹಿಂದುಳಿದ ವರ್ಗಗಳು(ಒ.ಬಿ.ಸಿ) | ಸಾಮಾನ್ಯ | ಎಲ್ಲಾ ಮಕ್ಕಳು |
|---|---|---|---|---|---|
| ಎಲ್ಲಾ ಆಡಳಿತಗಳು | 177160 | 79547 | 617975 | 118488 | 993170 |
| ಡಿ.ಒ.ಇ | 102559 | 51286 | 231471 | 5822 | 391138 |
| ಶೇಕಡ | 26.22 | 13.11 | 59.18 | 1.49 | 100 |
| ಖಾಸಗಿ ಅನುದಾನಿತ | 12825 | 4377 | 41815 | 2228 | 61245 |
| ಶೇಕಡ | 20.94 | 7.15 | 68.27 | 3.64 | 100 |
| ಖಾಸಗಿ ಅನುದಾನರಹಿತ | 59897 | 22616 | 341800 | 108636 | 532949 |
| ಶೇಕಡ | 11.24 | 4.24 | 64.13 | 20.38 | 100 |
| ಇತರರು | 1879 | 1268 | 2889 | 1802 | 7838 |
| ಶೇಕಡ | 23.97 | 16.18 | 36.86 | 22.99 | 100 |

ವಿವಿಧ ಶಾಲಾ ಆಡಳಿತಗಳ ಅಡಿಯಲ್ಲಿ ತರಗತಿ 1ಕ್ಕೆ ಸಾಮಾಜಿಕ ವರ್ಗಗಳಿಂದ ಶಾಲೆಗಳಲ್ಲಿ ದಾಖಲಾತಿಯಾದ ಮಕ್ಕಳನ್ನು ಈ ಮೇಲಿನ ಕೋಷ್ಟಕದಲ್ಲಿ ತೋರಿಸಲಾಗಿದೆ. ಇದರಿಂದ ಎಸ್.ಸಿ, ಎಸ್.ಟಿ, ಓ.ಬಿ.ಸಿ (ಮುಸ್ಲಿಂ ಸೇರಿದಂತೆ) ಸಾಮಾನ್ಯ ವರ್ಗದ ಮಕ್ಕಳ ದಾಖಲಾತಿಯ ಶೇಕಡವಾರು ಪ್ರಮಾಣವನ್ನು ನಮೂದಿಸಲಾಗಿದೆ.

ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಸಾಮಾನ್ಯ ವರ್ಗದ ಮಕ್ಕಳ ಗಣನೀಯವಾದ ದಾಖಲಾತಿ ಗಮನಿಸಿದರೆ ಸಮಾಜದ ಯಾವ ವರ್ಗ ಬೋಧನಾ ಶುಲ್ಕ ಮತ್ತು ನಿರ್ವಹಣಾ ಶುಲ್ಕದ ಹೊರೆಯನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದಾರೋ ಅವರು ತಮ್ಮ ಮಕ್ಕಳನ್ನು ಖಾಸಗಿ ಸಂಸ್ಥೆಗಳಲ್ಲಿ ನೊಂದಾಯಿಸಿಕೊಳ್ಳುತ್ತಾರೆ ಎಂಬುದು ತಿಳಿದುಬರುತ್ತದೆ.

**ಶಾಲಾ ದಾಖಲಾತಿಗಳಲ್ಲಿ ಸಮಗ್ರ ಶಿಕ್ಷಣದ ಪಾತ್ರ**

ಶಾಲಾ ದಾಖಲಾತಿಯನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳು:

a) ಮನೆ ಮನೆ ಸಮೀಕ್ಷೆಯನ್ನು ಮಾಡಿ, ಶಾಲೆಗೆ ಹೋಗದ ಹಲವು ಮಕ್ಕಳನ್ನು ಗುರುತಿಸಲಾಗಿದೆ. ಅಂತಹ ಮಕ್ಕಳನ್ನು ಶಾಲೆಗೆ ದಾಖಲಿಸಿ, ವಿಶೇಷ ತರಬೇತಿಗಳನ್ನು ಕೊಡಲಾಗಿದೆ. ಇದರಿಂದ ಮಕ್ಕಳು ಶಾಲಾ ಶಿಕ್ಷಣವನ್ನು ಶಾಲೆಗಳಲ್ಲಿ ಮುಂದುವರೆಸಬಹುದು.

b) ಎಸ್.ಡಿ.ಎಂ.ಸಿಯ ಸಹಯೋಗದೊಂದಿಗೆ ಶಾಲಾ ಶಿಕ್ಷಕರು ಹಾಗೂ ಶಾಲಾ ಮುಖ್ಯೋಪಾಧ್ಯಾಯರು ಪ್ರತಿ ವರ್ಷ ಜೂನ್ ತಿಂಗಳಿನಲ್ಲಿ ಶಾಲೆಗೆ ದಾಖಲಾಗದ ಮಕ್ಕಳನ್ನು ಗುರುತಿಸಿ ಅವರ ಓದುವ ಸಾಮರ್ಥ್ಯ ಮತ್ತು ವಯಸ್ಸಿಗೆ ತಕ್ಕಂತೆ ಶಾಲೆಗೆ ದಾಖಲು ಮಾಡಿಕೊಳ್ಳಬಹುದು.

c) ಕಿರಿಯ ಪ್ರಾಥಮಿಕ ಶಾಲೆಗಳು ಶಾಲೆಯಿಂದ 1 ಕಿ.ಮೀ ದೂರ, ಹಿರಿಯ ಪ್ರಾಥಮಿಕ ಶಾಲೆಗಳು ಶಾಲೆಯಿಂದ 3 ಕಿ.ಮೀ ದೂರವಿರುವ ಮತ್ತು ಸೆಕೆಂಡರಿ ಶಾಲೆಗಳು ಶಾಲೆಯಿಂದ 5 ಕಿ.ಮೀ ದೂರವಿರುವ ಶಾಲಾ ಮಕ್ಕಳಿಗೆ ಸಾರಿಗೆ ಭತ್ಯೆ ನೀಡಲಾಗಿದೆ.

d) ನಿರ್ದಿಷ್ಟ ವರ್ಗದ ಮಕ್ಕಳಾದ ಅನಾಥ ಮಕ್ಕಳು, ಹಿರಿಯರ ರಕ್ಷಣೆಯಲ್ಲಿ ಇಲ್ಲದ ಮಕ್ಕಳು ಮತ್ತು ನಕ್ಸಲ್ ಪೀಡಿತ ಪ್ರದೇಶಗಳಲ್ಲಿನ ಮಕ್ಕಳಿಗೆ ನಿರ್ದಿಷ್ಟ ವಸತಿ ಶಾಲೆಗಳ ಮೂಲಕ ವಸತಿ ಮತ್ತು ಶಿಕ್ಷಣದ ವ್ಯವಸ್ಥೆಯನ್ನು ಒದಗಿಸಲಾಗಿದೆ.

e) ಶಾಲೆಗಳಿಗೆ ಮಕ್ಕಳ ಮರು–ಪ್ರವೇಶವನ್ನು ಸುಗಮಗೊಳಿಸುವ ಪರ್ಯಾಯ ಶಾಲಾ ತಂತ್ರಗಳು ಶಾಲೆಗಳಿಗೆ ಮಕ್ಕಳ ಗರಿಷ್ಟ ದಾಖಲಾತಿಯ ಕಳವಳಗಳನ್ನು ನೇರವಾಗಿ ಪರಿಹರಿಸುವ ತಂತ್ರಗಳಾಗಿದೆ.

# ಆದರ್ಶ ವಿದ್ಯಾಲಯ (ಮಾದರಿ ಶಾಲೆ)




## (ಅ) ಆದರ್ಶ ವಿದ್ಯಾಲಯ ಶಾಲೆಗಳ ಪರಿಚಯ:

ಈ ಕಾರ್ಯಕ್ರಮದಡಿ 2010–11ನೇ ಸಾಲಿನಿಂದ ಶೈಕ್ಷಣಿಕವಾಗಿ ಹಿಂದುಳಿದ 74 ಬ್ಲಾಕುಗಳಲ್ಲಿ ಆದರ್ಶ ವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ. ಆದರ್ಶ ವಿದ್ಯಾಲಯಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತಿದ್ದು, ಆಂಗ್ಲ ಭಾಷೆಯನ್ನು ಮೊದಲ ಭಾಷೆಯಾಗಿ ಬೋಧಿಸಲಾಗುತ್ತಿದೆ.

ಎಲ್ಲಾ 74 ಆದರ್ಶ ವಿದ್ಯಾಲಯಗಳು ಪೂರ್ಣ ಪ್ರಮಾಣದ ಮೂಲಭೂತ ಸೌಕರ್ಯಗಳನ್ನು ಹೊಂದಿವೆ ಹಾಗು ಎಲ್ಲಾ ಶಾಲೆಗಳು ಪ್ರಸ್ತುತ 6ನೇ ತರಗತಿಯಿಂದ 10 ನೇ ತರಗತಿಯ ವರೆಗೆ ಶಿಕ್ಷಣ ನೀಡುತ್ತಿವೆ.

2016–17ನೇ ಸಾಲಿನ ವರೆಗೆ ಆದರ್ಶ ವಿದ್ಯಾಲಯಗಳ 6 ರಿಂದ 10ನೇ ತರಗತಿಗಳಿಗೆ ಕರ್ನಾಟಕ ರಾಜ್ಯ ಪಠ್ಯಕ್ರಮ/ ಪಠ್ಯಪುಸ್ತಕಗಳನ್ನು ಅನುಸರಿಸಲಾಗುತ್ತಿದ್ದು, ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ಇಡಿ 22 ಎಂಸಿಡಿ 2017 ಬೆಂಗಳೂರು ದಿನಾಂಕ: 05/04/2017ರನ್ವಯ 2017–18ನೇ ಸಾಲಿನಲ್ಲಿ 6ನೇ ತರಗತಿಗೆ ಎನ್.ಸಿ.ಇ.ಆರ್.ಟಿ. ಪಠ್ಯಪುಸ್ತಕಗಳನ್ನು ಪರಿಚಯಿಸಲಾಗಿದ್ದು, ಕ್ರಮೇಣ 10ನೇ ತರಗತಿಯ ವರೆಗೆ ವಿಸ್ತರಿಸಲಾಗಿದೆ. ಪ್ರಸ್ತುತ 04 ವಿಷಯಗಳು (ಇಂಗ್ಲೀಷ್ ಭಾಷೆ, ಹಿಂದಿ, ಗಣಿತ ಮತ್ತು ವಿಜ್ಞಾನ) ಎನ್.ಸಿ.ಇ.ಆರ್.ಟಿ ಮತ್ತು 02 ವಿಷಯಗಳು (ಭಾಷೆ ಕನ್ನಡ ಮತ್ತು ಸಮಾಜ ವಿಜ್ಞಾನ) ರಾಜ್ಯ ಪಠ್ಯಕ್ರಮವನ್ನು ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತಿದೆ. 10ನೇ ತರಗತಿಯ ಪರೀಕ್ಷೆಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ವತಿಯಿಂದ ನಡೆಸಲಾಗುತ್ತಿದೆ.

1. ಪ್ರಥಮ ಭಾಷೆ – ಇಂಗ್ಲಿಷ್ : ಎನ್.ಸಿ.ಇ.ಆರ್.ಟಿ ಪಠ್ಯಕ್ರಮ
2. ಮೂರನೇ ಭಾಷೆ – ಹಿಂದಿ : ಎನ್.ಸಿ.ಇ.ಆರ್.ಟಿ ಪಠ್ಯಕ್ರಮ
3. ವಿಜ್ಞಾನ : ಎನ್.ಸಿ.ಇ.ಆರ್.ಟಿ ಪಠ್ಯಕ್ರಮ
4. ಗಣಿತ : ಎನ್.ಸಿ.ಇ.ಆರ್.ಟಿ ಪಠ್ಯಕ್ರಮ
5. ದ್ವಿತೀಯ ಭಾಷೆ (ಕನ್ನಡ) : ರಾಜ್ಯ ಪಠ್ಯಕ್ರಮ
6. ಸಮಾಜ ವಿಜ್ಞಾನ : ರಾಜ್ಯ ಪಠ್ಯಕ್ರಮ

ಈ ಶಾಲೆಗಳು ಭೌಗೋಳಿಕ ಕ್ಷೇತ್ರದ ಇತರ ಶಾಲೆಗಳಿಗಿಂತ ಶ್ರೇಷ್ಠ ಶಾಲೆಗಳಾಗಿ ಕಾರ್ಯನಿರ್ವಹಿಸುತ್ತಿವೆ.

**(ಆ) ಕಾಣ್ಕೆ (vision) :**

ಮಕ್ಕಳಿಗೆ ಸಮಗ್ರ ಶಿಕ್ಷಣ ನೀಡುವುದರೊಂದಿಗೆ ಅವರು ಸರಿಯಾದ ಆಯ್ಕೆ ಮಾಡಿ ಉನ್ನತ ಶೈಕ್ಷಣಿಕ ಮತ್ತು ವೈಯಕ್ತಿಕ ಶ್ರೇಷ್ಠತೆಯನ್ನು ಸಾಧಿಸುವಂತೆ ಮಾಡುವುದು.
ಮೂಲಭೂತ ಮೌಲ್ಯಗಳು ಮತ್ತು ಸಾಧಿಸಬಹುದಾದ ಗುರಿಗಳ ಆಧಾರದ ಮೇಲೆ ಕಲಿಕೆಯ ಕೇಂದ್ರವಾಗಿ ಶಾಲೆಯನ್ನು ಅಭಿವೃದ್ಧಿಪಡಿಸುವ ದೃಷ್ಟಿ ಸಾಧಿಸಲು ಪ್ರಯತ್ನಿಸುವುದು.

**(ಇ) ಗುರಿ :**

ಎಲ್ಲಾ ವಿದ್ಯಾರ್ಥಿಗಳಿಗೆ ಜಾತಿ ಮತ್ತು ಮತಗಳನ್ನು ಹೊರತುಪಡಿಸಿ ಶಿಕ್ಷಣವನ್ನು ನೀಡುವುದರೊಂದಿಗೆ ಮಕ್ಕಳಲ್ಲಿ ಜವಾಬ್ದಾರಿ, ಸಮಗ್ರತೆ ಮತ್ತು ಸ್ವಾವಲಂಬನೆಯನ್ನು ಬೆಳೆಸುವುದರೊಂದಿಗೆ ದೇಶದ ಉತ್ತಮ ಪ್ರಜೆಯನ್ನಾಗಿಸಿ ಮಾಡುವುದು. "ಸಾಮಾನ್ಯ ಶಾಲೆ" ಎಂಬ ಪರಿಕಲ್ಪನೆಯನ್ನು ಪ್ರೋತ್ಸಾಹಿಸಲಾಗುವುದು. ವ್ಯವಸ್ಥೆಯಲ್ಲಿ ಈ ಮೌಲ್ಯಗಳನ್ನು ಸ್ಥಾಪಿಸಬೇಕಾದರೆ, ಅನುದಾನಿತ, ಖಾಸಗಿ ಶಾಲೆಗಳು ಸೇರಿದಂತೆ ಎಲ್ಲಾ ಶಾಲೆಗಳು ಬಡತನ ರೇಖೆಗಿಂತ ಕೆಳಗಿರುವ ಮಕ್ಕಳಿಗೆ ಸಾಕಷ್ಟು ದಾಖಲಾತಿಯನ್ನು ಖಾತ್ರಿಪಡಿಸುವ ಮೂಲಕ ಮಾಧ್ಯಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಕೊಡುಗೆ ನೀಡುವುದು.

(ಈ) ವೈಶಿಷ್ಟತೆಗಳು :

ಆದರ್ಶ ಶಾಲೆಗಳಲ್ಲಿ ಶಿಕ್ಷಣದ ಜೊತೆಗೆ ಮಕ್ಕಳ ದೈಹಿಕ, ಭಾವನಾತ್ಮಕ ಮುಂತಾದ ಸಮಗ್ರ ಬೆಳವಣಿಗೆಗೆ ಸಹಕಾರಿಯಾಗಿರುತ್ತದೆ.

ಬೋಧನೆ, ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಪೂರೈಸಲು ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು. ಕ್ರೀಡೆ, ಮನೋರಂಜನೆ ಮತ್ತು ಹೊರಾಂಗಣ ಚಟುವಟಿಕೆಗಳಿಗೆ ಸಾಕಷ್ಟು ವ್ಯಾಪ್ತಿ ಕಲ್ಪಿಸಲಾಗಿದೆ. ಆಟದ ಮೈದಾನ, ಕೈ–ತೋಟಗಳು, ಅಟಲ್ ಟಿಂಕರಿಂಗ್ ಲ್ಯಾಬ್, ಸಭಾಂಗಣ ಇತ್ಯಾದಿ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

- ಆಂಗ್ಲ ಮಾಧ್ಯಮದಲ್ಲಿ ಬೋಧನೆ ಮಾಡಲಾಗುತ್ತಿದೆ.
- ಐಸಿಟಿ ಮೂಲಸೌಕರ್ಯಗಳೊಂದಿಗೆ ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್ ಬೋಧನೆಗೆ ವಿಶೇಷ ಒತ್ತು ನೀಡಲಾಗುತ್ತಿದೆ.
- ವಿಜ್ಞಾನ ಪ್ರಯೋಗಾಲಯಗಳನ್ನು ಅಳವಡಿಸಲಾಗಿದೆ.
- ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಪುಸ್ತಕಗಳು ಮತ್ತು ನಿಯತಕಾಲಿಕೆಗಳನ್ನೊಳಗೊಂಡ ಉತ್ತಮ ಗ್ರಂಥಾಲಯವನ್ನು ಒದಗಿಸಲಾಗುತ್ತಿದೆ.

- ಈ ಶಾಲೆಗಳು ರಾಜ್ಯ ಸರ್ಕಾರದ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಗೆ ಒಳಪಟ್ಟಿರುತ್ತದೆ.
- ವಿದ್ಯಾರ್ಥಿಗಳ ಆಯ್ಕೆ ಸ್ವತಂತ್ರ ಆಯ್ಕೆ ಪ್ರಕ್ರಿಯೆಯ ಮೂಲಕ ನಡೆಸಲಾಗುವುದು. ನೆರೆಹೊರೆಯ ಪರಿಕಲ್ಪನೆಯು ಆದರ್ಶ ವಿದ್ಯಾಲಯ ಶಾಲೆಯು ಇರುವ ಇಡೀ ಬ್ಲಾಕನ್ನು ಒಳಗೊಳ್ಳುತ್ತದೆ.
- ಆದರ್ಶ ವಿದ್ಯಾಲಯಗಳು ಸರಿಯಾದ ಚಟುವಟಿಕೆಗಳನ್ನು ಹೊಂದಿರುವುದರಿಂದ ನೆರೆಹೊರೆಯ ಶಾಲೆಗಳು ಪ್ರಯೋಜನ ಪಡೆಯಬಹುದು.
- ಆದರ್ಶ ವಿದ್ಯಾಲಯಗಳು ರಾಷ್ಟ್ರೀಯ ಪಠ್ಯಕ್ರಮದ ಆಯಕಟ್ಟು 2015ರಲ್ಲಿ ಅನುಷ್ಠಾನಗೊಳಿಸಲಾದ ಉದ್ದೇಶಗಳನ್ನು ಮುಂದುವರೆಸುವಲ್ಲಿ ಕಾಳಜಿ ವಹಿಸಿ ಕಾರ್ಯ ನಿರ್ವಹಿಸುತ್ತಿವೆ.
- ಶಾಲಾ ಪಠ್ಯಕ್ರಮವು ನಾಯಕತ್ವದ ಗುಣಗಳು, ತಂಡದ ಉತ್ಸಾಹ, ಭಾಗವಹಿಸುವಿಕೆಯ ಸಾಮರ್ಥ್ಯಗಳು, ಕೌಶಲ್ಯಾಭಿವೃದ್ಧಿ ಮತ್ತು ನೈಜ ಜೀವನದ ಸಂದರ್ಭಗಳನ್ನು ಎದುರಿಸುವ ಸಾಮರ್ಥವನ್ನು ಒಳಗೊಂಡಿರುವ ಪಠ್ಯವಸ್ತುಗಳನ್ನು ಒಳಗೊಂಡಿದೆ.
- ಈ ಶಾಲೆಗಳಲ್ಲಿ ಸಾಮಾನ್ಯ ನಿಯಮಗಳ ಪ್ರಕಾರ ವಿಷಯ ನಿರ್ದಿಷ್ಟ ಶಿಕ್ಷಕರ ಜೊತೆಗೆ ಕಲೆ ಮತ್ತು ಸಂಗೀತ ಶಿಕ್ಷಕರನ್ನು ಒದಗಿಸಲಾಗಿದೆ. ಈ ಶಾಲೆಗಳು ಭಾರತೀಯ ಪರಂಪರೆಗೆ ಮತ್ತು ಕಲೆಗೆ ಮಹತ್ವ ನೀಡುವ ಚಟುವಟಿಕೆಗಳನ್ನು ರಚಿಸಲು ಅನುವು ಮಾಡಲಾಗಿದೆ.
- ಪಠ್ಯಕ್ರಮವು ಸ್ಥಳೀಯ ಸಂಸ್ಕೃತಿ ಮತ್ತು ಪರಿಸರವನ್ನು ಪ್ರತಿಬಿಂಬಿಸುತ್ತವೆ.
- ಚಟುವಟಿಕೆ ಆಧಾರಿತ ಕಲಿಕೆಯಾಗಿರುತ್ತದೆ.
- ಶಿಕ್ಷಣ ಮತ್ತು ನಿರ್ವಹಣೆಯ ಅಗತ್ಯಗಳನ್ನು ಕ್ರಿಯಾತ್ಮಕವಾಗಿ ಒಗ್ಗೂಡಿಸಲು ಸಮಗ್ರ ಶಿಕ್ಷಣ–ಕರ್ನಾಟಕ ಯೋಜನೆಯಿಂದ ಕಾಲಕಾಲಕ್ಕೆ ಯಾವುದೇ ಚಟುವಟಿಕೆಗಳನ್ನು ಸೇರಿಸಬಹುದು ಅಥವಾ ತೆಗೆದು ಹಾಕಬಹುದು.

**(ಉ) ಬೋಧನಾ ಮಾಧ್ಯಮ ಮತ್ತು ವಿಷಯಗಳು:**

ಆದರ್ಶ ವಿದ್ಯಾಲಯಗಳಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತಿದ್ದು, ಪ್ರಥಮ ಭಾಷೆ – ಇಂಗ್ಲಿಷ್, ದ್ವಿತೀಯ ಭಾಷೆ – ಕನ್ನಡ, ತೃತೀಯ ಭಾಷೆ – ಹಿಂದಿ, ಗಣಿತ, ಸಾಮಾನ್ಯ ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳನ್ನು ಬೋಧಿಸಲಾಗುತ್ತಿದೆ.

ಸಮಗ್ರವಾದ ಶಿಕ್ಷಣವನ್ನು ಸಾಧಿಸಲು ಭೌದ್ಧಿಕ ವಿಷಯಗಳ ಜೊತೆಯಲ್ಲಿ ದೈಹಿಕ ಶಿಕ್ಷಣ, ನೈತಿಕ ಶಿಕ್ಷಣ, ಕೆಲಸದ ಅನುಭವ, ಯೋಜನೆಗಳು ಮುಂತಾದ ಪಠ್ಯೇತರ ವಿಷಯಗಳನ್ನು ಸಹ ಅಳವಡಿಸಲಾಗಿದೆ.

**(ಊ) ತರಗತಿಗಳು:**

- ಈ ಶಾಲೆಗಳು 6 ರಿಂದ 10ನೇ ತರಗತಿ ವರೆಗೆ ನಡೆಯುತ್ತಿವೆ.

| ವರ್ಷ | ದಾಖಲಾತಿ |
|---|---|
| 2021-22 | 27935 |
| 2022-23 | 28329 |
| 2023-24 | 31195 |

**(ಋ) ದಾಖಲಾತಿ ಪ್ರಕ್ರಿಯೆ:**

2010–11ನೇ ಸಾಲಿನಿಂದ ಇದುವರೆವಿಗೂ ಆಯ್ಕೆ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದೆ.

- ಸದರಿ ಶಾಲೆಗಳಿಗೆ 6ನೇ ತರಗತಿ ದಾಖಲಾತಿಯನ್ನು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು ಮತ್ತು ಕರ್ನಾಟಕ ಮೀಸಲಾತಿಯನ್ವಯ ದಾಖಲು ಮಾಡಿಕೊಳ್ಳಲಾಗುವುದು.
- 2017–18ನೇ ಸಾಲಿನಿಂದ 6ನೇ ತರಗತಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ನಡೆಸಲಾಗುವ ಪ್ರವೇಶ ಪರೀಕ್ಷೆಯ ಪ್ರಕ್ರಿಯೆಯ ಸಂಪೂರ್ಣ ಜವಾಬ್ದಾರಿಯನ್ನು ಕೆ.ಎಸ್.ಕ್ಯು.ಎ.ಎ.ಸಿಗೆ ಹಸ್ತಾಂತರಿಸಲಾಯಿತು. 2017–18ರಲ್ಲಿ ಪರೀಕ್ಷೆಯನ್ನು ಕರ್ನಾಟಕ ವಸತಿ ಸಂಸ್ಥೆಗಳ ಶಿಕ್ಷಣ ಸಂಘ(KRIES) ದೊಂದಿಗೆ ಜಂಟಿಯಾಗಿ ನಡೆಸಲಾಯಿತು. ಆದರೆ ಫಲಿತಾಂಶಗಳನ್ನು ಪ್ರತ್ಯೇಕವಾಗಿ ಘೋಷಿಸಲಾಯಿತು ಮತ್ತು ಶಾಲಾ ಹಂತದಲ್ಲಿ ಪ್ರವೇಶವನ್ನು ಮಾಡಲಾಯಿತು.
- 2018–19ರಿಂದ ಆದರ್ಶ ವಿದ್ಯಾಲಯ ಶಾಲೆಗಳಿಗೆ ಪ್ರವೇಶ ಪರೀಕ್ಷೆಯನ್ನು ಪ್ರತ್ಯೇಕವಾಗಿ ನಡೆಸಲಾಗುತ್ತಿದೆ. ವಿದ್ಯಾವಾಹಿನಿ ಮೂಲಕ ಅರ್ಜಿಗಳನ್ನು ಸಲ್ಲಿಸುವ ಹಾಗೂ ಪ್ರವೇಶ ಪತ್ರಿಕೆಗಳ ವಿತರಣೆ ಕಾರ್ಯ ಸಮಗ್ರ ಶಿಕ್ಷಣ–ಕರ್ನಾಟಕ ಯೋಜನೆಯಿಂದ ಮೇಲ್ವಿಚಾರಣೆ ನಡೆಸಲಾಗುತ್ತಿದೆ.
- ಪ್ರವೇಶ ಪರೀಕ್ಷೆ ನಡೆಸುವುದು ಹಾಗೂ ಫಲಿತಾಂಶವನ್ನು ಘೋಷಿಸುವ ಕಾರ್ಯ ಕೆ.ಎಸ್.ಕ್ಯು.ಎ.ಎ.ಸಿ ವತಿಯಿಂದ ನಡೆಸಲಾಗುತ್ತಿದೆ.
- ಕರ್ನಾಟಕ ರಾಜ್ಯ ಮೀಸಲಾತಿವಾರು ಆಯ್ಕೆ ಪಟ್ಟಿ ತಯಾರಿಕೆ ಕಾರ್ಯವನ್ನು ಕೇಂದ್ರೀಕೃತ ದಾಖಲಾತಿ ಘಟಕ – CAC ವತಿಯಿಂದ ನಡೆಸಲಾಗುತ್ತಿದೆ.
- ವಿದ್ಯಾವಾಹಿನಿ ಪೋರ್ಟಲ್ ಮೂಲಕ ದಾಖಲಾತಿ ಪ್ರಕ್ರಿಯೆಯನ್ನು ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ನಿರ್ವಹಿಸಲಾಗುತ್ತಿದೆ.

**(ಎ) ಆದರ್ಶ ವಿದ್ಯಾಲಯಗಳಲ್ಲಿ ಒದಗಿಸಲಾದ ಸೌಲಭ್ಯಗಳು:**

ಸರ್ಕಾರಿ ಶಾಲಾ ಮಕ್ಕಳಿಗೆ ನೀಡಲಾಗುವ ಎಲ್ಲಾ ಸೌಕರ್ಯಗಳನ್ನು ಆದರ್ಶ ವಿದ್ಯಾಲಯ ಶಾಲೆಗಳಿಗೂ ವಿಸ್ತರಿಸಲಾಗಿದೆ.

1. ಉಚಿತ ಸಮವಸ್ತ್ರ.
2. ಉಚಿತ ಪಠ್ಯಪುಸ್ತಕ.
3. ಉಚಿತ ಷೂ ಮತ್ತು ಕಾಲುಚೀಲ.
4. ಇತರೆ ಇಲಾಖೆಗಳಿಂದ ವಿದ್ಯಾರ್ಥಿವೇತನ.
5. ಅರ್ಹ ಶಿಕ್ಷಕರು (ಇಂಗ್ಲಿಷ್ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಶಿಕ್ಷಕರಿಗೆ ಆದ್ಯತೆ ನೀಡಲಾಗುವುದು).
6. ಶಾಲೆಗಳಲ್ಲಿ ಅಕ್ಷರ ದಾಸೋಹ ಅಳವಡಿಸಲಾಗಿದೆ .
7. ಶಿಕ್ಷಕರ ತರಬೇತಿ.
8. ಎನ್.ಸಿ.ಇ.ಆರ್.ಟಿ ಮತ್ತು ರಾಜ್ಯ ಪಠ್ಯಕ್ರಮಗಳ ಆಧಾರದ ಮೇಲೆ ಕಲಿಕಾ ಬಲವರ್ದನೆ ಅಡಿ ಸಮಗ್ರ ಶಿಕ್ಷಣ –ಕರ್ನಾಟಕ ವತಿಯಿಂದ ಸಿದ್ಧಪಡಿಸಲಾದ 6 ರಿಂದ 9ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಅಭ್ಯಾಸಪುಸ್ತಕಗಳನ್ನು ಸರಬರಾಜು ಮಾಡಲಾಗುತ್ತಿದೆ.

**9**. ಮಾದರಿ ಶಾಲೆಗಳಿಗೆ ನೀಡಲಾದ ಇತರ ಸೌಲಭ್ಯಗಳು ಕೆಳಕಂಡಂತಿವೆ:

- 32 ಕೊಠಡಿಗಳು ಹಾಗೂ ಬೋಧನಾ ಶಿಕ್ಷಕರು
- ಪೀಠೋಪಕರಣಗಳು
- ಕ್ರೀಡಾ ಮತ್ತು ಚಿತ್ರಕಲಾ ಸಾಮಗ್ರಿಗಳು
- ಲ್ಯಾಬ್ ಉಪಕರಣಗಳು
- ಬೋಧನಾ-ಕಲಿಕಾ ಸಾಮಗ್ರಿಗಳು
- ಕುಡಿಯುವ ನೀರು
- ವಿದ್ಯುಚ್ಛಕ್ತಿ
- ತೋಟಗಾರಿಕೆ
- ಅಟಲ್ ಟಿಂಕರಿಂಗ್ ಲ್ಯಾಬ್ ಹಾಗು ಇತ್ಯಾದಿ
- ಆದರ್ಶ ವಿದ್ಯಾಲಯಗಳ ಶಾಲಾನಿರ್ವಹಣೆಗಾಗಿ ಪ್ರತಿ ವರ್ಷ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

## ಆದರ್ಶ ವಿದ್ಯಾಲಯಗಳ ಪ್ರಗತಿ ವರದಿ : 2023-24

**2009-10ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ** ಆದರ್ಶ ವಿದ್ಯಾಲಯಗಳು ಮಂಜೂರಾಗಿದ್ದು, 2010-11ರಿಂದ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಎಂ.ಹೆಚ್.ಆರ್.ಡಿ ಸೂಚನೆ ಸಂಖ್ಯೆ: ಎಫ್.1-8/2012-ಎಸ್.ಎಸ್.ಕೆ **III** ದಿನಾಂಕ: 21/04/2015 ರನ್ವಯ 2015-16 ರಿಂದ ಈ ಯೋಜನೆಯು ಭಾರತ ಸರ್ಕಾರದಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿ ಕರ್ನಾಟಕ ಸರ್ಕಾರಕ್ಕೆ ವರ್ಗಾಯಿಸಲ್ಪಟ್ಟಿದೆ.

- ಆದೇಶದನ್ವಯ ಕರ್ನಾಟಕ ಸರ್ಕಾರವು ಆದರ್ಶ ವಿದ್ಯಾಲಯಗಳನ್ನು ಸಂಪೂರ್ಣವಾಗಿ ವಶಕ್ಕೆ ಪಡೆದು 2016-17ನೇ ಸಾಲಿನಲ್ಲಿ ಪ್ರತಿ ಶಾಲೆಗೆ ರೂ.19.00 ಲಕ್ಷದಂತೆ ಒಟ್ಟು ರೂ.1406 ಲಕ್ಷಗಳ ನಿರ್ವಹಣಾ ಅನುದಾನವನ್ನು ಬಿಡುಗಡೆ ಮಾಡಿತು. ಶಾಲೆಗಳು ಈ ಅನುದಾನವನ್ನು ಬಳಸಿಕೊಂಡು ಮಕ್ಕಳಿಗೆ, ಕಟ್ಟಡಕ್ಕಾಗಿ ಮತ್ತು ಶಾಲೆಯ ಆವರಣದ ನಿರ್ವಹಣೆಗೆ ಬಳಸಿಕೊಂಡಿರುತ್ತವೆ.
- ಪ್ರತಿ ವರ್ಷ ಆದರ್ಶ ವಿದ್ಯಾಲಯಗಳಿಗೆ ಕರ್ನಾಟಕ ಸರ್ಕಾರದಿಂದ ನಿರ್ವಹಣಾ ವೆಚ್ಚವನ್ನು ನೀಡಲಾಗುತ್ತಿದೆ.
- 2023-24ನೇ ಸಾಲಿಗೆ ಶಾಲಾನಿರ್ವಹಣೆಗಾಗಿ ಪ್ರತಿ ಆದರ್ಶ ಶಾಲೆಗೆ ರೂ. 5,00,000/- ಗಳು ಬಿಡುಗಡೆಯಾಗಿರುತ್ತದೆ.

## ಆದರ್ಶ ವಿದ್ಯಾಲಯಗಳಿಗೆ ಮಂಜೂರಾದ ಹುದ್ದೆಗಳ ವಿವರ

| ಕ್ರ. ಸಂ. | ಮಂಜೂರಾದ ಹುದ್ದೆಗಳ ವಿವರ | ಒಂದು ಶಾಲೆಗೆ ಮಂಜೂರಾದ ಹುದ್ದೆಗಳ ಸಂಖ್ಯೆ | ಸ.ಆ ಸಂ: ಇಡಿ 90 ಎಂಸಿಡಿ 2010 ದಿ: 30.11.2011 | ಸ.ಆ ಸಂ: ಇಡಿ 90 ಎಂಸಿಡಿ 2013 ದಿ: 01.10.2013 | ಒಟ್ಟು |
|---|---|---|---|---|---|
| 1 | ಮುಖ್ಯ ಶಿಕ್ಷಕರು | 1 | 74 | | **74** |
| 2 | ಪ್ರಥಮ ಭಾಷೆ – ಇಂಗ್ಲಿಷ್ | 2 | 74 | 74 | **148** |
| 3 | ದ್ವಿತೀಯ ಭಾಷೆ – ಕನ್ನಡ | 2 | 74 | 74 | **148** |
| 4 | ತೃತೀಯ ಭಾಷೆ – ಹಿಂದಿ | 2 | 74 | 74 | **148** |
| 5 | ಗಣಿತ (ಪಿಸಿಎಂ) | 3 | 74 | 148 | **222** |
| 6 | ವಿಜ್ಞಾನ (ಸಿಬಿಜಡ್) | 1 | 74 | | **74** |
| 7 | ಸಮಾಜ ವಿಜ್ಞಾನ | 2 | 74 | 74 | **148** |
| 8 | ದೈಹಿಕ ಶಿಕ್ಷಕರು | 1 | 74 | | **74** |
| 9 | ಪ್ರಥಮ ದರ್ಜೆ ಸಹಾಯಕ | 1 | 74 | | **74** |
| 10 | ಗ್ರೂಪ್–ಡಿ | 1 | 74 | | **74** |
| 11 | ಕ್ರಾಫ್ಟ್ | 1 | 74 | | **74** |
| 12 | ಸಂಗೀತ | 1 | 74 | | **74** |
| 13 | ಡ್ರಾಯಿಂಗ್ | 1 | 74 | | **74** |
| | **ಒಟ್ಟು** | **19** | **962** | **444** | **1406** |
| 14 | ಹೊರಗುತ್ತಿಗೆ (Outsource) Office staff | 2 | 0 | 148 | **148** |
| | **Grand Total** | **21** | **962** | **592** | **1554** |

## ಆದರ್ಶ ವಿದ್ಯಾಲಯಗಳಲ್ಲಿನ ವಿಭಾಗವಾರು ದಾಖಲಾತಿಯ ವಿವರ – 2023–24

| ಕ್ರ. ಸಂ. | ವಿಭಾಗದ ಹೆಸರು | **Seats allotted** | | | | | | **Seats Admitted** | | | | | |
|---|---|---|---|---|---|---|---|---|---|---|---|---|---|
| | | **C-6** | **C-7** | **C-8** | **C-9** | **C-10** | **Total** | **C-6** | **C-7** | **C-8** | **C-9** | **C-10** | **Total** |
| 1 | ಬೆಂಗಳೂರು ವಿಭಾಗ | 1440 | 960 | 960 | 960 | 960 | 5280 | 1300 | 938 | 948 | 923 | 897 | **5006** |
| 2 | ಮೈಸೂರು ವಿಭಾಗ | 1560 | 1040 | 1040 | 1040 | 1040 | 5720 | 1553 | 1032 | 1032 | 999 | 992 | **5608** |
| 3 | ಧಾರವಾಡ ವಿಭಾಗ | 2280 | 1520 | 1520 | 1520 | 1520 | 8360 | 2251 | 1509 | 1490 | 1457 | 1347 | **8054** |
| 4 | ಕಲ್ಬುರ್ಗಿ ವಿಭಾಗ | 3600 | 2400 | 2400 | 2400 | 2400 | 13200 | 3440 | 2373 | 2311 | 2241 | 2162 | **12527** |
| | ಒಟ್ಟು | **8880** | **5920** | **5920** | **5920** | **5920** | **32560** | **8544** | **5852** | **5781** | **5620** | **5398** | **31195** |

74 ಆದರ್ಶ ವಿದ್ಯಾಲಯಗಳಲ್ಲಿ 6ನೇ ತರಗತಿಯಿಂದ 10ನೇ ತರಗತಿವರೆಗೂ ಪ್ರತಿ ತರಗತಿಗೆ 80 ವಿದ್ಯಾರ್ಥಿಗಳ ವಿಭಾಗ ಮಂಜೂರಾಗಿರುತ್ತದೆ. 2023-24ನೇ ಸಾಲಿನಿಂದ 6ನೇ ತರಗತಿಗೆ 40 ವಿದ್ಯಾರ್ಥಿಗಳ ಒಂದು ಹೆಚ್ಚುವರಿ ವಿಭಾಗ ತೆರೆಯಲಾಗಿದ್ದು (80+40=120 ವಿದ್ಯಾರ್ಥಿಗಳು), ಸ್ವಾಭಾವಿಕ ಬೆಳವಣಿಗೆಯಡಿ ಮುಂದಿನ ತರಗತಿಗಳಲ್ಲಿ ಒಂದು ಹೆಚ್ಚುವರಿ (40 ವಿದ್ಯಾರ್ಥಿಗಳ) ವಿಭಾಗ ಮುಂದುವರೆಯುತ್ತದೆ.

**ಅಭ್ಯಾಸ ಪುಸ್ತಕಗಳು:**

2022–23ನೇ ಸಾಲಿನಿಂದ ಎನ್.ಸಿ.ಇ.ಆರ್.ಟಿ ಮತ್ತು ರಾಜ್ಯ ಪಠ್ಯಕ್ರಮಗಳ ಆಧಾರದ ಮೇಲೆ ಕಲಿಕಾ ಬಲವರ್ಧನೆ ಅಡಿ ಸಮಗ್ರ ಶಿಕ್ಷಣ –ಕರ್ನಾಟಕ ವತಿಯಿಂದ ಅಭ್ಯಾಸ ಪುಸ್ತಕಗಳನ್ನು ಸಿದ್ಧಪಡಿಸಲಾಗಿದೆ.

1. ಪ್ರಥಮ ಭಾಷೆ – ಇಂಗ್ಲಿಷ್ (ಕೆ.ಟಿ.ಬಿ.ಎಸ್ ಮತ್ತು ಎನ್.ಸಿ.ಇ.ಆರ್.ಟಿಯ ಹನಿ ಸಕಲ್, ಹನಿ ಕೋಂಬ್ ಮತ್ತು ಹನಿಡ್ಯೂ )
2. ದ್ವಿತೀಯ ಭಾಷೆ – ಕನ್ನಡ (ಕೆ.ಟಿ.ಬಿ.ಎಸ್)
3. ತೃತೀಯ ಭಾಷೆ – ಹಿಂದಿ (ಎನ್.ಸಿ.ಇ.ಆರ್.ಟಿಯ ಪಠ್ಯಪುಸ್ತಕ )
4. ವಿಜ್ಞಾನ – (ಎನ್.ಸಿ.ಇ.ಆರ್.ಟಿಯ ಪಠ್ಯಪುಸ್ತಕ )
5. ಗಣಿತ – ( ಎನ್.ಸಿ.ಇ.ಆರ್.ಟಿಯ ಪಠ್ಯಪುಸ್ತಕ )
6. ಸಮಾಜ ವಿಜ್ಞಾನ – (ಕೆ.ಟಿ.ಬಿ.ಎಸ್ ಪಠ್ಯಪುಸ್ತಕ)

ಭಾಷೆ ಕನ್ನಡ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ಕೆ.ಟಿ.ಬಿ.ಎಸ್ ಪಠ್ಯಪುಸ್ತಕಗಳನ್ನು ಬಳಸಲಾಗುತ್ತಿದೆ. ವಿದ್ಯಾರ್ಥಿಗಳ ಕಲಿಕೆಗೆ ಅನುಗುಣವಾಗಿ 2023–24ನೇ ಸಾಲಿನಲ್ಲಿ 6ನೇ ರಿಂದ 9ನೇ ತರಗತಿಯ ಎಲ್ಲಾ ವಿಷಯಗಳಿಗೆ ಗುಣಮಟ್ಟದ ಅಭ್ಯಾಸ ಪುಸ್ತಕಗಳನ್ನು ಸಿದ್ಧಪಡಿಸಿ 74 ಆದರ್ಶ ವಿದ್ಯಾಲಯಗಳ ಎಲ್ಲಾ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೆ.ಟಿ.ಬಿ.ಎಸ್ ನಿಂದ ಮುದ್ರಿಸಿ ಸರಬರಾಜು ಮಾಡಲಾಗಿದೆ. 6 ರಿಂದ 9ನೇ ತರಗತಿಯ ಅಭ್ಯಾಸ ಪುಸ್ತಕಗಳನ್ನು ತರಗತಿಯಲ್ಲಿ ಪೂರ್ಣಗೊಳಿಸುವಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಭವಗಳ ವಿಮರ್ಶೆ ನಡೆಸಿದ್ದು, ಇದರ ಆಧಾರದ ಮೇಲೆ ಅನುಭವಿ ಶಿಕ್ಷಕರು ಅಭ್ಯಾಸ ಪುಸ್ತಕದ ವಿಷಯ ಮತ್ತು ಗುಣಮಟ್ಟ ಸುಧಾರಿಸಲು ಕಾರ್ಯೋನ್ಮುಖರಾಗಿರುತ್ತಾರೆ.

| ಅಭ್ಯಾಸ ಪುಸ್ತಕಗಳ ವಿತರಣೆ ವಿವರ – 2023–24 | | | | | | |
|---|---|---|---|---|---|---|
| ತರಗತಿ | ಶಾಲೆಗಳ ಸಂಖ್ಯೆ | ಪ್ರತಿ ಶಾಲೆಯ ಮಕ್ಕಳ ಸಂಖ್ಯೆ | ಪ್ರತಿ ಮಕ್ಕಳ ಸಂಖ್ಯೆ(ಒಂದು ಪ್ರತಿ) | ಪಠ್ಯಪುಸ್ತಕಗಳ ಸಂಖ್ಯೆ | ಹೆಚ್ಚುವರಿ ಪ್ರತಿಗಳು (ಪ್ರತಿ ಶಾಲೆಗೆ 2 ಪ್ರತಿಗಳು + ಕಛೇರಿಗೆ 3 ಪ್ರತಿಗಳು) | ಒಟ್ಟು ಪ್ರತಿಗಳ ಸಂಖ್ಯೆ |
| 6 | 74 | 120 | 8880 | 6 | 906 | 54186 |
| 7 | 74 | 80 | 5920 | 6 | 906 | 36426 |
| 8 | 74 | 80 | 5920 | 6 | 906 | 36426 |
| 9 | 74 | 80 | 5920 | 6 | 906 | 36426 |
| **ಒಟ್ಟು** | | | **26640** | **24** | **3624** | **163464** |

## 74 ಆದರ್ಶ ವಿದ್ಯಾಲಯ ಶಾಲೆಗಳ ಪಟ್ಟಿ (ಮಾದರಿ ಶಾಲೆಗಳು)

| ಕ್ರ.ಸಂ. | ಜಿಲ್ಲೆ ಹೆಸರು | ತಾಲ್ಲೂಕಿನ ಹೆಸರು | ಶಾಲಾ ಡೈಸ್‌ಸಂಖ್ಯೆ | ಆದರ್ಶ ಶಾಲೆ ಹೆಸರು |
|---|---|---|---|---|
| 1 | ಬಾಗಲಕೋಟೆ | ಬಾದಾಮಿ | 29020115206 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್‌ಎಂಎಸ್‌ಎ) ಚಿಕ್ಕಮುಚ್ಚಲಗುಡ್ಡ |
| 2 | ಬಾಗಲಕೋಟೆ | ಬಾಗಲಕೋಟೆ | 29020212512 | ಸರ್ಕಾರಿ ಆದರ್ಶ ವಿದ್ಯಾಲಯ, ನವನಗರ ಬಾಗಲಕೋಟ |
| 3 | ಬಾಗಲಕೋಟೆ | ಬೀಳಗಿ | 29020608012 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್‌ಎಂಎಸ್‌ಎ) ಬೀಳಗಿ |
| 4 | ಬಾಗಲಕೋಟೆ | ಹುನಗುಂದ | 29020720205 | ಸರ್ಕಾರಿ ಆದರ್ಶ ವಿದ್ಯಾಲಯ, ಹುನಗುಂದ |
| 5 | ಬಾಗಲಕೋಟೆ | ಜಮಖಂಡಿ | 29020910003 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್‌ಎಂಎಸ್‌ಎ) ಜಮಖಂಡಿ |
| 6 | ಬಾಗಲಕೋಟೆ | ಮುಧೋಳ | 29021115308 | ಆದರ್ಶ ವಿದ್ಯಾಲಯ, (ಆರ್‌ಎಂಎಸ್‌ಎ) ಲೋಕಾಪುರ–ಲಕ್ಷನಟ್ಟಿ |
| 7 | ಬಳ್ಳಾರಿ | ಬಳ್ಳಾರಿ ಪಶ್ಚಿಮ | 29120115107 | ಸರ್ಕಾರಿ ಆದರ್ಶ ವಿದ್ಯಾಲಯ, ಬಳ್ಳಾರಿ |
| 8 | ಬಳ್ಳಾರಿ | ಸಂಡೂರು | 29120701007 | ಸರ್ಕಾರಿ ಆದರ್ಶ ವಿದ್ಯಾಲಯ, ಕೃಷ್ಣನಗರ ಸಂಡೂರು |
| 9 | ಬಳ್ಳಾರಿ | ಸಿರಗುಪ್ಪ | 29120802106 | ಸರ್ಕಾರಿ ಆದರ್ಶ ವಿದ್ಯಾಲಯ, ಸಿರುಗುಪ್ಪ |
| 10 | ಬೆಳಗಾವಿ | ರಾಮದುರ್ಗ | 29011114302 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್‌ಎಂಎಸ್‌ಎ) ರಾಮದುರ್ಗ |
| 11 | ಬೆಳಗಾವಿ | ಸವದತ್ತಿ | 29011208102 | ಆದರ್ಶ ವಿದ್ಯಾಲಯಾ, ಯಡ್ರಾವಿ ಸೌಂದತ್ತಿ |
| 12 | ಬೆಳಗಾಂ ಚಿಕ್ಕೋಡಿ | ಗೋಕಾಕ | 29300613103 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್.ಎಂ.ಎಸ್.ಎ. ಖಾನಗಾಂವ್ |
| 13 | ಬೆಳಗಾಂ ಚಿಕ್ಕೋಡಿ | ರಾಯಭಾಗ | 29301004008 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್.ಎಂ.ಎಸ್.ಎ, ಮೇಖಲಿ |
| 14 | ಬೀದರ್ | ಔರಾದ್ | 29050100158 | RMSA ಆದರ್ಶ ವಿದ್ಯಾಲಯ, ಔರಾದ್ (ಬಿ) |
| 15 | ಬೀದರ್ | ಬಸವಕಲ್ಯಾಣ | 29050213410 | ಸರ್ಕಾರಿ ಆದರ್ಶ ವಿದ್ಯಾಲಯ, ರಾಜೋಲ |
| 16 | ಬೀದರ್ | ಬೀದರ್ | 29050405717 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್‌ಎಂಎಸ್‌ಎ) ಜನವಾಡ |

| | | | | |
|---|---|---|---|---|
| 17 | ಬೀದರ್ | ಹುಮ್ನಾಬಾದ್ | 29050500911 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಬೆಮಲ್ಖೇಡ |
| 18 | ಚಾಮರಾಜನಗರ | ಚಾಮರಾಜನಗರ | 29270126505 | ಸರ್ಕಾರಿ ಆದರ್ಶ ವಿದ್ಯಾಲಯ, ಚಾಮರಾಜನಗರ |
| 19 | ಚಾಮರಾಜನಗರ | ಗುಂಡ್ಲುಪೇಟೆ | 29270219002 | ಸರ್ಕಾರಿ ಆದರ್ಶವಿದ್ಯಾಲಯ, ಆರ್.ಎಂ.ಎಸ್.ಎ, ಗುಂಡ್ಲುಪೇಟೆ |
| 20 | ಚಾಮರಾಜನಗರ | ಕೊಳ್ಳೇಗಾಲ | 29270529615 | ಸರ್ಕಾರಿ ಆದರ್ಶ ವಿದ್ಯಾಲಯ, ಕೊಳ್ಳೇಗಾಲ |
| 21 | ಚಾಮರಾಜನಗರ | ಯಳಂದೂರು | 29271204302 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್.ಎಂ.ಎಸ್.ಎ, ಮೆಳ್ಳಹಳ್ಳಿ |
| 22 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 29290121940 | ಸರ್ಕಾರಿ ಆದರ್ಶ ವಿದ್ಯಾಲಯ, ದೇವರಗುಡಿಪಲ್ಲಿ |
| 23 | ಚಿಕ್ಕಬಳ್ಳಾಪುರ | ಚಿಂತಾಮಣಿ | 29290442711 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್.ಎಂ.ಎಸ್.ಎ, ಚಿಂತಾಮಣಿ |
| 24 | ಚಿಕ್ಕಬಳ್ಳಾಪುರ | ಗೌರಿಬಿದನೂರು | 29290523811 | ಸರ್ಕಾರಿ ಆದರ್ಶ ವಿದ್ಯಾಲಯ, ಗೌರಿಬಿದನೂರು |
| 25 | ಚಿಕ್ಕಬಳ್ಳಾಪುರ | ಗುಡಿಬಂಡೆ | 29290611706 | ಸರ್ಕಾರಿ ಆದರ್ಶ ವಿದ್ಯಾಲಯ, ಜೆ ಪಿ ನಗರ ಬೀಚಗನಹಳ್ಳಿ ಕ್ರಾಸ್ ಗುಡಿಬಂಡೆ |
| 26 | ಚಿತ್ರದುರ್ಗ | ಚೆಳ್ಳಕೆರೆ | 29130219806 | ಸರ್ಕಾರಿ ಆದರ್ಶ ವಿದ್ಯಾಲಯ, ಚಳ್ಳಕೆರೆ |
| 27 | ಚಿತ್ರದುರ್ಗ | ಮೊಳಕಾಲ್ಮೂರು | 29130612408 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಮೊಳಕಾಲ್ಮುರು |
| 28 | ಧಾರವಾಡ | ಧಾರವಾಡ | 29090112716 | ಸರ್ಕಾರಿ ಆದರ್ಶ ವಿದ್ಯಾಲಯ, ಧಾರವಾಡ |
| 29 | ಧಾರವಾಡ | ಕಲಘಟಗಿ | 29090308828 | ಸರ್ಕಾರಿ ಆದರ್ಶ ವಿದ್ಯಾಲಯ, ಕಲಘಟಗಿ |
| 30 | ಗದಗ | ಮುಂಡರಗಿ | 29080207107 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಮುಂಡರಗಿ |
| 31 | ಗದಗ | ರೋಣ | 29080413202 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಇಟಗಿ |
| 32 | ಹಾಸನ | ಹೆಚ್.ಎನ್.ಪುರ | 29230612146 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಎಂಎಸ್ಎ, ತಟ್ಟೆಕೆರೆ |
| 33 | ಕಲಬುರ್ಗಿ | ಆಳಂದ | 29040116413 | ಸರ್ಕಾರಿ ಆದರ್ಶ ವಿದ್ಯಾಲಯ, ಆಳಂದ |

| | | | | |
|---|---|---|---|---|
| 34 | ಕಲಬುರ್ಗಿ | ಅಫಜಲಪುರ | 29040210005 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್‌ಎಂಎಸ್‌ಎ) ಅತನೂರು |
| 35 | ಕಲಬುರ್ಗಿ | ಚಿಂಚೋಳಿ | 29040302236 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್‌ಎಂಎಸ್‌ಎ) ಪೋಲಕಪಲ್ಲಿ |
| 36 | ಕಲಬುರ್ಗಿ | ಚಿತ್ತಾಪುರ | 29040423308 | ಸರ್ಕಾರಿ ಆದರ್ಶ ವಿದ್ಯಾಲಯ, ಚಿತ್ತಾಪುರ |
| 37 | ಕಲಬುರ್ಗಿ | ಜೇವರ್ಗೀ | 29040619304 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್‌ಎಂಎಸ್‌ಎ) ಚನ್ನೂರು |
| 38 | ಕಲಬುರ್ಗಿ | ಸೇಡಂ | 29040901302 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್‌ಎಂಎಸ್‌ಎ ಬಿಬ್ಬಳ್ಳಿ |
| 39 | ಕಲಬುರ್ಗಿ | ಕಲಬುರ್ಗಿ ದಕ್ಷಿಣ | 29041108526 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್‌ಎಂಎಸ್‌ಎ ಶಾಲೆ ಭೀಮಳ್ಳಿ |
| 40 | ಕೋಲಾರ | ಬಂಗಾರಪೇಟೆ | 29190243406 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್‌ಎಂಎಸ್‌ಎ ಬಂಗಾರಪೇಟೆ |
| 41 | ಕೋಲಾರ | ಮುಳಬಾಗಿಲು | 29191048103 | ಸರ್ಕಾರಿ ಆದರ್ಶ ವಿದ್ಯಾಲಯ, ಮುಳಬಾಗಿಲು |
| 42 | ಕೋಲಾರ | ಶ್ರೀನಿವಾಸಪುರ | 29191245301 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್‌ಎಂಎಸ್‌ಎ ಕಲ್ಲೂರು |
| 43 | ಕೊಪ್ಪಳ | ಗಂಗಾವತಿ | 29070208421 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್‌ಎಂಎಸ್‌ಎ) ಕನಕಗಿರಿ |
| 44 | ಕೊಪ್ಪಳ | ಕೊಪ್ಪಳ | 29070311360 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್‌ಎಂಎಸ್‌ಎ ಕೊಪ್ಪಳ |
| 45 | ಕೊಪ್ಪಳ | ಕುಷ್ಟಗಿ | 29070409622 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್‌ಎಂಎಸ್‌ಎ ತಳವಗೇರ |
| 46 | ಕೊಪ್ಪಳ | ಯಲಬುರ್ಗ | 29070906107 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್‌ಎಂಎಸ್‌ಎ) ElV |
| 47 | ಮಂಡ್ಯ | ಮಳವಳ್ಳಿ | 29220313806 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್.ಎಂ.ಎಸ್.ಎ ಮಾರೇಹಳ್ಳಿ, ಮಳವಳ್ಳಿ |
| 48 | ಮಂಡ್ಯ | ಪಾಂಡವಪುರ | 29220619807 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್‌ಎಂಎಸ್‌ಎ ಯೇಳೇಕೆರೆ |
| 49 | ಮೈಸೂರು | ಹೆಚ್.ಡಿ.ಕೋಟೆ | 29260334207 | ಸರ್ಕಾರಿ ಆದರ್ಶ ವಿದ್ಯಾಲಯ, ಎಚ್.ಡಿ.ಕೋಟೆ |
| 50 | ಮೈಸೂರು | ಹುಣಸೂರು | 29260427501 | ಸರ್ಕಾರಿ ಆದರ್ಶ ವಿದ್ಯಾಲಯ, ಹುಣಸೂರು |
| 51 | ಮೈಸೂರು | ಕೆ.ಆರ್.ನಗರ | 29260623013 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್‌ಎಂಎಸ್‌ಎ ಕೆ ಆರ್ ನಗರ |
| 52 | ಮೈಸೂರು | ನಂಜನಗೂಡು | 29260906002 | ಸರ್ಕಾರಿ ಆದರ್ಶ ವಿದ್ಯಾಲಯ, ದೇಬೂರು |

| | | | | |
|---|---|---|---|---|
| 53 | ಮೈಸೂರು | ಟಿ.ನರಸೀಪುರ | 29261115807 | ಸರ್ಕಾರಿ ಆದರ್ಶ ವಿದ್ಯಾಲಯ, ಸೋಸಲೆ |
| 54 | ಮೈಸೂರು | ಮೈಸೂರು ದಕ್ಷಿಣ | 29261201327 | ಸರ್ಕಾರಿ ಆದರ್ಶವಿದ್ಯಾಲಯ, ಮೈಸೂರು ದಕ್ಷಿಣ |
| 55 | ರಾಯಚೂರು | ದೇವದುರ್ಗ | 29060101215 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಅರಕೇರ |
| 56 | ರಾಯಚೂರು | ಲಿಂಗಸಗೂರು | 29060523106 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಲಿಂಗಸುಗೂರು |
| 57 | ರಾಯಚೂರು | ಮಾನ್ವಿ | 29060618417 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಎಂಎಸ್ಎ ನೀರಮಾನ್ವಿ |
| 58 | ರಾಯಚೂರು | ರಾಯಚೂರು | 29060716609 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಯರಮರಸ್ |
| 59 | ರಾಯಚೂರು | ಸಿಂಧನೂರು | 29060818108 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಸಿಂಧನೂರು |
| 60 | ರಾಮನಗರ | ಚೆನ್ನಪಟ್ಟಣ | 29320703102 | ಸರ್ಕಾರಿ ಆದರ್ಶ ವಿದ್ಯಾಲಯ, ಮಟ್ಟಿಕೆರೆ ಶೆಟ್ಟಿಹಳ್ಳಿ |
| 61 | ರಾಮನಗರ | ಕನಕಪುರ | 29320819310 | ಸರ್ಕಾರಿ ಆದರ್ಶ ವಿದ್ಯಾಲಯ, ಕನಕಪುರ |
| 62 | ಮಧುಗಿರಿ | ಪಾವಗಡ | 29310513511 | ಸರ್ಕಾರಿ ಆದರ್ಶ ವಿದ್ಯಾಲಯ, ಪಾವಗಡ |
| 63 | ವಿಜಯನಗರ | ಹಗರಿಬೊಮ್ಮನಹಳ್ಳಿ | 29120301440 | ಸರ್ಕಾರಿ ಆದರ್ಶ ವಿದ್ಯಾಲಯ, ಹಗರಿಬೊಮ್ಮನಹಳ್ಳಿ |
| 64 | ವಿಜಯನಗರ | ಹೊಸಪೇಟೆ | 29120509207 | ಸರ್ಕಾರಿ ಆದರ್ಶ ವಿದ್ಯಾಲಯ, ಹೊಸಪೇಟೆ |
| 65 | ವಿಜಯನಗರ | ಕೂಡ್ಲಿಗಿ | 29120608802 | ಸರ್ಕಾರಿ ಆದರ್ಶ ವಿದ್ಯಾಲಯ, ಕೂಡ್ಲಿಗಿ |
| 66 | ವಿಜಯನಗರ | ಹರಪ್ಪನಹಳ್ಳಿ | 29140709701 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಅನಂತನಹಳ್ಳಿ |
| 67 | ವಿಜಯಪುರ | ಬಸವನ ಬಾಗೇವಾಡಿ | 29030304807 | ಸರಕಾರಿ ಸರ್ಕಾರಿ ಆದರ್ಶ ವಿದ್ಯಾಲಯ, ಹುಣಶ್ಯಾಳ ಪಿ.ಬಿ |
| 68 | ವಿಜಯಪುರ | ವಿಜಯಪುರ(ಗ್ರಾ) | 29030505404 | ಸರಕಾರಿ ಸರ್ಕಾರಿ ಆದರ್ಶ ವಿದ್ಯಾಲಯ, ಕಗ್ಗೋಡು |
| 69 | ವಿಜಯಪುರ | ಇಂಡಿ | 29030823409 | ಸರ್ಕಾರಿ ಸರ್ಕಾರಿ ಆದರ್ಶ ವಿದ್ಯಾಲಯ, ಇಂಡಿ |
| 70 | ವಿಜಯಪುರ | ಮುದ್ದೇಬಿಹಾಳ | 29031002306 | ಸರ್ಕಾರಿ ಸರ್ಕಾರಿ ಆದರ್ಶ ವಿದ್ಯಾಲಯ, ಬಿದರಕುಂದಿ |
| 71 | ವಿಜಯಪುರ | ಸಿಂಧಗಿ | 29031216602 | ಸರ್ಕಾರಿ ಆದರ್ಶ ವಿದ್ಯಾಲಯ, ಸಿಂದಗಿ |
| 72 | ಯಾದಗಿರಿ | ಶಹಾಪುರ | 29330718504 | ಸರ್ಕಾರಿ ಆದರ್ಶ ವಿದ್ಯಾಲಯ, ಶಹಾಪುರ |
| 73 | ಯಾದಗಿರಿ | ಶೋರಾಪುರ | 29330820908 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್.ಎಂ.ಎಸ್.ಎ) ವಜ್ಜಲ್ |
| 74 | ಯಾದಗಿರಿ | ಯಾದಗಿರಿ | 29331026213 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್.ಎಂ.ಎಸ್.ಎ) ಯಾದಗಿರಿ |

**74 ಆದರ್ಶ ವಿದ್ಯಾಲಯಗಳ ಎಸ್.ಎಸ್.ಎಲ್.ಸಿ ಫಲಿತಾಂಶ – 2023–24**

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿ ಹೆಸರು | ಶಾಲಾ ಡೈಸ್ ಸಂಖ್ಯೆ | ಆದರ್ಶ ಶಾಲೆಯ ಹೆಸರು | APPEARED | | | PASSED | | | PERCENTAGE | | |
|---|---|---|---|---|---|---|---|---|---|---|---|---|---|
| | | | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಬಾಗಲಕೋಟೆ | ಬಾದಾಮಿ | 29020115206 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಚಿಕ್ಕಮುಚ್ಚಲಗುಡ್ಡ | 39 | 37 | **76** | 39 | 36 | **75** | 100.00 | 97.30 | **98.68** |
| 2 | ಬಾಗಲಕೋಟೆ | ಬಾಗಲಕೋಟೆ | 29020212512 | ಸರ್ಕಾರಿ ಆದರ್ಶ ವಿದ್ಯಾಲಯ, ನವನಗರ ಬಾಗಲಕೋಟ | 42 | 41 | **83** | 41 | 41 | **82** | 97.62 | 100.00 | **98.80** |
| 3 | ಬಾಗಲಕೋಟೆ | ಬೀಳಗಿ | 29020608012 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಬೀಳಗಿ | 44 | 33 | **77** | 44 | 33 | **77** | 100.00 | 100.00 | **100.00** |
| 4 | ಬಾಗಲಕೋಟೆ | ಹುನಗುಂದ | 29020720205 | ಸರ್ಕಾರಿ ಸರ್ಕಾರಿ ಆದರ್ಶ ವಿದ್ಯಾಲಯ, ಹುನಗುಂದ | 42 | 32 | **74** | 41 | 32 | **73** | 97.62 | 100.00 | **98.65** |
| 5 | ಬಾಗಲಕೋಟೆ | ಜಮಖಂಡಿ | 29020910003 | ಸರ್ಕಾರ ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಜಮಖಂಡಿ | 37 | 34 | **71** | 36 | 34 | **70** | 97.30 | 100.00 | **98.59** |
| 6 | ಬಾಗಲಕೋಟೆ | ಮುಧೋಳ | 29021115308 | ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಲೋಕಾಪುರ–ಲಕ್ಷನಟ್ಟಿ | 49 | 24 | **73** | 48 | 24 | **72** | 97.96 | 100.00 | **98.63** |
| 7 | ಬಳ್ಳಾರಿ | ಬಳ್ಳಾರಿ ಪಶ್ಚಿಮ | 29120115107 | ಸರ್ಕಾರಿ ಆದರ್ಶ ವಿದ್ಯಾಲಯ, ಬಳ್ಳಾರಿ | 46 | 30 | **76** | 44 | 30 | **74** | 95.65 | 100.00 | **97.37** |
| 8 | ಬಳ್ಳಾರಿ | ಸಂಡೂರು | 29120701007 | ಸರ್ಕಾರಿ ಆದರ್ಶ ವಿದ್ಯಾಲಯ, ಕೃಷ್ಣನಗರ ಸಂಡೂರು | 33 | 35 | **68** | 32 | 34 | **66** | 96.97 | 97.14 | **97.06** |
| 9 | ಬಳ್ಳಾರಿ | ಸಿರಗುಪ್ಪ | 29120802106 | ಸರ್ಕಾರಿ ಆದರ್ಶ ವಿದ್ಯಾಲಯ, ಸಿರುಗುಪ್ಪ | 52 | 24 | **76** | 39 | 24 | **63** | 75.00 | 100.00 | **82.89** |
| 10 | ಬೆಳಗಾವಿ | ರಾಮದುರ್ಗ | 29011114302 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ರಾಮದುರ್ಗ | 36 | 42 | **78** | 33 | 42 | **75** | 91.67 | 100.00 | **96.15** |
| 11 | ಬೆಳಗಾವಿ | ಸವದತ್ತಿ | 29011208102 | ಆದರ್ಶ ವಿದ್ಯಾಲಯಾ, ಯಡ್ರಾವಿ ಸೌಂದತ್ತಿ | 35 | 36 | **71** | 32 | 36 | **68** | 91.43 | 100.00 | **95.77** |
| 12 | ಬೆಳಗಾಂ ಚಿಕ್ಕೋಡಿ | ಗೋಕಾಕ | 29300613103 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್.ಎಂ.ಎಸ್.ಎ. ಖಾನಗಾಂವ್ | 45 | 27 | **72** | 43 | 27 | **70** | 95.56 | 100.00 | **97.22** |
| 13 | ಬೆಳಗಾಂ ಚಿಕ್ಕೋಡಿ | ರಾಯಭಾಗ | 29301004008 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್.ಎಂ.ಎಸ್.ಎ, ಮೇಖಳಿ | 39 | 33 | **72** | 37 | 33 | **70** | 94.87 | 100.00 | **97.22** |
| 14 | ಬೀದರ್ | ಔರಾದ್ | 29050100158 | ಖಿಐಖಂ ಆದರ್ಶ ವಿದ್ಯಾಲ್ಯಾ ಔರಾದ್ (ಬಿ) | 52 | 26 | **78** | 47 | 24 | **71** | 90.38 | 92.31 | **91.03** |
| 15 | ಬೀದರ್ | ಬಸವಕಲ್ಯಾಣ | 29050213410 | ಸರ್ಕಾರಿ ಆದರ್ಶ ವಿದ್ಯಾಲಯ, ರಾಜೋಲ | 50 | 24 | **74** | 47 | 23 | **70** | 94.00 | 95.83 | **94.59** |
| 16 | ಬೀದರ್ | ಬೀದರ್ | 29050405717 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಜನವಾಡ | 42 | 30 | **72** | 42 | 29 | **71** | 100.00 | 96.67 | **98.61** |
| 17 | ಬೀದರ್ | ಹುಮ್ನಾಬಾದ್ | 29050500911 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಬೆಮಲ್ಖೇಡ | 37 | 34 | **71** | 28 | 29 | **57** | 75.68 | 85.29 | **80.28** |
| 18 | ಚಾಮರಾಜನಗರ | ಚಾಮರಾಜನಗರ | 29270126505 | ಸರ್ಕಾರಿ ಆದರ್ಶ ವಿದ್ಯಾಲಯ, ಚಾಮರಾಜನಗರ | 39 | 36 | **75** | 39 | 36 | **75** | 100.00 | 100.00 | **100.00** |
| 19 | ಚಾಮರಾಜನಗರ | ಗುಂಡ್ಲುಪೇಟೆ | 29270219002 | ಸರ್ಕಾರಿ ಆದರ್ಶವಿದ್ಯಾಲಯ, ಆರ್.ಎಂ.ಎಸ್.ಎ, ಗುಂಡ್ಲುಪೇಟೆ | 22 | 56 | **78** | 22 | 55 | **77** | 100.00 | 98.21 | **98.72** |
| 20 | ಚಾಮರಾಜನಗರ | ಕೊಳ್ಳೇಗಾಲ | 29270529615 | ಸರ್ಕಾರಿ ಆದರ್ಶ ವಿದ್ಯಾಲಯ, ಕೊಳ್ಳೇಗಾಲ | 32 | 45 | **77** | 32 | 45 | **77** | 100.00 | 100.00 | **100.00** |

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿ ಹೆಸರು | ಶಾಲಾ ಡೈಸ್ ಸಂಖ್ಯೆ | ಆದರ್ಶ ಶಾಲೆಯ ಹೆಸರು | APPEARED | | | PASSED | | | PERCENTAGE | | |
|---|---|---|---|---|---|---|---|---|---|---|---|---|---|
| | | | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 21 | ಚಾಮರಾಜನಗರ | ಯಳಂದೂರು | 29271204302 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್.ಎಂ.ಎಸ್.ಎ, ಮೆಳ್ಳಹಳ್ಳಿ | 27 | 52 | **79** | 27 | 51 | **78** | 100.00 | 98.08 | **98.73** |
| 22 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 29290121940 | ಸರ್ಕಾರಿ ಆದರ್ಶ ವಿದ್ಯಾಲಯ, ದೇವರಗುಡಿಪಲ್ಲಿ | 46 | 31 | **77** | 45 | 31 | **76** | 97.83 | 100.00 | **98.70** |
| 23 | ಚಿಕ್ಕಬಳ್ಳಾಪುರ | ಚಿಂತಾಮಣಿ | 29290442711 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್.ಎಂ.ಎಸ್.ಎ, ಚಿಂತಾಮಣಿ | 39 | 28 | **67** | 27 | 25 | **52** | 69.23 | 89.29 | **77.61** |
| 24 | ಚಿಕ್ಕಬಳ್ಳಾಪುರ | ಗೌರಿಬಿದನೂರು | 29290523811 | ಸರ್ಕಾರಿ ಆದರ್ಶ ವಿದ್ಯಾಲಯ, ಗೌರಿಬಿದನೂರು | 38 | 39 | **77** | 38 | 38 | **76** | 100.00 | 97.44 | **98.70** |
| 25 | ಚಿಕ್ಕಬಳ್ಳಾಪುರ | ಗುಡಿಬಂಡೆ | 29290611706 | ಸರ್ಕಾರಿ ಆದರ್ಶ ವಿದ್ಯಾಲಯ, ಜೆ ಪಿ ನಗರ ಬೀಚಗನಹಳ್ಳಿ ಕ್ರಾಸ್ ಗುಡಿಬಂಡೆ | 38 | 38 | **76** | 30 | 33 | **63** | 78.95 | 86.84 | **82.89** |
| 26 | ಚಿತ್ರದುರ್ಗ | ಚಿಳ್ಳಕೆರೆ | 29130219806 | ಸರ್ಕಾರಿ ಆದರ್ಶ ವಿದ್ಯಾಲಯ, ಚಳ್ಳಕೆರೆ | 38 | 33 | **71** | 38 | 33 | **71** | 100.00 | 100.00 | **100.00** |
| 27 | ಚಿತ್ರದುರ್ಗ | ಮೊಳಕಾಲ್ಮೂರು | 29130612408 | ಸರ್ಕಾರಿ ಆದರ್ಶ ವಿದ್ಯಾಲಯ, ಖಿಜಖಿ ಮೊಳಕಾಲ್ಮುರು | 37 | 39 | **76** | 33 | 39 | **72** | 89.19 | 100.00 | **94.74** |
| 28 | ಧಾರವಾಡ | ಧಾರವಾಡ | 29090112716 | ಸರ್ಕಾರಿ ಆದರ್ಶ ವಿದ್ಯಾಲಯ, ಧಾರವಾಡ | 35 | 45 | **80** | 35 | 45 | **80** | 100.00 | 100.00 | **100.00** |
| 29 | ಧಾರವಾಡ | ಕಲಘಟಗಿ | 29090308828 | ಸರ್ಕಾರಿ ಆದರ್ಶ ವಿದ್ಯಾಲಯ, ಕಲಘಟಗಿ | 43 | 30 | **73** | 42 | 30 | **72** | 97.67 | 100.00 | **98.63** |
| 30 | ಗದಗ | ಮುಂಡರಗಿ | 29080207107 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಮುಂಡರಗಿ | 34 | 41 | **75** | 34 | 41 | **75** | 100.00 | 100.00 | **100.00** |
| 31 | ಗದಗ | ರೋಣ | 29080413202 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಇಟಗಿ | 42 | 37 | **79** | 42 | 37 | **79** | 100.00 | 100.00 | **100.00** |
| 32 | ಹಾಸನ | ಹೆಚ್.ಎನ್.ಪುರ | 29230612146 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಎಂಎಸ್ಎ, ತಟ್ಟೆಕೆರೆ | 40 | 38 | **78** | 38 | 38 | **76** | 95.00 | 100.00 | **97.44** |
| 33 | ಕಲಬುರ್ಗಿ | ಆಳಂದ | 29040116413 | ಸರಕಾರ ಸರ್ಕಾರಿ ಆದರ್ಶ ವಿದ್ಯಾಲಯ, ಆಳಂದ | 40 | 39 | **79** | 27 | 36 | **63** | 67.50 | 92.31 | **79.75** |
| 34 | ಕಲಬುರ್ಗಿ | ಅಫಜಲಪುರ | 29040210005 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಅತನೂರ್ | 41 | 36 | **77** | 37 | 32 | **69** | 90.24 | 88.89 | **89.61** |
| 35 | ಕಲಬುರ್ಗಿ | ಚಿಂಚೋಳಿ | 29040302236 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಪೋಲಕಪಲ್ಲಿ | 49 | 27 | **76** | 36 | 24 | **60** | 73.47 | 88.89 | **78.95** |
| 36 | ಕಲಬುರ್ಗಿ | ಚಿತ್ತಾಪುರ | 29040423308 | ಸರ್ಕಾರಿ ಆದರ್ಶ ವಿದ್ಯಾಲಯ, ಚಿತ್ತಾಪುರ | 40 | 30 | **70** | 31 | 27 | **58** | 77.50 | 90.00 | **82.86** |
| 37 | ಕಲಬುರ್ಗಿ | ಜೇವರ್ಗಿ | 29040619304 | ಸಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಚನ್ನೂರು | 36 | 34 | **70** | 32 | 33 | **65** | 88.89 | 97.06 | **92.86** |
| 38 | ಕಲಬುರ್ಗಿ | ಸೇಡಂ | 29040901302 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಎಂಎಸ್ಎ ಬಿಬ್ಬಳ್ಳಿ | 35 | 43 | **78** | 29 | 35 | **64** | 82.86 | 81.40 | **82.05** |
| 39 | ಕಲಬುರ್ಗಿ | ಕಲಬುರ್ಗಿ ದಕ್ಷಿಣ | 29041108526 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಎಂಎಸ್ಎ ಶಾಲೆ ಭೀಮಳ್ಳಿ | 40 | 33 | **73** | 30 | 32 | **62** | 75.00 | 96.97 | **84.93** |
| 40 | ಕೋಲಾರ | ಬಂಗಾರಪೇಟೆ | 29190243406 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಎಂಎಸ್ಎ ಬಂಗಾರಪೇಟೆ | 35 | 41 | **76** | 28 | 39 | **67** | 80.00 | 95.12 | **88.16** |

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿ ಹೆಸರು | ಶಾಲಾ ಡೈಸ್ ಸಂಖ್ಯೆ | ಆದರ್ಶ ಶಾಲೆಯ ಹೆಸರು | APPEARED | | | PASSED | | | PERCENTAGE | | |
|---|---|---|---|---|---|---|---|---|---|---|---|---|---|
| | | | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 41 | ಕೋಲಾರ | ಮುಳಬಾಗಿಲು | 29191048103 | ಸರ್ಕಾರಿ ಆದರ್ಶ ವಿದ್ಯಾಲಯ, ಮುಳಬಾಗಿಲು | 37 | 41 | **78** | 35 | 37 | **72** | 94.59 | 90.24 | **92.31** |
| 42 | ಕೋಲಾರ | ಶ್ರೀನಿವಾಸಪುರ | 29191245301 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಎಂಎಸ್ಎ ಕಲ್ಲೂರು | 44 | 32 | **76** | 32 | 29 | **61** | 72.73 | 90.63 | **80.26** |
| 43 | ಕೊಪ್ಪಳ | ಗಂಗಾವತಿ | 29070208421 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಕನಕಗಿರಿ | 28 | 38 | **66** | 25 | 35 | **60** | 89.29 | 92.11 | **90.91** |
| 44 | ಕೊಪ್ಪಳ | ಕೊಪ್ಪಳ | 29070311360 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಎಂಎಸ್ಎ ಕೊಪ್ಪಳ | 42 | 37 | **79** | 37 | 37 | **74** | 88.10 | 100.00 | **93.67** |
| 45 | ಕೊಪ್ಪಳ | ಕುಷ್ಟಗಿ | 29070409622 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಎಂಎಸ್ಎ ತಳವಗೇರ | 48 | 29 | **77** | 47 | 29 | **76** | 97.92 | 100.00 | **98.70** |
| 46 | ಕೊಪ್ಪಳ | ಯಲಬುರ್ಗ | 29070906107 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಇಟಗಿ | 33 | 37 | **70** | 33 | 37 | **70** | 100.00 | 100.00 | **100.00** |
| 47 | ಮಂಡ್ಯ | ಮಳವಳ್ಳಿ | 29220313806 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್.ಎಂ.ಎಸ್.ಎ ಮಾರೇಹಳ್ಳಿ, ಮಳವಳ್ಳಿ | 33 | 46 | **79** | 32 | 46 | **78** | 96.97 | 100.00 | **98.73** |
| 48 | ಮಂಡ್ಯ | ಪಾಂಡವಪುರ | 29220619807 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಎಂಎಸ್ಎ ಯೇಳೇಕೆರೆ | 30 | 43 | **73** | 28 | 43 | **71** | 93.33 | 100.00 | **97.26** |
| 49 | ಮೈಸೂರು | ಹೆಚ್.ಡಿ.ಕೋಟೆ | 29260334207 | ಸರ್ಕಾರಿ ಆದರ್ಶ ವಿದ್ಯಾಲಯ, ಎಚ್.ಡಿ.ಕೋಟೆ | 29 | 50 | **79** | 29 | 50 | **79** | 100.00 | 100.00 | **100.00** |
| 50 | ಮೈಸೂರು | ಹುಣಸೂರು | 29260427501 | ಸರ್ಕಾರಿ ಆದರ್ಶ ವಿದ್ಯಾಲಯ, ಹುಣಸೂರು | 27 | 53 | **80** | 27 | 52 | **79** | 100.00 | 98.11 | **98.75** |
| 51 | ಮೈಸೂರು | ಕೆ.ಆರ್.ನಗರ | 29260623013 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಎಂಎಸ್ಎ ಕೆ ಆರ್ ನಗರ | 33 | 45 | **78** | 33 | 45 | **78** | 100.00 | 100.00 | **100.00** |
| 52 | ಮೈಸೂರು | ನಂಜನಗೂಡು | 29260906002 | ಸರ್ಕಾರಿ ಆದರ್ಶ ವಿದ್ಯಾಲಯ, ದೇಬೂರು | 32 | 48 | **80** | 31 | 48 | **79** | 96.88 | 100.00 | **98.75** |
| 53 | ಮೈಸೂರು | ಟಿ.ನರಸೀಪುರ | 29261115807 | ಸರ್ಕಾರಿ ಆದರ್ಶ ವಿದ್ಯಾಲಯ, ಸೋಸಲೆ | 32 | 45 | **77** | 32 | 45 | **77** | 100.00 | 100.00 | **100.00** |
| 54 | ಮೈಸೂರು | ಮೈಸೂರು ದಕ್ಷಿಣ | 29261201327 | ಸರ್ಕಾರಿ ಆದರ್ಶವಿದ್ಯಾಲಯ, ಮೈಸೂರು ದಕ್ಷಿಣ | 34 | 43 | **77** | 34 | 43 | **77** | 100.00 | 100.00 | **100.00** |
| 55 | ರಾಯಚೂರು | ದೇವದುರ್ಗ | 29060101215 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಅರಕೇರ | 33 | 19 | **52** | 30 | 18 | **48** | 90.91 | 94.74 | **92.31** |
| 56 | ರಾಯಚೂರು | ಲಿಂಗಸಗೂರು | 29060523106 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಲಿಂಗಸುಗೂರು | 39 | 40 | **79** | 36 | 39 | **75** | 92.31 | 97.50 | **94.94** |
| 57 | ರಾಯಚೂರು | ಮಾನ್ವಿ | 29060618417 | ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಎಂಎಸ್ಎ ನೀರಮಾನ್ವಿ | 44 | 32 | **76** | 42 | 31 | **73** | 95.45 | 96.88 | **96.05** |
| 58 | ರಾಯಚೂರು | ರಾಯಚೂರು | 29060716609 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಯರಮರಸ್ | 50 | 30 | **80** | 35 | 30 | **65** | 70.00 | 100.00 | **81.25** |
| 59 | ರಾಯಚೂರು | ಸಿಂಧನೂರು | 29060818108 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಸಿಂಧನೂರು | 34 | 36 | **70** | 32 | 35 | **67** | 94.12 | 97.22 | **95.71** |
| 60 | ರಾಮನಗರ | ಚೆನ್ನಪಟ್ಟಣ | 29320703102 | ಸರ್ಕಾರಿ ಆದರ್ಶ ವಿದ್ಯಾಲಯ, ಮಟ್ಟಿಕೆರೆ ಶೆಟ್ಟಿಹಳ್ಳಿ | 41 | 37 | **78** | 36 | 34 | **70** | 87.80 | 91.89 | **89.74** |

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿ ಹೆಸರು | ಶಾಲಾ ಡೈಸ್ ಸಂಖ್ಯೆ | ಆದರ್ಶ ಶಾಲೆಯ ಹೆಸರು | APPEARED | | | PASSED | | | PERCENTAGE | | |
|---|---|---|---|---|---|---|---|---|---|---|---|---|---|
| | | | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 61 | ರಾಮನಗರ | ಕನಕಪುರ | 29320819310 | ಸರ್ಕಾರಿ ಆದರ್ಶ ವಿದ್ಯಾಲಯ, ಕನಕಪುರ | 32 | 44 | **76** | 29 | 42 | **71** | 90.63 | 95.45 | **93.42** |
| 62 | ಮಧುಗಿರಿ | ಪಾವಗಡ | 29310513511 | ಸರ್ಕಾರಿ ಆದರ್ಶ ವಿದ್ಯಾಲಯ, ಪಾವಗಡ | 37 | 39 | **76** | 29 | 32 | **61** | 78.38 | 82.05 | **80.26** |
| 63 | ವಿಜಯನಗರ | ಹಗರಿಬೊಮ್ಮನಹಳ್ಳಿ | 29120301440 | ಸರ್ಕಾರಿ ಆದರ್ಶ ವಿದ್ಯಾಲಯ, ಹಗರಿಬೊಮ್ಮನಹಳ್ಳಿ | 37 | 38 | **75** | 34 | 38 | **72** | 91.89 | 100.00 | **96.00** |
| 64 | ವಿಜಯನಗರ | ಹೊಸಪೇಟೆ | 29120509207 | ಸರ್ಕಾರಿ ಆದರ್ಶ ವಿದ್ಯಾಲಯ, ಹೊಸಪೇಟೆ | 36 | 41 | **77** | 32 | 41 | **73** | 88.89 | 100.00 | **94.81** |
| 65 | ವಿಜಯನಗರ | ಕೂಡ್ಲಿಗಿ | 29120608802 | ಸರ್ಕಾರಿ ಆದರ್ಶ ವಿದ್ಯಾಲಯ, ಕೂಡ್ಲಿಗಿ | 34 | 37 | **71** | 34 | 37 | **71** | 100.00 | 100.00 | **100.00** |
| 66 | ವಿಜಯನಗರ | ಹರಪ್ಪನಹಳ್ಳಿ | 29140709701 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್ಎಂಎಸ್ಎ) ಅನಂತನಹಳ್ಳಿ | 34 | 33 | **67** | 31 | 33 | **64** | 91.18 | 100.00 | **95.52** |
| 67 | ವಿಜಯಪುರ | ಬಸವನ ಬಾಗೇವಾಡಿ | 29030304807 | ಸರ್ಕಾರಿ ಆದರ್ಶ ವಿದ್ಯಾಲಯ, ಹುಣಶ್ಯಾಳ ಪಿ.ಬಿ | 35 | 31 | **66** | 35 | 31 | **66** | 100.00 | 100.00 | **100.00** |
| 68 | ವಿಜಯಪುರ | ವಿಜಯಪುರ(ಗ್ರಾ) | 29030505404 | ಸರ್ಕಾರಿ ಆದರ್ಶ ವಿದ್ಯಾಲಯ, ಕಗ್ಗೋಡು | 42 | 25 | **67** | 42 | 25 | **67** | 100.00 | 100.00 | **100.00** |
| 69 | ವಿಜಯಪುರ | ಇಂಡಿ | 29030823409 | ಸರ್ಕಾರಿ ಆದರ್ಶ ವಿದ್ಯಾಲಯ, ಇಂಡಿ | 47 | 21 | **68** | 44 | 21 | **65** | 93.62 | 100.00 | **95.59** |
| 70 | ವಿಜಯಪುರ | ಮುದ್ದೇಬಿಹಾಳ | 29031002306 | ಸರ್ಕಾರಿ ಆದರ್ಶ ವಿದ್ಯಾಲಯ, ಬಿದರಕುಂದಿ | 36 | 34 | **70** | 35 | 32 | **67** | 97.22 | 94.12 | **95.71** |
| 71 | ವಿಜಯಪುರ | ಸಿಂಧಗಿ | 29031216602 | ಸರ್ಕಾರಿ ಆದರ್ಶ ವಿದ್ಯಾಲಯ, ಸಿಂದಗಿ | 36 | 30 | **66** | 36 | 30 | **66** | 100.00 | 100.00 | **100.00** |
| 72 | ಯಾದಗಿರಿ | ಶಹಾಪುರ | 29330718504 | ಸರ್ಕಾರಿ ಆದರ್ಶ ವಿದ್ಯಾಲಯ, ಶಹಾಪುರ | 43 | 34 | **77** | 40 | 34 | **74** | 93.02 | 100.00 | **96.10** |
| 73 | ಯಾದಗಿರಿ | ಶೋರಾಪುರ | 29330820908 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್.ಎಂ.ಎಸ್.ಎ) ವಜ್ಜಲ್ | 18 | 19 | **37** | 15 | 18 | **33** | 83.33 | 94.74 | **89.19** |
| 74 | ಯಾದಗಿರಿ | ಯಾದಗಿರಿ | 29331026213 | ಸರ್ಕಾರಿ ಆದರ್ಶ ವಿದ್ಯಾಲಯ, (ಆರ್.ಎಂ.ಎಸ್.ಎ) ಯಾದಗಿರಿ | 37 | 30 | **67** | 33 | 30 | **63** | 89.19 | 100.00 | **94.03** |
| | | | | **ಒಟ್ಟು** | **2813** | **2650** | **5463** | **2580** | **2573** | **5153** | **91.72** | **97.09** | **94.33** |

**ನೇತಾಜಿ ಸುಭಾಷ್ ಚಂದ್ರ ಬೋಸ್ ಆವಾಸ್ಯ ವಿದ್ಯಾಲಯಗಳು**

**(ನಿರ್ದಿಷ್ಟ ವರ್ಗಗಳ ಮಕ್ಕಳಿಗೆ ವಸತಿ ಶಾಲೆ)**



2010-11 ನೇ ಸಾಲಿನ ಸಮಗ್ರ ಶಿಕ್ಷಣ ಕರ್ನಾಟಕ ಪೂರಕ ಪಿಎಬಿ ಯೋಜನೆಯಡಿಯಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿವಿಧ ವರ್ಗಗಳ ಶಿಕ್ಷಣ ವಂಚಿತ ಮಕ್ಕಳಿಗಾಗಿ ರಾಜ್ಯದ 5 ಜಿಲ್ಲೆಗಳಲ್ಲಿ, ಬೆಂಗಳೂರು ದಕ್ಷಿಣ(ಅರೇಹಳ್ಳಿ), ಮೈಸೂರು(ನಜರಾಬಾದ್), ಧಾರವಾಡ(ಘಂಟಿಕೇರಿ), ಶಿವಮೊಗ್ಗ(ಆಗುಂಬೆ) ಹಾಗೂ ದಕ್ಷಿಣ ಕನ್ನಡ ಜಿಲ್ಲೆ(ಬೆಳ್ತಂಗಡಿ)ಗಳಲ್ಲಿ ಜಿಲ್ಲೆಗೆ ಒಂದರಂತೆ ವಸತಿ ಶಾಲೆಗಳು ಪ್ರಾರಂಭಿಸಲಾಗಿವೆ. ಪ್ರತಿ ವಸತಿ ಶಾಲೆಯಲ್ಲಿ 6 ರಿಂದ 8ನೇ ತರಗತಿಯ ವರೆಗೆ ಒಟ್ಟು 100 ಮಕ್ಕಳ (ಬಾಲಕ ಮತ್ತು ಬಾಲಕಿಯರು) ಪ್ರವೇಶಕ್ಕಾಗಿ ಸೌಲಭ್ಯವಿರುತ್ತದೆ. 2023-24ನೇ ಸಾಲಿನಲ್ಲಿ ಒಂದು ಹೊಸ ವಸತಿ ಶಾಲೆ ಬೆಂಗಳೂರು ದಕ್ಷಿಣ-2 (ಸುಲ್ತಾನ್ ಪೇಟೆ)ಯಲ್ಲಿ ಪ್ರಾರಂಭವಾಗಿದೆ.

## ಮೂಲ ಉದ್ದೇಶ:

ಗುಡ್ಡಗಾಡು ಪ್ರದೇಶದ ಮಕ್ಕಳು, ವಸತಿ ರಹಿತ, ಬೀದಿ ಮಕ್ಕಳು, ಅವಕಾಶ ವಂಚಿತ ಮಕ್ಕಳು, ಅನಾಥ ಮಕ್ಕಳು, ಅರಣ್ಯ ಹಾಗು ನಕ್ಸಲೈಟ್ ಪೀಡಿತ ವರ್ಗದ ಮಕ್ಕಳು ಹಾಗೂ ಇತರೆ ವರ್ಗದ ಮಕ್ಕಳಿಗೆ ಉತ್ತಮ ವಸತಿ ಹಾಗೂ ಶಿಕ್ಷಣ ನೀಡುವುದು.

- **ವಸತಿ ಶಾಲೆಗಳಲ್ಲಿನ ವಿವಿಧ ಸೌಲಭ್ಯಗಳು**:
  - ಈ ವಸತಿ ಶಾಲೆಗಳು ಸೌಲಭ್ಯ ವಂಚಿತ ಮಕ್ಕಳಿಗೆ ಅತ್ಯುತ್ತಮ ಶಾಲೆಗಳಾಗಿರುತ್ತವೆ. ವಸತಿ ಶಾಲೆಯಲ್ಲಿನ ಮಕ್ಕಳಿಗೆ ಕಾಲ ಕಾಲಕ್ಕೆ ಗುಣಮಟ್ಟದ ಶಿಕ್ಷಣ ಹಾಗೂ ನಿರಂತರ ಶಿಕ್ಷಣ ಪಡೆಯಲು ಉತ್ತಮ ಅವಕಾಶ ಕಲ್ಪಿಸುತ್ತಿವೆ. ಮಕ್ಕಳಿಗೆ ಆತ್ಮ ವಿಶ್ವಾಸ, ವೈಯಕ್ತಿಕ ಸ್ವಚ್ಛತೆ, ಪಠ್ಯ ಮತ್ತು ಸಹ ಪಠ್ಯ ಶಿಕ್ಷಣ, ಸ್ವ-ಅಭಿವೃದ್ಧಿ ತರಬೇತಿಗಳು, ನಿರಂತರ ವೈದ್ಯಕೀಯ ತಪಾಸಣೆ, ಪೌಷ್ಟಿಕ ಆಹಾರ, ಸುರಕ್ಷಿತ ವಸತಿ

ಸೌಲಭ್ಯ ಹಾಗೂ ಸರ್ಕಾರದಿಂದ ನೀಡಲಾಗುವ ಇತರೆ ಎಲ್ಲಾ ಸವಲತ್ತುಗಳನ್ನು ಈ ಮಕ್ಕಳಿಗೂ ನೀಡಲಾಗುತ್ತಿದೆ.

- ಗುಣಾತ್ಮಕ ಶಿಕ್ಷಣದ ಜೊತೆಗೆ ಜೀವನ ಕೌಶಲ ತರಬೇತಿಗಳಾದ ಹೊಲಿಗೆ, ಕಸೂತಿ, ಬೊಂಬೆ ತಯಾರಿಕೆ, ಮೇಣದ ಬತ್ತಿ ತಯಾರಿಕೆ, ವಿದ್ಯುತ್ ಉಪಕರಣಗಳ ದುರಸ್ತಿ, ಮೊಬೈಲ್ ಹಾಗೂ ಇತರೆ ಎಲೆಕ್ಟ್ರಾನಿಕ್ ಉಪಕರಣಗಳ ದುರಸ್ತಿ, ಕಂಪ್ಯೂಟರ್ ಹಾರ್ಡ್ವೇರ್ ತರಬೇತಿ, ಮುದ್ರಣ ತರಬೇತಿ ಹಾಗೂ ಇತರೆ ಸೂಕ್ತ ವೃತ್ತಿ ಕೌಶಲಗಳ ಕಲಿಕೆಗೆ ಅವಕಾಶ ಕಲ್ಪಿಸುವುದು. ಸ್ವಯಂ ರಕ್ಷಣ ಕೌಶಲಗಳಾದ ಕರಾಟೆ, ಯೋಗ ಮತ್ತು ಈಜು ಹಾಗೂ ವಿವಿಧ ಕ್ರೀಡೆಗಳಲ್ಲಿ ಸಹ ತರಬೇತಿಯನ್ನು ನೀಡಲಾಗುತ್ತಿದೆ.
- ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ವಸತಿ ಸೌಲಭ್ಯಗಳನ್ನು ಒದಗಿಸಲಾಗಿದೆ.
- ಈ ವಸತಿ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ಶಿಕ್ಷಣ ಕಲ್ಪಿಸಲಾಗಿದೆ.
- ಮಕ್ಕಳ ಸುರಕ್ಷತೆ ಹಾಗೂ ಆರೋಗ್ಯ ರಕ್ಷಣೆಗೆ ಅಗತ್ಯ ಕ್ರಮವಹಿಸಲಾಗಿದೆ.
- ಮಕ್ಕಳ ಹಾಜರಾತಿಯನ್ನು ಪ್ರೋತ್ಸಾಹಿಸಲು ಪ್ರತಿ ಮಾಹೆ ರೂ.100/-ಗಳಂತೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.
- ಶಿಕ್ಷಕರು ಮತ್ತು ಪೋಷಕರ ನಡುವೆ ಉತ್ತಮ ಸೌಹಾರ್ದ ಕಲ್ಪಿಸಲು ಶಿಕ್ಷಕ-ಪೋಷಕ ಸಭೆ ನಡೆಸಿ ಮಕ್ಕಳ ಕಲಿಕೆಯ ಬಗ್ಗೆ ಮಾಹಿತಿ ಒದಗಿಸಲಾಗುವುದು. ಶಾಲೆಗಳಲ್ಲಿ ಆಚರಿಸುವ ರಾಷ್ಟ್ರೀಯ ಹಬ್ಬಗಳಿಗೆ ಪೋಷಕರನ್ನು ಆಹ್ವಾನಿಸಲಾಗುವುದು. ಪೋಷಕರಿಗೂ ಸಹ ರಂಗೋಲಿ, ಓಟದ ಸ್ಪರ್ಧೆ ಇತ್ಯಾದಿಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

**2023-24 ನೇ ಸಾಲಿನ ಭೌತಿಕ ಮತ್ತು ಆರ್ಥಿಕ ಪ್ರಗತಿ ವಿವರ:**

| ಕ್ರ ಮ ಸಂ ಖ್ಯೆ | ಶಾಲೆಯ ಹೆಸರು | ಅನುಮೋದನೆಯಾದ ಮೊತ್ತ (ಲಕ್ಷಗಳಲ್ಲಿ) | | ಪ್ರಗತಿ | |
|---|---|---|---|---|---|
| | | ಭೌತಿಕ | ಒಟ್ಟು ಅನುಮೋದನೆಯಾದ/ ಬಿಡುಗಡೆಯಾದ ಮೊತ್ತ | ಭೌತಿಕ | ಒಟ್ಟು ವೆಚ್ಚ |
| 1 | ನೇತಾಜಿ ಸುಭಾಷ್ ಚಂದ್ರ ಬೋಸ್ ಆವಾಸ್ಯ ವಿದ್ಯಾಲಯ | 600 (ಮಕ್ಕಳು) | 404.54/307.63 | 482 | 336.27 |

**2023–24**

| ಕ್ರ.ಸಂ. | ಜಿಲ್ಲೆಗಳು | ಗಂಡು | ಹೆಣ್ಣು | ಒಟ್ಟು | ಎಸ್.ಸಿ | ಎಸ್.ಟಿ | ಮುಸ್ಲಿಂ | ಇತರೆ | ಒಟ್ಟು |
|---|---|---|---|---|---|---|---|---|---|
| 1 | ಬೆಂಗಳೂರು ದಕ್ಷಿಣ ವಲಯ–1 | 52 | 43 | 95 | 38 | 17 | 2 | 38 | **95** |
| 2 | ದಕ್ಷಿಣ ಕನ್ನಡ | 80 | 20 | 100 | 19 | 4 | 2 | 75 | **100** |
| 3 | ಧಾರವಾಡ | 51 | 49 | 100 | 19 | 4 | 9 | 68 | **100** |
| 4 | ಮೈಸೂರು | 72 | 28 | 100 | 33 | 10 | 0 | 57 | **100** |
| 5 | ಶಿವಮೊಗ್ಗ | 49 | 32 | 81 | 29 | 1 | 0 | 51 | **81** |
| 6 | ಬೆಂಗಳೂರು ದಕ್ಷಿಣ ವಲಯ–2 | 6 | 2 | 8 | 2 | 0 | 0 | 6 | **8** |
| | **ಒಟ್ಟು** | **310** | **174** | **484** | **140** | **36** | **13** | **295** | **484** |

# ಅಧ್ಯಾಯ–3

# ಕಾರ್ಯಕ್ರಮಗಳು

# <u>ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ವಿಶೇಷ ತರಬೇತಿ</u>

**1. ಮುನ್ನುಡಿ:**

ಶಿಕ್ಷಣವು ಸಮಾಜದ ಕನ್ನಡಿಯಾಗಿ ಗುರುತಿಸಲ್ಪಟ್ಟಿದೆ. ಶೈಕ್ಷಣಿಕ ಸಂಸ್ಥೆಗಳು ಸಮಾಜದ ಪ್ರತಿಬಿಂಬಗಳಾಗಿವೆ. ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್.ಇ.ಪಿ) ಶಿಕ್ಷಣದ ಆಧಾರ/ಅಡಿಪಾಯವಾಗಿದ್ದು ಶಿಕ್ಷಣವನ್ನು ಗಂಭೀರವಾಗಿ ಪರಿಗಣಿಸಿ ಭಾರತದಲ್ಲಿ ಇದನ್ನು ಸಾರ್ವತ್ರೀಕರಣಗೊಳಿಸಲಾಗಿದೆ. ಭಾರತದ ಸಂವಿಧಾನದಲ್ಲಿ 86ನೇ ತಿದ್ದುಪಡಿ ಮಾಡಿ ಸೇರ್ಪಡೆಗೊಳಿಸಿದ ಅನುಚ್ಛೇದ 21(ಎ)ಯು ಪ್ರಾಥಮಿಕ ಶಿಕ್ಷಣವನ್ನು ಮೂಲಭೂತಹಕ್ಕು ಹಾಗೂ ಜೀವನದ ಹಕ್ಕಾಗಿ ಪರಿಗಣಿಸಿದೆ. ಈ ವಿಧಿ ಅನುಸಾರ 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕಿದೆ. ಈ ಕಾಯಿದೆಯು ಪ್ರತಿ ರಾಜ್ಯಗಳ ಮತ್ತು ಕೇಂದ್ರ ಆಡಳಿತ ಪ್ರದೇಶಗಳಲ್ಲಿಯೂ ಸಹ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಎಲ್ಲರಿಗೂ ಮೂಲಭೂತ ಸೌಕರ್ಯಗಳೊಂದಿಗೆ ನೀಡುವಂತೆ ಮಾಡಿದೆ.

ಇತ್ತೀಚಿನ ದಿನಗಳಲ್ಲಿ ಜ್ಞಾನ ಪಡೆಯುವ ಅವಕಾಶಗಳು ಹೆಚ್ಚುತ್ತಿದ್ದು, ಯಾರೂ ಸಹ ಅನಕ್ಷರಸ್ಥರಾಗಿರಲು, ಮುಗ್ಧರಾಗಿರಲು ಇಚ್ಚಿಸುವುದಿಲ್ಲ. ಶಿಕ್ಷಣ ವಂಚಿತ ಸಮುದಾಯದಲ್ಲಿರುವ **'ಶಾಲೆಯಿಂದ ಹೊರಗುಳಿದಿರುವ ಮಕ್ಕಳು'** ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ಬರುವಂತೆ ಮಾಡಲು ಆರ್.ಟಿ.ಇ–2009 ಕಾಯಿದೆಯ ಪಾಲನೆ ಹೆಚ್ಚು ಸಹಕಾರಿಯಾಗಿದೆ. ಇದರ ಮೂಲಕ ಮಕ್ಕಳು ಅಂದರೆ ಓ.ಓ.ಎಸ್.ಸಿ ಮಕ್ಕಳು ಮುಖ್ಯವಾಹಿನಿಗೆ ಬರಲು ಅನೇಕ ಸವಲತ್ತುಗಳನ್ನು ನೀಡಲಾಗಿದೆ. ಅದರಲ್ಲಿಯೂ ಎಸ್.ಸಿ/ಎಸ್.ಟಿ ಅಲ್ಪಸಂಖ್ಯಾತರಿಗೆ, CWSN, UDC ನ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಸಹಕಾರಿಯಾಗಿದೆ.

ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ **'ಶಾಲೆಯಿಂದ ಹೊರಗುಳಿದ ಮಕ್ಕಳನ್ನು'** ವಿವಿಧ ಚಟುವಟಿಕೆ/ಕಾರ್ಯತಂತ್ರಗಳ ಮೂಲಕ ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ತರಲು ತರಬೇತಿ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

**2).2023–24 ಕಾರ್ಯ ನಿರ್ವಹಣೆ :**

2009ರ ಶಿಕ್ಷಣ ಹಕ್ಕು ಕಾಯ್ದೆಯ ಆಶಯದಂತೆ ಯಾವುದೇ ಮಗುವು ಶಾಲೆಯಿಂದ ಹೊರಗುಳಿಯುವಂತಿಲ್ಲ. ಕನಿಷ್ಠ 08 ವರ್ಷಗಳ ಔಪಚಾರಿಕ ಶಿಕ್ಷಣವನ್ನು ಸಮುಚಿತ ಸರ್ಕಾರಗಳು ನೀಡುವುದು ಕಡ್ಡಾಯವಾಗಿದೆ. ಈ ಉದ್ದೇಶದ ಅನುಷ್ಠಾನಕ್ಕೆ ಕರ್ನಾಟಕದಲ್ಲಿ, ಸತತವಾಗಿ ಏಳು ದಿನಗಳ ಕಾಲ ಯಾವುದೇ ಮಗು ಸೂಕ್ತ ಕಾರಣಗಳಿಲ್ಲದೆ, ಶಾಲೆಯ ಅನುಮತಿಯಿಲ್ಲದೆ ಶಾಲೆಗೆ ಗೈರು ಹಾಜರಾದರೆ ಅಂತಹ ಮಕ್ಕಳನ್ನು ಸಂಭಾವ್ಯ **'ಶಾಲೆಯಿಂದ ಹೊರಗುಳಿದ ಮಕ್ಕಳು'** ಎಂದು ಪರಿಗಣಿಸಲಾಗುವುದು. ಆದ್ದರಿಂದ ಶಿಕ್ಷಕರು ಈ ಬಗ್ಗೆ ಗಮನಹರಿಸಿ ಮಕ್ಕಳು ಗೈರು ಹಾಜರಾಗದಂತೆ ಹಾಜರಾತಿ ನಿರ್ವಹಿಸುವುದು. ಬಡತನವೊಂದೇ ಮಕ್ಕಳು ಶಾಲೆಯಿಂದ ಹೊರಗುಳಿಯಲು ಕಾರಣವಲ್ಲ. ಇತರೆ ಸಾಮಾಜಿಕ ಅಲಭ್ಯತೆಯ ಅಂಶಗಳು ಇದರಲ್ಲಿ ಸೇರಿವೆ. ಇಂತಹ ಒತ್ತಡಗಳು ವಲಸೆ ಮಕ್ಕಳನ್ನು ಶಾಲೆಯಿಂದ ಹೊರಗುಳಿಯುವಂತೆ ಮಾಡಿವೆ. ಅವರಲ್ಲಿ ಎಸ್.ಸಿ/ಎಸ್.ಟಿ ಮಕ್ಕಳು, ಅನಾಥ ಮಕ್ಕಳ ಗುಂಪುಗಳು ಇವೆ.

2023–24ನೇ ಸಾಲಿನಲ್ಲಿ 6 ರಿಂದ 14 ವಯೋಮಾನದ 9462 'ಶಾಲೆಯಿಂದ ಹೊರಗುಳಿದ ಮಕ್ಕಳನ್ನು' ಗುರುತಿಸಲಾಗಿದ್ದು, ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ವಿವಿಧ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸಲು 162.59 ಲಕ್ಷ ರೂ.ಗಳ ಅನುದಾನವನ್ನು ಕೇಂದ್ರ ಸರ್ಕಾರ ಅನುಮೋದನೆ ನೀಡಿರುತ್ತದೆ. ಜೂನ್ 2023 ರಿಂದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಯೋಜನಾ ನಿರ್ದೇಶಕರ ಕಛೇರಿಯಿಂದ ರೂ.55.68 ಲಕ್ಷ ರೂ.ಗಳನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.

**2023–24ನೇ ಸಾಲಿನಲ್ಲಿ ಕಾರ್ಯತಂತ್ರವಾರು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತಂದಿರುವ ಬಗ್ಗೆ ಮಾಹಿತಿ:–**

**2023–24 ರಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಸಮಗ್ರ ಶಿಕ್ಷಣ ಕರ್ನಾಟಕದಿಂದ ಕೈಗೊಂಡ ಕಾರ್ಯತಂತ್ರಗಳ ವಿವರ**

| ಕ್ರ.ಸಂ. | ಕಾರ್ಯತಂತ್ರಗಳು | ಜಿಲ್ಲೆಗಳು | 2023–24 ರಲ್ಲಿ ಅನುಮೋದನೆಯಾದ ಗುರಿ | | ಸಾಧನೆ | | ವಾಸ್ತವಿಕ ವೆಚ್ಚ ಮಾರ್ಚ್ – 2024 ರವರೆಗೆ (ಲಕ್ಷಗಳಲ್ಲಿ) |
|---|---|---|---|---|---|---|---|
| | | | ಭೌತಿಕ | ಆರ್ಥಿಕ (ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ಲಕ್ಷಗಳಲ್ಲಿ) | |
| **I** | **ವಸತಿಯುತ ವಿಶೇಷ ತರಬೇತಿ** | | | | | | |
| 1 | 12 ತಿಂಗಳು ಆರ್.ಎಸ್.ಟಿ (ವಸತಿಯುತ ವಿಶೇಷ ತರಬೇತಿ) | ಚಾಮರಾಜನಗರ, ದಕ್ಷಿಣ ಕನ್ನಡ | 47 | 9.40 | 40 | 8.03866 | 8.03866 |
| **2** | 6 ತಿಂಗಳು ಆರ್.ಎಸ್.ಟಿ (ವಸತಿಯುತ ವಿಶೇಷ ತರಬೇತಿ) | ಕೊಪ್ಪಳ | 959 | 95.9 | 0 | 0 | 0 |
| | **ಒಟ್ಟು** | | **1006** | **104.89** | **40** | 8.03866 | 8.03866 |
| **II** | **ವಲಸಿತ ಮಕ್ಕಳು (ವಸತಿಯುತ/ವಸತಿರಹಿತ ವಿಶೇಷ ತರಬೇತಿ)** | | | | | | |
| 3 | 3 ತಿಂಗಳು ಎನ್.ಆರ್.ಎಸ್.ಟಿ (ವಸತಿರಹಿತ ವಿಶೇಷ ತರಬೇತಿ) | ಮೈಸೂರು & ಬೀದರ್ | 70 | 1.05 | 40 | 0.20882 | 0.20882 |
| 4 | 6 ತಿಂಗಳು ಎನ್.ಆರ್.ಎಸ್.ಟಿ (ವಸತಿರಹಿತ ವಿಶೇಷ ತರಬೇತಿ) | ಕೊಪ್ಪಳ | 38 | 1.14 | 0 | 0 | |
| | **ಒಟ್ಟು** | | **108** | **2.19** | **40** | 0.20882 | 0.20882 |
| **III`** | **6 ತಿಂಗಳು ಆರ್.ಎಸ್.ಟಿ (ವಸತಿ ಸಹಿತ ವಿಶೇಷ ತರಬೇತಿ) ವಲಸಿತ ಮಕ್ಕಳಿಗೆ** | | | | | | |
| 5 | 6 ತಿಂಗಳು ಆರ್.ಎಸ್.ಟಿ (ವಸತಿಸಹಿತ ವಿಶೇಷ ತರಬೇತಿ) ವಲಸಿತ ಮಕ್ಕಳಿಗೆ | ಹಾವೇರಿ | 551 | 55.10 | 527 | 38.07563 | 0.882192 |
| | **ಒಟ್ಟು** | | **551** | **55.10** | 527 | 38.07563 | 882192 |

**2023–24 ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ವಿವಿಧ ವಿಧಾನಗಳು**

| ಕ್ರಮ ಸಂಖ್ಯೆ | ವಿವರ | ಮುಖ್ಯವಾಹಿನಿಗೆ ತಂದಿರುವ ಮಕ್ಕಳ ಸಂಖ್ಯೆ |
|---|---|---|
| 1 | ವಿಶೇಷ ತರಬೇತಿ | 607 |
| 2 | ಗೃಹಾಧಾರಿತ ಶಿಕ್ಷಣ | 4 |
| 3 | ಶಾಲಾಧಾರಿತ ತರಬೇತಿ | 5992 |
| 4 | ಹಾಸ್ಟೆಲ್ ಸೌಲಭ್ಯಗಳು | 5 |

**ಚಾಮರಾಜನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವ 12 ತಿಂಗಳ ವಸತಿಯುತ ತರಬೇತಿ:**

2023–24ನೇ ಸಾಲಿನಲ್ಲಿ ಚಾಮರಾಜನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 40 ಮಕ್ಕಳಿಗೆ ತರಬೇತಿ ನೀಡಲಾಗಿದೆ. ಮಕ್ಕಳಿಗೆ ಆರೈಕೆ, ರಕ್ಷಣೆ, ವೈದ್ಯಕೀಯ ನೆರವು, ಸಮಾಲೋಚನೆ, ಪ್ರೇರಕ ತರಬೇತಿ, ಸಮತೋಲಿತ ಆಹಾರ ಮತ್ತು ಶಿಕ್ಷಣವನ್ನು ಒದಗಿಸಲಾಗುತ್ತದೆ.

**ಮೈಸೂರು 3 ತಿಂಗಳ ವಸತಿ ರಹಿತ ತರಬೇತಿ:**

2023–24ನೇ ಸಾಲಿನಲ್ಲಿ 40 ಮಕ್ಕಳಿಗೆ ಮೈಸೂರಿನಲ್ಲಿ ನಡೆಯುವ ದಸರಾ ಹಬ್ಬದ ಸಂದರ್ಭದಲ್ಲಿ 3 ತಿಂಗಳ ವಸತಿ ರಹಿತ ತರಬೇತಿಯನ್ನು ಮಾವುತರು ಮತ್ತು ಕಾವಾಡಿಗರ ಮಕ್ಕಳಿಗೆ ನೀಡಲಾಗಿದೆ. ಮಕ್ಕಳಿಗೆ ಆರೈಕೆ, ರಕ್ಷಣೆ, ವೈದ್ಯಕೀಯ ನೆರವು, ಸಮಾಲೋಚನೆ, ಪ್ರೇರಕ ತರಬೇತಿ, ಸಮತೋಲಿತ ಆಹಾರ ಮತ್ತು ಶಿಕ್ಷಣವನ್ನು ಒದಗಿಸಲಾಗುತ್ತದೆ.

**6 ತಿಂಗಳು ಆರ್.ಎಸ್.ಟಿ (ವಸತಿ ಸಹಿತ ವಿಶೇಷ ತರಬೇತಿ) ವಲಸಿತ ಮಕ್ಕಳಿಗೆ**

2023–24ನೇ ಸಾಲಿನಲ್ಲಿ 6 ತಿಂಗಳು ಆರ್.ಎಸ್.ಟಿ (ವಸತಿ ಸಹಿತ ವಿಶೇಷ ತರಬೇತಿ) ವಲಸಿತ ಮಕ್ಕಳಿಗೆ 527 ಮಕ್ಕಳಿಗೆ ನೀಡಲಾಗಿದೆ. ಪೋಷಕರೊಂದಿಗೆ ಮಕ್ಕಳು ಬೇರೆ ಸ್ಥಳಕ್ಕೆ ವಲಸೆ ಹೋಗುವುದನ್ನು ತಡೆದು, ಅಂತಹ ಮಕ್ಕಳಿಗೆ ಶಿಕ್ಷಣವನ್ನು ಮುಂದುವರೆಸಲು ವಸತಿ ಸಹಿತ ವಿಶೇಷ ತರಬೇತಿ ಕೇಂದ್ರ ಸ್ಥಾಪಿಸಿ, ಸದರಿ ಕೇಂದ್ರದಲ್ಲಿ ಮಕ್ಕಳಿಗೆ ಆರೈಕೆ, ರಕ್ಷಣೆ, ವೈದ್ಯಕೀಯ ನೆರವು, ಸಮಾಲೋಚನೆ, ಪ್ರೇರಕ ತರಬೇತಿ, ಸಮತೋಲಿತ ಆಹಾರ ಮತ್ತು ಶಿಕ್ಷಣವನ್ನು ಒದಗಿಸಲಾಗುತ್ತದೆ.

## 2023–24ನೇ ಸಾಲಿನಲ್ಲಿ ಶಾಲೆಬಿಟ್ಟ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲು ಸಮೀಕ್ಷೆ ನಡೆಸಲಾಯಿತು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯು 6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳನ್ನು ತಮ್ಮ ನೆರೆಹೊರೆಯ ಶಾಲೆಗಳಿಗೆ ಸೇರಿಸಲು ವಿವಿಧ ಪ್ರಯತ್ನಗಳನ್ನು ಮಾಡುತ್ತಿದೆ. ಇಲಾಖೆಯು ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕಗಳು, ಮಧ್ಯಾಹ್ನದ ಬಿಸಿಯೂಟ ಇತ್ಯಾದಿಗಳನ್ನು ಒದಗಿಸುತ್ತದೆ. ಇದರಿಂದಾಗಿ ಸಮಾಜದ ಎಲ್ಲಾ ಸ್ತರಗಳ ವಿದ್ಯಾರ್ಥಿಗಳು ತಮ್ಮ ಸಾಮಾಜಿಕ–ಆರ್ಥಿಕ ಹಿನ್ನೆಲೆಯನ್ನು ಲೆಕ್ಕಿಸದೆ ಶಾಲೆಗಳಿಗೆ ಹಾಜರಾಗುತ್ತಾರೆ.

ಆದಾಗ್ಯೂ, ಹೆಚ್ಚಿನ ಜಿಲ್ಲೆಗಳಲ್ಲಿ ಕೆಲವು ವಿದ್ಯಾರ್ಥಿಗಳು ಶಾಲೆಗಳಿಗೆ ದಾಖಲಾಗುವುದಿಲ್ಲ ಅಥವಾ ದಾಖಲಾತಿಯ ನಂತರ ಶಾಲೆಗಳಿಂದ ದೀರ್ಘಕಾಲದವರೆಗೆ ಗೈರು ಹಾಜರಾಗುತ್ತಾರೆ. ಆ ಮೂಲಕ ಈ ಮಕ್ಕಳು ಶಾಲೆಯಿಂದ ಹೊರಗುಳಿದ ಮಕ್ಕಳು ಅಥವಾ ಗೈರು ಹಾಜರಾದ ಮಕ್ಕಳಾಗುತ್ತಾರೆ. ಆರ್.ಟಿ.ಇ ನಿಯಮಗಳ ಪ್ರಕಾರ ಕಡ್ಡಾಯವಾಗಿ ಶಾಲಾ ಮುಖ್ಯಸ್ಥರಿಗೆ ಮಾಹಿತಿ ನೀಡದೆ ಸತತ ಏಳು ದಿನಗಳಿಗಿಂತ ಹೆಚ್ಚುಕಾಲ ಗೈರು ಹಾಜರಾದ ವಿದ್ಯಾರ್ಥಿಗಳ ವಿವರಗಳನ್ನು ವಾರಕ್ಕೊಮ್ಮೆ ಸಂಗ್ರಹಿಸಲಾಗುತ್ತಿದೆ. ತಿಳುವಳಿಕೆ ಮತ್ತು ಸಮಾಲೋಚನೆಯ ನಂತರವೂ ಶಾಲೆಗೆ ಮರಳಿ ಬಾರದ ಮಕ್ಕಳ ಪೋಷಕರಿಗೆ ನೋಟೀಸ್ ನೀಡಲಾಗುತ್ತಿದೆ. ಇದರಿಂದ ಗೈರುಹಾಜರಾದ ಮಕ್ಕಳ ಸಂಖ್ಯೆಯಲ್ಲಿ ಇಳಿಕೆಗೆ ಕಾರಣವಾಗಿದೆ. ಅದರಂತೆ 2023–24ನೇ ಸಾಲಿನಲ್ಲಿ ನಡೆದ ಸಮೀಕ್ಷಾ ಕಾರ್ಯದಲ್ಲಿ ಒಟ್ಟು 9462 (ಅದರಲ್ಲಿ ಗಂಡು 5689 ಮತ್ತು ಹೆಣ್ಣು 3773) ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲಾಗಿದೆ.

**2023–24ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಮನೆಗಳಿಗೆ ಹೋಗಿ ಮನೆ ಮನೆ ಸಮೀಕ್ಷೆ :**

**ಮೈಸೂರು ಜಿಲ್ಲೆಯಲ್ಲಿ ನಡೆದ ಸಮೀಕ್ಷಾ ಕಾರ್ಯಕ್ರಮ**



## ತುಮಕೂರು ಜಿಲ್ಲೆಯಲ್ಲಿ ಸಮೀಕ್ಷಾ ಕಾರ್ಯ



## ಮೈಸೂರು ಜಿಲ್ಲೆ ಓ.ಓ.ಎಸ್.ಸಿ ಮಕ್ಕಳಸಮೀಕ್ಷೆಯಲ್ಲಿ ಗುರುತಿಸಲಾದ ಮಗುವನ್ನು ಮುಖ್ಯವಾಹಿನಿಗೆ ತರಲಾದ ಸಂದರ್ಭ



# TRANSIT HOME for Girls (ಚಿಣ್ಣರ ತಂಗುಧಾಮ)
















## ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ.




## ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ: (ಟೈಪ್-1, 3 &4)

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹಲವು ಪ್ರಯತ್ನಗಳನ್ನು ಮಾಡಿದೆ. ಗ್ರಾಮೀಣ ಪ್ರದೇಶ, ದುರ್ಬಲ ವರ್ಗ, ಪ.ಜಾ./ಪ.ಪ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳು, ಬುಡಕಟ್ಟು ವರ್ಗದ ಹೆಣ್ಣು ಮಕ್ಕಳು ಪ್ರಾಥಮಿಕ ಶಿಕ್ಷಣದ ಸೌಲಭ್ಯದಲ್ಲಿ ವಂಚಿತರಾಗಿರುವುದು ಮತ್ತು ಲಿಂಗ ತಾರತಮ್ಯವನ್ನು ಗಮನಿಸಲಾಗಿ 2004-05ನೇ ಸಾಲಿನಲ್ಲಿ ಕೇಂದ್ರ ಸಂಪನ್ಮೂಲ ಅಭಿವೃದ್ಧಿ ಇಲಾಖೆ ಸರ್ವ ಶಿಕ್ಷಣ ಅಭಿಯಾನದ ಮೂಲಕ ಕರ್ನಾಟಕದಲ್ಲಿ ಇಂತಹ ದುರ್ಬಲ ಹೆಣ್ಣುಮಕ್ಕಳಿಗಾಗಿ ಪ್ರಾಥಮಿಕ ಶಿಕ್ಷಣವನ್ನು ಮುಂದುವರೆಸಲು ಶೈಕ್ಷಣಿಕವಾಗಿ ಹಿಂದುಳಿದ 69 ಬ್ಲಾಕ್‌ಗಳಲ್ಲಿನ ಬಾಲಕಿಯರು 6 ರಿಂದ 8 ನೇ ತರಗತಿಯ ಶಿಕ್ಷಣವನ್ನು ಮುಂದುವರೆಸಲು 66 ಕೆ.ಜಿ.ಬಿ.ವಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಸಿದ್ದಾಪುರ ಕೆಜಿಬಿವಿ ಹಾಗೂ ರಾಯಚೂರು ಜಿಲ್ಲೆಯ ಸಿಂಧನೂರು ಕೆಜಿಬಿವಿಗಳಲ್ಲಿ ಮುಸ್ಲಿಂ ಅಲ್ಪಸಂಖ್ಯಾತ ಬಾಲಕಿಯರಿಗಾಗಿ ಉರ್ದು ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತಿದೆ.

2020-21ನೇ ಸಾಲಿನಿಂದ ಮಹತ್ವಾಕಾಂಕ್ಷಿ ಜಿಲ್ಲೆಯಾದ ಯಾದಗಿರಿ ಜಿಲ್ಲೆಯಲ್ಲಿ 03 ಕೆಜಿಬಿವಿ ವಸತಿ ಶಾಲೆಗಳು ಮಂಜೂರಾಗಿರುತ್ತವೆ. 2022-23 ಮತ್ತು 2023-24ನೇ ಸಾಲಿನಲ್ಲಿ 05 ಕೆಜಿಬಿವಿ ವಸತಿ ಶಾಲೆಗಳನ್ನು 6 ರಿಂದ 12ನೇ ತರಗತಿಯವರೆಗೆ ಉನ್ನತೀಕರಿಸಲಾಗಿದೆ.

ಒಟ್ಟು ಕಾರ್ಯ ನಿರ್ವಹಿಸುತ್ತಿರುವ ಕೆಜಿಬಿವಿಗಳ ವಸತಿ ಶಾಲೆಗಳ ಸಂಖ್ಯೆ 66 ಕೆಜಿಬಿವಿ (ಟೈಪ್-1) ವಸತಿ ಶಾಲೆಗಳು, (6 ರಿಂದ 8ನೇ ತರಗತಿ) ಹಾಗೂ 8 ಕೆಜಿಬಿವಿ (ಟೈಪ್-3) ವಸತಿ ಶಾಲೆಗಳು 6 ರಿಂದ 12ನೇ ತರಗತಿ. ಒಟ್ಟು 74 ಕೆಜಿಬಿವಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

ಮುಂದುವರೆದು, 2020-21ನೇ ಸಾಲಿನಲ್ಲಿ ಮಹತ್ವಾಕಾಂಕ್ಷೆಯ ಜಿಲ್ಲೆಯಾದ ಯಾದಗಿರಿ ಜಿಲ್ಲೆಯಲ್ಲಿ ಕೆಜಿಬಿವಿ ಟೈಪ್ -3 (6 ರಿಂದ 12 ನೇ ತರಗತಿ) ವಸತಿ ಶಾಲೆಗಳನ್ನು ತೆರೆಯಲು ಯೋಜನಾ ಅನುಮೋದನೆ ಮಂಡಳಿಯು ಅನುಮೋದನೆ ನೀಡಿದೆ.

- 2022-23ನೇ ಸಾಲಿಗೆ ಉರ್ದು ಕೆಜಿಬಿವಿ, ಕೊಪ್ಪಳ ಜಿಲ್ಲೆ, ಗಂಗಾವತಿ ತಾಲೂಕು, ಸಿದ್ದಾಪುರ ವಸತಿ ಶಾಲೆಯನ್ನು 6ನೇ ತರಗತಿಯಿಂದ 12ನೇ ತರಗತಿಗೆ ಮೇಲ್ದರ್ಜೆಗೇರಿಸಲಾಗಿದೆ. ಮತ್ತು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರ ಕೆಜಿಬಿವಿ (ಟೈಪ್-1 & 4) ವಸತಿ ಶಾಲೆ/ಹಾಸ್ಟೆಲ್‌ಗಳನ್ನು ವಿಲೀನಗೊಳಿಸಿ ಟೈಪ್-3ಗೆ ಮೇಲ್ದರ್ಜೆಗೇರಿಸಲಾಗಿದೆ.
- 2023-24ನೇ ಸಾಲಿಗೆ ವಿಜಯಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕು, ಕಾಮನಕೇರಿ, ಮುದ್ದೆಬಿಹಾಳ ತಾಲ್ಲೂಕಿನ ಧವಳಗಿ ಕೆಜಿಬಿವಿಗಳನ್ನು (ಟೈಪ್-1 & 4) ವಸತಿ ಶಾಲೆ/ಹಾಸ್ಟೆಲ್‌ಗಳನ್ನು ವಿಲೀನಗೊಳಿಸಿ (ಟೈಪ್-3) ಗೆ 6ನೇ ತರಗತಿಯಿಂದ 12ನೇ ತರಗತಿಗೆ ಮೇಲ್ದರ್ಜೆಗೇರಿಸಲಾಗಿದೆ.

ಮುಂದುವರೆದು ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕಿನ ಗಂಜಿಘಟ್ಟಿ ಕೆಜಿಬಿವಿ ವಸತಿ ಶಾಲೆಗಳನ್ನು 6ನೇ ತರಗತಿಯಿಂದ 12ನೇ ತರಗತಿಗೆ ಮೇಲ್ದರ್ಜೆಗೇರಿಸಲಾಗಿದೆ. ಕೆಜಿಬಿವಿ (ಟೈಪ್–1 ರಿಂದ ಟೈಪ್–3) ಗೆ ವಸತಿ ಶಾಲೆಯನ್ನು ಮೇಲ್ದರ್ಜೆಗೇರಿಸಲಾಗಿದೆ.

| ಕ್ರ.ಸಂ | ಚಟುವಟಿಕೆ | ಅನುಮೋದನೆಯಾದ ಕೆಜಿಬಿವಿಗಳು | ದಾಖಲಾತಿ ಗುರಿ | ಒಟ್ಟು ದಾಖಲಾತಿ | ಪ್ರಾರಂಭವಾಗದೇ ಇರುವ ಕೆಜಿಬಿವಿಗಳು |
|---|---|---|---|---|---|
| 1 | ಕೆಜಿಬಿವಿ ಟೈಪ್–1 (ವಸತಿ ಶಾಲೆ 6 ರಿಂದ 8ನೇ ತರಗತಿ) | **66** | **7750** | **7312** | **0** |
| 2 | ಕೆಜಿಬಿವಿ (ಟೈಪ್–3) (ವಸತಿ ಶಾಲೆ 6 ರಿಂದ 12ನೇ ತರಗತಿ) | **8** | **1300** | **1095** | **0** |
| | **ಒಟ್ಟು** | **74** | **9050** | **8407** | |

### ಕೆಜಿಬಿವಿ ಶಾಲೆಗಳ ದಾಖಲಾತಿ ನಿಯಮಗಳು:

- ✓ ಕೆಜಿಬಿವಿ (ಟೈಪ್–1) 6 ರಿಂದ 8ನೇ ತರಗತಿಯವರೆಗೆ ಪ್ರವೇಶಾವಕಾಶವಿದೆ.
- ✓ ಕೆಜಿಬಿವಿ (ಟೈಪ್–3) 6 ರಿಂದ 12ನೇ ತರಗತಿಯವರೆಗೆ ಪ್ರವೇಶಾವಕಾಶವಿದೆ.
- ✓ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿನ ಹೆಣ್ಣುಮಕ್ಕಳಿಗೆ ಆದ್ಯತೆ ನೀಡುವುದು.
- ✓ ಪ.ಜಾ/ಪ.ವ. ಹಿಂದುಳಿದ ವರ್ಗ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಹೆಣ್ಣುಮಕ್ಕಳಿಗೆ 75% ರಷ್ಟು ಮತ್ತು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಬಾಲಕಿಯರಿಗೆ, ಅನಾಥ ಹೆಣ್ಣು ಮಕ್ಕಳು, ದೇವದಾಸಿ ಪದ್ಧತಿಯಿಂದ ರಕ್ಷಿಸಲ್ಪಟ್ಟವರು, ಬಾಲಕಾರ್ಮಿಕ ಮಕ್ಕಳ ಮಾರಾಟ ಮತ್ತು ಸಾಗಣಿಕೆಯಿಂದ ರಕ್ಷಿಸಲ್ಪಟ್ಟ ಶಿಕ್ಷಣ ವಂಚಿತ ಹೆಣ್ಣುಮಕ್ಕಳಿಗೆ 25% ರಷ್ಟು ಪ್ರವೇಶದಲ್ಲಿ ಮೀಸಲಾತಿಯನ್ನು ನೀಡಲಾಗುತ್ತಿದೆ.
- ✓ ಶಾಲೆಗೆ ಸೇರಿಲ್ಲದ ಹಾಗೂ ಶಾಲೆ ಬಿಟ್ಟ ಬಾಲಕಿಯರಿಗೆ ಪ್ರಾಧಾನ್ಯತೆ ನೀಡಿ ನಂತರ ಇತರೆ ಬಾಲಕಿಯರನ್ನು ದಾಖಲು ಮಾಡುವುದು.

### ಕೆಜಿಬಿವಿ ಶಾಲೆಗಳಲ್ಲಿನ ಸೌಲಭ್ಯಗಳು:

- ಸುಸಜ್ಜಿತವಾದ ಶಾಲಾ ಕಟ್ಟಡ ಸೌಲಭ್ಯ.
- ಉತ್ತಮ ಗುಣಮಟ್ಟದ ಪೌಷ್ಠಿಕಯುಕ್ತ ಆಹಾರ ಪೂರೈಕೆ.
- ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ, ಕಡ್ಡಾಯ ವೈದ್ಯಕೀಯ ತಪಾಸಣೆ.
- ಸಂಗೀತ, ಯೋಗ, ಕರಾಟೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳ ವ್ಯಕ್ತಿತ್ವ ವಿಕಸನದ ಶಿಕ್ಷಣ.
- ವೃತ್ತಿ ಕೌಶಲ್ಯಗಳಾದ ಹೊಲಿಗೆ, ಕಸೂತಿ, ಬೊಂಬೆ ತಯಾರಿಕೆ, ಮೊಬೈಲ್ ಹಾಗೂ ಇತರೆ ಎಲೆಕ್ಟ್ರಾನಿಕ್ಸ್ ಉಪಕರಣಗಳ ದುರಸ್ತಿ ಕಲಿಕೆಗೆ ಅವಕಾಶ.
- ನಿಧಾನ ಕಲಿಕೆಯ ಮಕ್ಕಳ ಕಲಿಕೆಗಾಗಿ ಪೂರಕ ಕ್ರಮಗಳು.
- ಇಲಾಖೆಯ ವಿವಿಧ ಸೌಲಭ್ಯಗಳ ವಿಸ್ತರಣೆ, ಅತಿಥಿ ಮತ್ತು ಉಪನ್ಯಾಸ, ವಿಚಾರ ಸಂಕಿರಣ

## ಕಸ್ತೂರ ಬಾ ಬಾಲಿಕಾ ವಿದ್ಯಾಲಯ ವಸತಿ ನಿಲಯ (ಕೆಜಿಬಿವಿ ಟೈಪ್–4) –2023–24

## ಹೆಣ್ಣು ಮಕ್ಕಳ ವಸತಿ ನಿಲಯ:

ಕರ್ನಾಟಕದ ಶೈಕ್ಷಣಿಕವಾಗಿ ಹಿಂದುಳಿದ 62 ಬ್ಲಾಕ್ ಗಳಿಗೆ ಕೇಂದ್ರ ಸರ್ಕಾರವು 62 ಹೆಣ್ಣು ಮಕ್ಕಳ ವಸತಿ ನಿಲಯಗಳನ್ನು 2009–10ರಲ್ಲಿ ಮಂಜೂರು ಮಾಡಿದೆ. ಈ ಹೆಣ್ಣು ಮಕ್ಕಳ ವಸತಿ ನಿಲಯಗಳು 2010–11 ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿವೆ. 2013–14ನೇ ಸಾಲಿನಲ್ಲಿ 12 ವಸತಿ ನಿಲಯಗಳನ್ನು ಮಂಜೂರಾಗಿರುತ್ತವೆ. ಒಟ್ಟು 74 ವಸತಿ ನಿಲಯಗಳು ಕಾರ್ಯನಿರ್ವಹಿಸುತ್ತವೆ.
ಕೆಜಿಬಿವಿ ಟೈಪ್–4 ವಸತಿ ನಿಲಯಗಳಲ್ಲಿ ಹಿಂದುಳಿದ ವರ್ಗಗಳ ಹೆಣ್ಣು ಮಕ್ಕಳಿಗೆ ಅವಕಾಶ ನೀಡಲಾಗಿದೆ. ಈ ವಸತಿ ನಿಲಯಗಳಲ್ಲಿ 9ನೇ ತರಗತಿಯಿಂದ 12ನೇ ತರಗತಿಯವರೆಗೆ ದಾಖಲಾತಿಗೆ ಅವಕಾಶವಿರುತ್ತದೆ. ವಸತಿ ನಿಲಯದ ಹತ್ತಿರವಿರುವ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕರುಗಳಿಗೆ ಜವಾಬ್ದಾರಿ ವಹಿಸಲಾಗಿದೆ.

- ಮುಂದುವರೆದು 2022–23ನೇ ಸಾಲಿಗೆ 74 ವಸತಿ ನಿಲಯಗಳಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ, ಕಮಲಾಪುರ ವಸತಿ ನಿಲಯವನ್ನು ಕೆಜಿಬಿವಿ (ಟೈಪ್–1 &4) ವಿಲೀನಗೊಳಿಸಿ 6 ರಿಂದ 12ನೇ ತರಗತಿಯವರೆಗೆ (ಟೈಪ್–3) ಗೆ ಉನ್ನತೀಕರಿಸಲಾಗಿದೆ.
- 2023–24ನೇ ಸಾಲಿಗೆ ಕೇಂದ್ರ ಮಂತ್ರಾಲಯದಿಂದ ಯಾದಗಿರಿ ಜಿಲ್ಲೆಯ, ಯಾದಗಿರಿ ತಾಲ್ಲೂಕಿನ ಯಲ್ಲೇರಿಗೆ, ಕೆಜಿಬಿವಿ (ಟೈಪ್ –4) ವಸತಿ ನಿಲಯ ಮಂಜೂರಾಗಿರುತ್ತದೆ.
- 2023–24ನೇ ಸಾಲಿಗೆ ವಿಜಯಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕು, ಕಾಮನಕೇರಿ, ಮುದ್ದೇಬಿಹಾಳ ತಾಲ್ಲೂಕಿನ ಧವಳಗಿ ಕೆಜಿಬಿವಿಗಳನ್ನು (ಟೈಪ್–1 & 4) ವಸತಿ ಶಾಲೆ/ಹಾಸ್ಟೆಲ್‌ಗಳನ್ನು ವಿಲೀನಗೊಳಿಸಿ (ಟೈಪ್–3) ಗೆ 6ನೇ ತರಗತಿಯಿಂದ 12ನೇ ತರಗತಿಗೆ ಮೇಲ್ದರ್ಜೆಗೇರಿಸಲಾಗಿದೆ.
- ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು, ಕನಕಪುರ ಕೆಜಿಬಿವಿ ವಸತಿ ನಿಲಯವು ಜನವಸತಿ ಪ್ರದೇಶದಿಂದ ಹೊರಗಡೆ ಇರುವುದರಿಂದ ಪೋಷಕರು ವಸತಿ ನಿಲಯಕ್ಕೆ ತಮ್ಮ ಮಕ್ಕಳನ್ನು ದಾಖಲು ಮಾಡಲು ನಿರಾಸಕ್ತಿ ತೋರಿಸುತ್ತಿರುವುದರಿಂದ ಸದರಿ ವಸತಿನಿಲಯವು ನಡೆಯುತ್ತಿರುವುದಿಲ್ಲ.
- ಒಟ್ಟು 73 ವಸತಿ ನಿಲಯಗಳು ಕಾರ್ಯನಿರ್ವಹಿಸುತ್ತಿರುತ್ತವೆ.

| ಕ್ರ. ಸಂ | ಚಟುವಟಿಕೆ | ಅನುಮೋದನೆಯಾದ ಕೆಜಿಬಿವಿಗಳು | ದಾಖಲಾತಿ ಗುರಿ | ಒಟ್ಟು ದಾಖಲಾತಿ | ಪ್ರಾರಂಭವಾಗದೇ ಇರುವ ಕೆಜಿಬಿವಿಗಳು |
|---|---|---|---|---|---|
| 1 | ಕೆಜಿಬಿವಿ (ಟೈಪ್–4) (ವಸತಿ ನಿಲಯ 9 ರಿಂದ 12ನೇ ತರಗತಿ) | **73** | **7050** | **5916** | **1** |

**ಕೆಜಿಬಿವಿ ಶಾಲೆಗಳಲ್ಲಿನ ಸೌಲಭ್ಯಗಳು:**

- ಸುಸಜ್ಜಿತವಾದ ಶಾಲಾ ಕಟ್ಟಡ ಸೌಲಭ್ಯ.
- ಉತ್ತಮ ಗುಣಮಟ್ಟದ ಪೌಷ್ಠಿಕಾಂಶವುಳ್ಳ ಆಹಾರ ಪೂರೈಕೆ.
- ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ, ಕಡ್ಡಾಯ ವೈದ್ಯಕೀಯ ತಪಾಸಣೆ.
- ಸಂಗೀತ, ಯೋಗ, ಕರಾಟೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳ ವ್ಯಕ್ತಿತ್ವ ವಿಕಸನದ ಶಿಕ್ಷಣ.
- ವೃತ್ತಿ ಕೌಶಲ್ಯಗಳಾದ ಹೊಲಿಗೆ, ಕಸೂತಿ, ಬೊಂಬೆ ತಯಾರಿಕೆ, ಮೊಬೈಲ್ ಹಾಗೂ ಇತರೆ ಎಲೆಕ್ಟ್ರಾನಿಕ್ಸ್ ಉಪಕರಣಗಳ ದುರಸ್ತಿ ಕಲಿಕೆಗೆ ಅವಕಾಶ.
- ನಿಧಾನ ಕಲಿಕೆಯ ಮಕ್ಕಳ ಕಲಿಕೆಗಾಗಿ ಪೂರಕ ಕ್ರಮಗಳು.
- ಇಲಾಖೆಯ ವಿವಿಧ ಸೌಲಭ್ಯಗಳ ವಿಸ್ತರಣೆ, ಅತಿಥಿ ಮತ್ತು ಉಪನ್ಯಾಸ, ವಿಚಾರ ಸಂಕಿರಣ

| | |
|---|---|
|  |  |
| **ಕೆಜಿಬಿವಿಯಲ್ಲಿ ವಿದ್ಯಾರ್ಥಿಗಳು ಊಟ ಮಾಡುತ್ತಿರುವುದು.** | **ಕೆಜಿಬಿವಿ ವಿದ್ಯಾರ್ಥಿಗಳಿಗೆ ಬ್ಯಾಂಕ್ ಅಕೌಂಟ್ ಪಾಸ್ ಪುಸ್ತಕ ನೀಡಿರುವುದು** |
|  |  |
| **ಕೆಜಿಬಿವಿ ವಸತಿ ಶಾಲೆಯಲ್ಲಿ ಕಂಪ್ಯೂಟರ್ ತರಬೇತಿ ನೀಡುತ್ತಿರುವುದು** | **ಕೆಜಿಬಿವಿ ವಸತಿ ಶಾಲೆಗಳಲ್ಲಿ TLM ನೀಡುತ್ತಿರುವುದು** |

<table>
<tr><td></td><td>
</td></tr>
<tr><td colspan="2">**ಯಾದಗಿರಿ ಜಿಲ್ಲೆ ಕೊಡೇಕಲ್ ವಿದ್ಯಾರ್ಥಿಗಳು ರಾಜ್ಯೋತ್ಸವದಲ್ಲಿ ಪಾಲ್ಗೊಂಡಿರುವುದು**</td></tr>
<tr><td></td><td></td></tr>
<tr><td>**ರಾಮನಗರ ಜಿಲ್ಲೆ, ಚನ್ನಪಟ್ಟಣ ಕೆಜಿಬಿವಿ ವಿದ್ಯಾರ್ಥಿಗಳು ಕರಾಟೆ ತರಬೇತಿಯಲ್ಲಿ ಪಾಲ್ಗೊಂಡಿರುವುದು**</td><td>**ಮೈಸೂರು ಜಿಲ್ಲೆ, ನಂಜನಗೂಡು ವಿದ್ಯಾರ್ಥಿಗಳು ಯೋಗ ತರಬೇತಿಯಲ್ಲಿ ಪಾಲ್ಗೊಂಡಿರುವುದು**</td></tr>
</table>

## ಕೆಜಿಬಿವಿ ವಿದ್ಯಾರ್ಥಿಗಳ ಯಶಸ್ಸಿನ ಕಥೆಗಳು

ಹೆಸರು : ಸ್ವಾತಿ ಈಶಪ್ಪ ಕಡಕಾಡಿ

ಸಾಧನೆ: ಕರಾಟೆ ಚಾಂಪಿಯನ್



ಕುಮಾರಿ ಸ್ವಾತಿ ಕಡಕಾಡಿ ಕೆಜಿಬಿವಿ ಡಂಬಳ ತಾ: ಮುಂಡರಗಿ ಜಿ: ಗದಗ ರವರು 6 ರಿಂದ 8ನೇ (ಕೆಜಿಬಿವಿ ಟೈಪ್–1) ಬಾಲಕಿಯರ ಹಾಸ್ಟೆಲ್ ಕದಂಪುರದಲ್ಲಿ ಓದಿದ್ದಾಳೆ. ನಂತರ ಅವರು ಕೆಜಿಬಿವಿ (ಟೈಪ್–4) ಹಾಸ್ಟೆಲ್‌ಗೆ ಶಿಫ್ಟ್ ಆದಳು, ಇಲ್ಲಿ ತನ್ನ 10ನೇ ತರಗತಿಯನ್ನು ಪೂರ್ಣಗೊಳಿಸಿದಳು. ಈಗ ಬಿ.ಎ. ಡಿಗ್ರಿ ಎರಡನೇ ಸೆಮಿಸ್ಟರ್ ಓದುತ್ತಿದ್ದಾಳೆ. ಕೆಜಿಬಿವಿ ಡಂಬಳ ಶಾಲೆಯಲ್ಲಿ ಆತ್ಮರಕ್ಷಣೆಗಾಗಿ ವಿದ್ಯಾರ್ಥಿಯು ಕರಾಟೆ ತರಬೇತಿಯಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಳು. ಈಗ ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್ ಆಗಿದ್ದಾಳೆ. ಸ್ವಾತಿ, ಹಾಸನದಲ್ಲಿ ನಡೆದ ರಾಜ್ಯ ಮಟ್ಟದ ಸ್ಕೀಂ ಕ್ರೀಡಾ ಕೂಟದಲ್ಲಿ ಭಾಗವಹಿಸಿ ಚಿನ್ನದ ಪದಕ ಗೆದ್ದು, ನಂತರ ಜಮ್ಮು ಕಾಶೀರಕ್ಕೆ ಆಯ್ಕೆಯಾಗಿ ಚಿನ್ನದ ಪದಕ ಗೆದ್ದಿದ್ದಾಳೆ. ಹಾಗೆಯೇ ನೇಪಾಳದಲ್ಲಿ ನಡೆದ ಅಂತರಾಷ್ಟ್ರೀಯ ಮಟ್ಟದ ಸ್ಕೀಂ ಗೇಮ್ಸ್ ನಲ್ಲಿ ಭಾಗವಹಿಸಿ ಛತ್ತೀಸ್‌ಗಢನಲ್ಲಿ ನಡೆದ ಏಕ್ ಭಾರತ್ ಶ್ರೇಷ್ಠ ಭಾರತ್ ಗೆ ಆಯ್ಕೆಯಾಗಿ ಚಿನ್ನದ ಪದಕವನ್ನು ಹಾಗು ಎರಡು ಚಿನ್ನದ ಪದಕಗಳನ್ನು ಗೆದ್ದಿದ್ದಳು. (5 ರಿಂದ 8ನೇ ತರಗತಿ ರವರೆಗೆ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಗೋವಾ ಎರಡು ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿತು) ಈ ಎಲ್ಲಾ ಸಾಧನೆಗಳಿಗೆ ಕೆಜಿಬಿವಿ ಶಾಲೆಯಲ್ಲಿ ಕರಾಟೆ ತರಬೇತಿಯೇ ಪ್ರೇರಣೆ ಎಂದು ಇಲಾಖೆಗೆ ಅಭಿನಂದನೆ ಸಲ್ಲಿಸಿದರು.

**ಹೆಸರು** : ಪ್ರಿಯಾಂಕಾ ಕಲ್ಲಿಗನೂರ

ಸಾ: ಗಜೇಂದ್ರಗಡ



ನಮ್ಮ ಕೆಜಿಬಿವಿ ಶಾಲೆಯು ಮುಖ್ಯ ವಾಹಿನಿಯಿಂದ ದೂರವಿದ್ದ ಹೆಣ್ಣು ಮಕ್ಕಳಿಗೆ ದಾರಿದೀಪವಾಗಿದೆ. ಅದೇನೆಂದರೆ 2014–15ನೇ ಸಾಲಿನಲ್ಲಿ ಬಡತನ ಹಾಗೂ ತಂದೆಯ ಅನಾರೋಗ್ಯದಿಂದ ಶಿಕ್ಷಣದಿಂದ ವಂಚಿತಳಾದ ಕುಮಾರಿ ಪ್ರಿಯಾಂಕ ಕಲ್ಲಿಗನೂರ ಎಂಬ ವಿದ್ಯಾರ್ಥಿನಿ ಕೆಜಿಬಿವಿ (ಟೈಪ್–1) ಶಾಲೆಯಲ್ಲಿ 6 ರಿಂದ 8ನೇ ತರಗತಿವರೆಗೆ ಓದಿದ್ದಳು. ಹೆಚ್ಚಿನ ವಿದ್ಯಾಭ್ಯಾಸ ಪಡೆದು ಇಂದು ಗಗನಸಖಿಯಾಗಿದ್ದು, ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಒಳ್ಳೆಯ ಉದ್ಯೋಗ ಪಡೆದು ಸಂಸಾರವನ್ನು ನೋಡಿಕೊಳ್ಳುತ್ತಿದ್ದಾರೆ. ಈ ಸಾಧನೆಗೆ ಕೆಜಿಬಿವಿ ಸೂಡಿ ಗದಗ ಜಿಲ್ಲೆಯ ಶಾಲೆಯೇ ಕಾರಣ ಎಂದು ಹೇಳಿದ ಅವರು ಪ್ರೇರಣೆ ಮತ್ತು ಬೆಂಬಲಕ್ಕಾಗಿ ಕೆಜಿಬಿವಿ ಶಾಲೆಯ ಹೆಚ್.ಎಂ. ಮತ್ತು ಸಿಬ್ಬಂದಿಗೆ ಧನ್ಯವಾದವನ್ನು ಅರ್ಪಿಸಿದ್ದಾರೆ

**ವಿದ್ಯಾರ್ಥಿನಿಯ ಹೆಸರು: ಗೀತಾ ಹಿರೇಮಠ**

ತಂದೆಯ ಹೆಸರು: ಸಿದ್ದಲಿಂಗಯ್ಯ

ತಾಯಿಯ ಹೆಸರು: ಸುರೇಖಾ



ಗೀತಾ D/o ಶ್ರೀ ಸಿದ್ಧಗಂಗಯ್ಯ ಹಿರೇಮಠ, ಇವರು 09–08–2001 ರಂದು ಗೋಕಾಕ ತಾಲ್ಲೂಕಿನ ದುರದುಂಡಿಯಲ್ಲಿ ಬಡ ಕುಟುಂಬದಲ್ಲಿ ಜನಿಸಿದರು. ಅವಳು ತನ್ನ 1 ರಿಂದ 5ನೇ ತರಗತಿಯನ್ನು ತನ್ನ ಸ್ವಂತ ಗ್ರಾಮದ ಹಾಲಸಿದ್ದೇಶ್ವರ ಅನುದಾನಿತ ಶಾಲೆಯಲ್ಲಿ ಪೂರ್ಣಗೊಳಿಸಿದಳು. 2012–13 ರಿಂದ 2014–15ನೇ ಸಾಲಿನಲ್ಲಿ ಕೆಜಿಬಿವಿ (ಟೈಪ್–1) ಶಾಲೆಯಲ್ಲಿ 6 ರಿಂದ 8ನೇ ತರಗತಿಗೆ ಪ್ರವೇಶ ಪಡೆದಿದ್ದಳು ಮತ್ತು ವಡೇರಹಟ್ಟಿಯ ಸರ್ಕಾರಿ ಪ್ರೌಢಶಾಲೆಯಲ್ಲಿ 9ನೇ ತರಗತಿ ಓದಿದ್ದು, ಆರ್.ಎಂ.ಎಸ್.ಎ. ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದಾಳೆ. ಅವರು 2016–17ನೇ ಸಾಲಿನಲ್ಲಿ 10ನೇ ತರಗತಿಯನ್ನು ಪೂರ್ಣಗೊಳಿಸಿದಳು ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 96% ಅಂಕಗಳನ್ನು ಪಡೆದಿದ್ದಾಳೆ.

ಕೆಜಿಬಿವಿಯಲ್ಲಿ ತನ್ನ ಶಾಲಾ ದಿನಗಳಲ್ಲಿ ಅಧ್ಯಯನ ಮತ್ತು ಆಟಗಳ ಹೊರತಾಗಿ ಅವಳು ಗೊಂಬೆ ತಯಾರಿಕೆ, ಚಿತ್ರಕಲೆ, ಕರಾಟೆ, ಪೇಪರ್ ಕಟಿಂಗ್, ಹ್ಯಾಂಡ್ ವರ್ಕಗಳಂತಹ ನಿರ್ದಿಷ್ಟ ಕೌಶಲ್ಯ ಅಭಿವೃದ್ಧಿಯಲ್ಲಿ ತರಬೇತಿ ಪಡೆದಳು. ಅವಳ ಕುಟುಂಬ ಸದಸ್ಯರು ತುಂಬಾ ಸಂತೋಷಪಟ್ಟರು. ಮಜಲಟ್ಟಿಯ ಸರ್ಕಾರಿ ಪಿಯು ಕಾಲೇಜಿನಲ್ಲಿ ಪಿಯುಸಿ ವಿಜ್ಞಾನವನ್ನು ಮುಂದುವರಿಸಿದಳು ಮತ್ತು ಅವಳು ಪಿ.ಯು.ಸಿ. ದ್ವಿತೀಯ ವರ್ಷದ ಪರೀಕ್ಷೆಯಲ್ಲಿ 78% ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾಳೆ.

ಗೀತಾ ಅವರು ಬೈಲಹೊಂಗಲ ತಾಲ್ಲೂಕಿನ ಶ್ರೀ ಶಿವಯೋಗೀಶ್ವರ ಗ್ರಾಮಾಂತರ ಆಯುರ್ವೇದಿಕ್ ವೈದ್ಯಕೀಯ ಕಾಲೇಜಿನಲ್ಲಿ ಬಿಎಎಂ.ಎಸ್ 3ನೇ ವರ್ಷದ ವ್ಯಾಸಂಗ ಮಾಡುತ್ತಿದ್ದಾರೆ.

**ವಿದ್ಯಾರ್ಥಿನಿಯ ಹೆಸರು: ರೂಪ ರಮೇಶ ಸಾತಲಿಂಗಗೋಳ.**





ಕುಮಾರಿ ರೂಪ ರಮೇಶ್ ಸಾತಲಿಂಗೋಳ್ ಅವರು ಗ್ರಾಮೀಣ ರೈತ ಕುಟುಂಬದಲ್ಲಿ ಜನಿಸಿದರು. ಆಕೆಯ ತಂದೆ ರೈತ ಅಥಣಿ ತಾಲ್ಲೂಕಿನ ದರೂರು ಗ್ರಾಮದವರು. ಅವಳು 2016–17 ನೇ ಸಾಲಿನಲ್ಲಿ 6ನೇ ತರಗತಿಗೆ ಸೇರಿದಳು. ಅವಳು ಶೈಕ್ಷಣಿಕ ಮತ್ತು ಇತರೆ ಸಹಪಠ್ಯ ಚಟುವಟಿಕೆಗಳಾದ ಕ್ರೀಡೆ ಕರಕುಶಲ ಕೆಲಸ, ಟೈಲರಿಂಗ್ ಮತ್ತು ಇತರ ನುರಿತ ಕೆಲಸಗಳಲ್ಲಿ ತುಂಬಾ ಚೆನ್ನಾಗಿದ್ದಳು.

ಅವರು 2018–19ನೇ ಸಾಲಿನಲ್ಲಿ 8ನೇ ತರಗತಿಯನ್ನು ಪೂರ್ಣಗೊಳಿಸಿದಳು 9ನೇ ತರಗತಿ 2019–20ಕ್ಕೆ ಬಡ್ತಿ ಪಡೆದು ಸರ್ಕಾರಿ ಪ್ರೌಢಶಾಲೆ ವಡೇರಹಟ್ಟಿಗೆ ಸೇರಿ ಕೆಜಿಬಿವಿ (ಟೈಪ್–4) ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದಾಳೆ. ಅವಳು ತನ್ನ ಹೆಚ್ಚಿನ ಸಮಯವನ್ನು ಅಧ್ಯಯನದಲ್ಲಿ ಕಳೆದಳು ಮತ್ತು 10ನೇ ತರಗತಿಯಲ್ಲಿ 98.08% ಅಂಕಗಳನ್ನು ಪಡೆದು ಡಿಸ್ಟಿಂಕ್ಷನ್ ಗಳಿಸಿದಳು. ಆಕೆಯ ಅಭಿನಯದಿಂದ ಆಕೆಯ ಪೋಷಕರು ಮತ್ತು ಶಿಕ್ಷಕರು ತುಂಬಾ ಸಂತೋಷಪಟ್ಟರು.

ಅವಳು ತನ್ನ ಶಿಕ್ಷಣವನ್ನು ಮುಂದುವರೆಸಿದಳು ಮತ್ತು ಸರ್ಕಾರಿ ಪಿಯು ಕಾಲೇಜ್ ಆಫ್ ಕಾರ್ಮಸ್‌ಗೆ ಸೇರಿಕೊಂಡಳು. 2ನೇ ಪಿಯುಸಿ ಪರೀಕ್ಷೆಯಲ್ಲಿ 85.33% ಅಂಕಗಳನ್ನು ಗಳಿಸಿದಳು. ಈಗ ಅವರು 16–10–2023 ರಿಂದ ನಿಪ್ಪಾಣಿ ತಾಲ್ಲೂಕಿನ ಸಿರಗುಪ್ಪಿ ಗ್ರಾಮದಲ್ಲಿ ಎಬಿಎಂಪಿಯಾಗಿ ಅಂಚೆ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

**ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗಾಗಿ ಸಮನ್ವಯಶಿಕ್ಷಣ :2023–24**

ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಸಾಮಾನ್ಯ ಶಾಲೆಗಳಲ್ಲಿ ಸಂಯೋಜಿಸಲು ಕರ್ನಾಟಕ ರಾಜ್ಯದಲ್ಲಿ ಸಮನ್ವಯ ಶಿಕ್ಷಣ ನೀತಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದು ಸಾಮಾನ್ಯ ತರಗತಿಗಳಲ್ಲಿ ಅಗತ್ಯ ಬೆಂಬಲ ವ್ಯವಸ್ಥೆ ಮತ್ತು ಅನುಕೂಲತೆಗಳನ್ನು ಮಾಡುವುದರ ಮೂಲಕ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿಕೊಳ್ಳುವುದನ್ನು ಸಹ ಒಳಗೊಂಡಿದೆ. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಬೆಂಬಲ ಮತ್ತು ಸಂಪನ್ಮೂಲವನ್ನು ಒದಗಿಸುತ್ತಿರುವ ಸಂಪನ್ಮೂಲ ಕೇಂದ್ರಗಳಲ್ಲಿ ವಿಶೇಷವಾದ ತರಬೇತಿ, ಸಾಮಗ್ರಿಗಳು ಮತ್ತು ಕಲಿಕಾ ಅನುಭವವನ್ನು ಹೆಚ್ಚಿಸಲು ಸ್ಥಾಪಿತವಾಗಿವೆ. ರಾಜ್ಯವು ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸೇವೆಯನ್ನು ಒದಗಿಸಲು ಪರಿಣತಿ ಹೊಂದಿರುವ ಸರ್ಕಾರೇತರ ಸಂಘ ಸಂಸ್ಥೆಗಳೊಂದಿಗೆ ಸಹಭಾಗಿತ್ವ ಹೊಂದಿದೆ. ಇದು ಬಾಹ್ಯ ಪರಿಣತಿ ಮತ್ತು ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಸಹಕಾರಿಯಾಗಿದೆ.

ರಾಜ್ಯದಲ್ಲಿ ಶಾಲೆಗೆ ದಾಖಲಾದ ಎಲ್ಲಾ ಮಕ್ಕಳನ್ನು ತಪಾಸಣೆಗೆ ಒಳಪಡಿಸಿ PRWD Act, 2016 ರ ಪ್ರಕಾರ 21 ವಿಧಧ ನ್ಯೂನತೆಗಳಲ್ಲಿ ಅವರಲ್ಲಿ ಇರಬಹುದಾದ ನ್ಯೂನತೆಗಳನ್ನು ಪತ್ತೆಹಚ್ಚುವ ನಿರಂತರ ಚಟುವಟಿಕೆಯನ್ನು ಕೈಗೊಳ್ಳಲಾಗುತ್ತಿದೆ. ಮೊದಲ ಹಂತದ ಪರಿಶೀಲನೆಯನ್ನು ಶಾಲಾ ಶಿಕ್ಷಕರು ನಂತರದ ಹಂತದಲ್ಲಿ ವಿಶೇಷ ಶಿಕ್ಷಕರು ಕೈಗೊಳ್ಳುವರು. ಮುಂದಿನ ಹಂತದಲ್ಲಿ ಜಿಲ್ಲಾ ಹಂತದಲ್ಲಿ ತ್ರಿಸದಸ್ಯ ಸಮಿತಿಯು ಇವರನ್ನು ಪರಿಶೀಲಿಸುತ್ತದೆ. ನ್ಯೂನ್ಯತೆ ಪತ್ತೆಹಚ್ಚುವಿಕೆ ಹಾಗೂ ವರ್ಗೀಕರಣದ ಉದ್ದೇಶವು – ಅವರಿಗೆ ತರಗತಿ ಕೊಠಡಿಯಲ್ಲಿ, ಶಾಲಾ ಆವರಣದಲ್ಲಿ ಹಾಗೂ ಪರೀಕ್ಷೆ ಹಾಗೂ ಮೌಲ್ಯಮಾಪನಕ್ಕೆ ದೊರಕಬೇಕಾದ ಅಗತ್ಯ ಅನುಕೂಲತೆಗಳನ್ನು, ಯಾವುದೇ ವಿಳಂಬವಿಲ್ಲದೆ ಒದಗಿಸುವುದಾಗಿದೆ. ಅವರಿಗೆ ಸಮಾನ ಅವಕಾಶಗಳನ್ನು ಒದಗಿಸುವ ಹಾಗು ಅವರ ಮನೋಬಲವನ್ನು ಹೆಚ್ಚಿಸುವ ಹಲವಾರು ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ. ಶಾಲೆಯ ಇತರೆ ಸಾಮಾನ್ಯ ಮಕ್ಕಳಿಗೂ ಸಹ CWSN ಮಕ್ಕಳ ಕುರಿತು ಅವರ ಪಾತ್ರ ಮತ್ತು ಜವಾಬ್ದಾರಿಗಳು ಹಾಗೂ ಅವರಿಗೆ ಸಮಾನ ಅವಕಾಶಗಳನ್ನು ಒದಗಿಸುವ ಕುರಿತು ತಿಳಿಸಲಾಗುವುದು.

ವಿಶೇಷ ಅಗತ್ಯವುಳ್ಳ ಮಕ್ಕಳನ್ನು PRWD Act, 2016 ಪ್ರಕಾರ 21 ವಿಧಗಳ ನ್ಯೂನತೆಗಳಡಿಯಲ್ಲಿ ಗುರುತಿಸಲಾಗುವುದು. ಈ ಮಕ್ಕಳ ವಿವರಗಳನ್ನು UDISE+ portal ನಲ್ಲಿ ಹಾಗೂ Student Achievement

Tracking System- SATS ಡೇಟಾ ಬೇಸ್‌ನಲ್ಲಿ ದಾಖಲಿಸಲಾಗುವುದು. 2023–24 ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಹಂತದಲ್ಲಿ 68285 ಮತ್ತು ಪ್ರೌಢಶಾಲಾ ಹಂತದಲ್ಲಿ 20877 CWSN ಮಕ್ಕಳ ಶಾಲೆಗೆ ದಾಖಲಾಗಿದ್ದಾರೆ.

**2023–24 ನೇ ಸಾಲಿನಲ್ಲಿಪ್ರಾಥಮಿಕ ಶಾಲೆಗಳಲ್ಲಿ ದಾಖಲಾಗಿರುವ ನ್ಯೂನತೆವಾರು ವಿಶೇಷ ಅಗತ್ಯತೆಯುಳ್ಳ ಮಕ್ಕಳ ವಿವರ ಈ ಕೆಳಕಂಡಂತಿದೆ.**

| ಕ್ರ. ಸಂ. | ನೂನ್ಯತೆಗಳು | ಗುರುತಿಸಲಾದ ವಿಕಲಚೇತನ ಮಕ್ಕಳಸಂಖ್ಯೆ | | |
|---|---|---|---|---|
| | | ಗಂಡು | ಹೆಣ್ಣು | ಒಟ್ಟು |
| 1 | ದೃಷ್ಠಿ ದೋಷ | 1047 | 708 | 1755 |
| 2 | ಪಾರ್ಶ್ವ ದೃಷ್ಠಿದೋಷ | 2369 | 3058 | 5427 |
| 3 | ಶ್ರವಣ ದೋಷ | 4655 | 3672 | 8327 |
| 4 | ಮಾತು ಮತ್ತು ಭಾಷೆಯಲ್ಲಿ ನ್ಯೂನತೆ | 5663 | 3378 | 9041 |
| 5 | ದೈಹಿಕ/ ಚಲನಾಂಗದಲ್ಲಿ ನ್ಯೂನತೆ | 6870 | 6146 | 13016 |
| 6 | ಮಾನಸಿಕ ಅಸ್ವಸ್ಥತೆ | 2115 | 775 | 2890 |
| 7 | ನಿರ್ಧಿಷ್ಟ ಕಲಿಕಾ ನ್ಯೂನತೆ | 742 | 836 | 1578 |
| 8 | ಮೆದುಳುವಾತ/ಮೆದುಳಿನ ಪಾರ್ಶವಾಯು | 1073 | 716 | 1789 |
| 9 | ಆಟಿಸಂ | 449 | 176 | 625 |
| 10 | ಬಹುವಿಧ ಅಂಗವಿಕಲತೆ | 3889 | 3849 | 7738 |
| 11 | ಕುಷ್ಠರೋಗದಿಂದ ಗುಣವಾಗಿರುವವರು | 17 | 52 | 69 |
| 12 | ಕುಬ್ಜತೆ | 261 | 239 | 500 |
| 13 | ಬೌದ್ಧಿಕ ವಿಕಲತೆ | 6261 | 6816 | 13077 |
| 14 | ಸ್ನಾಯುಗಳ ದೌರ್ಬಲ್ಯ | 525 | 356 | 881 |
| 15 | ನರಮಂಡಲದ ಕಾಯಿಲೆಯಿಂದ ಉಂಟಾಗುವ ನೂನ್ಯತೆಗಳು | 243 | 109 | 352 |
| 16 | ಮಲ್ಟಿಪಲ್ ಸ್ಕ್ಲೀರೋಸಿಸ್ | 440 | 127 | 567 |
| 17 | ಥಲಸೇಮಿಯಾ | 114 | 48 | 162 |
| 18 | ಹೀಮೊಫಿಲಿಯಾ | 76 | 32 | 108 |
| 19 | ಸಿಕಲ್ ಸೆಲ್ ಕಾಯಿಲೆ | 52 | 11 | 63 |
| 20 | ಆಸಿಡ್ ದಾಳಿಗೆ ತುತ್ತಾದವರು | 39 | 5 | 44 |
| 21 | ಪಾರ್ಕಿನ್ಸನ್ ಕಾಯಿಲೆ | 245 | 31 | 276 |
| **ಒಟ್ಟು** | | **37145** | **31140** | **68285** |

**2023–24 ನೇ ಸಾಲಿನಲ್ಲಿ ಭೌತಿಕ ಹಾಗೂ ಆರ್ಥಿಕ ಪ್ರಗತಿ (ಪ್ರಾಥಮಿಕ ವಿಭಾಗ)**

(ರೂ.ಲಕ್ಷಗಳಲ್ಲಿ)

| ಭೌತಿಕ ಹಾಗೂ ಆರ್ಥಿಕ ಪ್ರಗತಿ ಸಾಧನೆ | | |
|---|---|---|
| **ಚಟುವಟಿಕೆಗಳು** | **ಭೌತಿಕ** | **ಆರ್ಥಿಕ** |
| ಸಾರಿಗೆ ಭತ್ಯೆ 10 ತಿಂಗಳಿಗೆ | 18847 | 659.645 |
| ಬೆಂಗಾವಲು ಭತ್ಯೆ 10 ತಿಂಗಳಿಗೆ | 3700 | 111.00 |
| CWSN ಥೆರಪಿ ಸೇವೆಗಳು | 204 | 228.0 |
| CwSN ಹೆಣ್ಣುಮಕ್ಕಳ ಭತ್ಯೆ | 19268 | 385.36 |
| ಓದುಗರ ಭತ್ಯೆ | 4031 | 80.62 |
| ಕ್ರೀಡೆ ಮತ್ತು ಕ್ಷೇತ್ರ ಭೇಟಿ | 35 | 38.5 |
| ವಿಶೇಷ ಶಿಕ್ಷಕರಿಗೆ ಆರ್ಥಿಕ ಬೆಂಬಲ | 408 | 979.20 |
| **ಒಟ್ಟು** | | **2482.325** |

ಎಲ್ಲಾ ವಿಧದ ಶಾಲೆಗಳ ಮುಖ್ಯಸ್ಥರು, ಆಡಳಿತಗಾರರಿಗೆ ಸಮನ್ವಯ ಶಿಕ್ಷಣ, CWSN ಮಕ್ಕಳಿಗೆ ಲಭ್ಯವಿರುವ ಸೌಲಭ್ಯಗಳು ಮತ್ತು ಶಾಲೆಗಳಲ್ಲಿ ಸಮನ್ವಯತೆಯ ಅನುಷ್ಠಾನ ತರಲು ಅವರ ಪಾತ್ರದ ಕುರಿತು ಪುಶ್ಚೇತನ ತರಬೇತಿ ನೀಡಲಾಗಿದೆ. ಸಾಮಾನ್ಯ ಜನರಿಗೆ, ಪೋಷಕರಿಗೆ ಪರಿಸರ ನಿರ್ಮಾಣ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಈ ಚಟುವಟಿಕೆಗಳನ್ನು ವೆಚ್ಚರಹಿತವಾಗಿ ಆಯೋಜಿಸಿದೆ.

**2023–24 ನೇ ಸಾಲಿನಲ್ಲಿ ಪ್ರೌಢಶಾಲಾ ಹಂತದಲ್ಲಿ ವಿಶೇಷ ಅಗತ್ಯತೆಯುಳ್ಳ ಮಕ್ಕಳ ನ್ಯೂನ್ಯತೆವಾರು ವಿವರ**
**(9 ಮತ್ತು 10 ನೇ ತರಗತಿ)**

| Sl No | Type of Deformity | Class 9 to 10 | | |
|---|---|---|---|---|
| | | Boys | Girls | Total |
| 1 | ದೃಷ್ಟಿದೋಷ | 273 | 388 | 661 |
| 2 | ಪಾರ್ಶ್ವ ದೃಷ್ಟಿದೋಷ | 1534 | 1369 | 2903 |
| 3 | ಶ್ರವಣದೋಷ | 1057 | 1447 | 2504 |
| 4 | ಮಾತು ಮತ್ತು ಭಾಷೆಯಲ್ಲಿ ನ್ಯೂನತೆ | 857 | 1215 | 2072 |
| 5 | ದೈಹಿಕ/ ಚಲನಾಂಗದಲ್ಲಿ ನ್ಯೂನತೆ | 1909 | 2705 | 4614 |
| 6 | ಮಾನಸಿಕ ಅಸ್ವಸ್ಥತೆ | 200 | 283 | 483 |
| 7 | ನಿರ್ಧಿಷ್ಟ ಕಲಿಕಾ ನ್ಯೂನತೆ | 267 | 328 | 595 |
| 8 | ಮೆದುಳುವಾತ/ಮೆದುಳಿನ ಪಾರ್ಶವಾಯು | 177 | 285 | 462 |
| 9 | ಆಟಿಸಂ | 19 | 64 | 83 |
| 10 | ಬಹುವಿಧ ಅಂಗವಿಕಲತೆ | 831 | 1214 | 2045 |
| 11 | ಕುಷ್ಟರೋಗದಿಂದ ಗುಣವಾಗಿರುವವರು | 11 | 16 | 27 |
| 12 | ಕುಬ್ಜತೆ | 117 | 74 | 191 |

| | | | | |
|---|---|---|---|---|
| 13 | ಬೌದ್ಧಿಕ ವಿಕಲತೆ | 2435 | 1910 | 4345 |
| 14 | ಸ್ನಾಯುಗಳ ದೌರ್ಬಲ್ಯ | 87 | 146 | 233 |
| 15 | ನರಮಂಡಲದ ಕಾಯಿಲೆಯಿಂದ ಉಂಟಾಗುವ ನ್ಯೂನತೆಗಳು | 27 | 33 | 60 |
| 16 | ಮಲ್ಟಿಪಲ್ ಸ್ಕ್ಲೀರೋಸಿಸ್ | 40 | 45 | 85 |
| 17 | ಥಲಸೇಮಿಯಾ | 16 | 12 | 28 |
| 18 | ಹೀಮೊಫಿಲಿಯಾ | 6 | 11 | 17 |
| 19 | ಸಿಕಲ್ ಸೆಲ್ ಕಾಯಿಲೆ | 5 | 10 | 15 |
| 20 | ಆಸಿಡ್ ದಾಳಿಗೆ ತುತ್ತಾದವರು | 2 | 1 | 3 |
| 21 | ಪಾರ್ಕಿನ್ಸನ್ ಕಾಯಿಲೆ | 6 | 12 | 18 |
| **ಒಟ್ಟು** | | 9876 | 11568 | 21444 |

**ಪ್ರೌಢಶಾಲಾ ಹಂತದ ಆರ್ಥಿಕ ಹಾಗೂ ಭೌತಿಕ ಪ್ರಗತಿ– 2023–24**

**(ರೂ.ಲಕ್ಷಗಳಲ್ಲಿ)**

| **ಭೌತಿಕ ಹಾಗೂ ಆರ್ಥಿಕ ಪ್ರಗತಿ ಸಾಧನೆ** | | | |
|---|---|---|---|
| **ಭೌತಿಕ** | | **ಭೌತಿಕ** | **ಆರ್ಥಿಕ** |
| 1 | ಕ್ರೀಡೆ ಮತ್ತು ಕ್ಷೇತ್ರ ಭೇಟಿ | 35 | 38.5 |
| 2 | ಆಯಾಗಳಿಗೆ ಸಂಭಾವನೆ– ಸಂಪನ್ಮೂಲ ಕೇಂದ್ರಗಳಲ್ಲಿ | 204 | 122.4 |
| 3 | ಬೆಂಗಾವಲು ಭತ್ಯೆ | 1008 | 30.24 |
| 4 | ಸಾರಿಗೆ ಭತ್ಯೆ | 6556 | 229.46 |
| 6 | ಓದುಗರ ಭತ್ಯೆ | 2394 | 47.88 |
| 7 | ಹೆಣ್ಣುಮಕ್ಕಳ ಭತ್ಯೆ | 7362 | 147.24 |
| 10 | ಸಂಪನ್ಮೂಲ ಕೇಂದ್ರಗಳ ಬಲವರ್ಧನೆ ಕಾರ್ಯಕ್ರಮ | 51 | 102.00 |
| 11 | ವಿಶೇಷ ಶಿಕ್ಷಕರಿಗೆ ಆರ್ಥಿಕ ಬೆಂಬಲ | 408 | 1224.0 |
| **Grand Total (Secondary Level)** | | | **1941.72** |

**2023–24 ನೇ ಸಾಲಿನಲ್ಲಿ ಆಯೋಜನೆಯಾದ ಚಟುವಟಿಕೆಗಳ ಸಂಕ್ಷಿಪ್ತ ಮಾಹಿತಿ**

PAB ಅನುಮೋದಿತ 'ಸಮನ್ವಯಶಿಕ್ಷಣ ಸಂಬಂಧ ಚಟುವಟಿಕೆಗಳನ್ನು ಶಾಲಾ, ಬ್ಲಾಕ್, ಜಿಲ್ಲಾ ಹಾಗೂ ರಾಜ್ಯಹಂತಗಳಲ್ಲಿ ಆಯೋಜಿಸಲಾಗಿದೆ.

### ಸಾರಿಗೆ ಮತ್ತು ಬೆಂಗಾವಲು ಭತ್ಯೆ:

ತೀವ್ರತರವಾದ ನ್ಯೂನತೆಯುಳ್ಳ ವಿದ್ಯಾರ್ಥಿಗಳಿಗೆ ಸಾರಿಗೆ ಭತ್ಯೆಯನ್ನು ನೀಡಲಾಗುತ್ತಿದೆ. ಸಾಮಾನ್ಯವಾಗಿ ಲೋಕೋಮೋಟಾರ್ ನ್ಯೂನತೆ, ಸೆರಬ್ರಲ್ ಪಾಲ್ಸಿ, ಸ್ನಾಯು ಕ್ಷಯ (Muscular Dystrophy) ನ್ಯೂನತೆ ಯುಳ್ಳ ಮಕ್ಕಳು ತೀವ್ರತರವಾದ ನ್ಯೂನತೆ ಹೊಂದಿರುತ್ತಾರೆ. ಬೆಂಗಾವಲು ಭತ್ಯೆಯನ್ನು ಸಂಪನ್ಮೂಲ ಕೇಂದ್ರಗಳಲ್ಲಿ

ಥೆರಪಿ ಸೇವೆ ಪಡೆಯಲು ಮತ್ತು ಕಲಿಕಾ ಸೌಲಭ್ಯಗಳನ್ನು ಪಡೆಯಲು ಬರುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ತೀವ್ರತರವಾದ ನ್ಯೂನತೆ ಯುಳ್ಳ ಮಕ್ಕಳಿಗೆ ಗೃಹಾಧಾರಿತ ಶಿಕ್ಷಣವನ್ನು ನೀಡಲಾಗುತ್ತಿದ್ದು, ಇವರಿಗೆ ಬ್ಲಾಕ್ ಸಂಪನ್ಮೂಲ ಕೇಂದ್ರಗಳಲ್ಲಿ ಫಿಜಿಯೋಥೆರಪಿ ನೀಡಲಾಗುತ್ತಿದೆ. ಪ್ರಾಥಮಿಕ ವಿಭಾಗದಲ್ಲಿ 19138 ವಿದ್ಯಾರ್ಥಿಗಳಿಗೆ ಮತು ಪ್ರೌಢಶಾಲಾ ವಿಭಾಗದಲ್ಲಿ 3700 ವಿದ್ಯಾರ್ಥಿಗಳಿಗೆ ರೂ.141.24 ಲಕ್ಷ ಮೊತ್ತದ ಸಾರಿಗೆಭತ್ಯೆ ಬೆಂಗಾವಲು ಭತ್ಯೆಯನ್ನು ನೀಡಿದೆ.






**ಸಾರಿಗೆ ಮತ್ತು ಬೆಂಗಾವಲು ಭತ್ಯೆ**

**ಓದುಗರ ಭತ್ಯೆ ;**



ಪೂರ್ಣಅಂಧತ್ವ ಹೊಂದಿರುವ ಅಥವಾ ಮಿತ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಅವರ ಪಠ್ಯ/ನೋಟ್ಸ್‌ಗಳನ್ನು ಹಿರಿಯರ, ಅಕ್ಕ-ಪಕ್ಕದವರ ನೆರವಿನಿಂದ ಅಥವಾ ಮನೆಯ ಸದಸ್ಯರ ಬೆಂಬಲದಿಂದ ಓದಲು/ವಿವರಣೆ ಪಡೆಯಲು ಸಹಕಾರಿಯಾಗುವಂತೆ ಈ ಭತ್ಯೆಯನ್ನು ಒದಗಿಸಲಾಗುತ್ತಿದೆ. 4031 ಪ್ರಾಥಮಿಕ ಹಂತದ ಹಾಗೂ 2394 ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳಿಗೆ ಈ ಸೌಲಭ್ಯ ನೀಡಿದೆ. ರೂ.128.5 ಲಕ್ಷ ಅನುದಾನವನ್ನು ಈ ಸಂಬಂಧ ಬಿಡುಗಡೆ ಮಾಡಿದೆ.

**ವಿಶೇಷ ಅಗತ್ಯವುಳ್ಳ ಹೆಣ್ಣು ಮಕ್ಕಳಿಗೆ ಸ್ಟೈಫಂಡ್;**

ಭಾರತದ ಸಂವಿಧಾನದ 86 ನೇ ತಿದ್ದುಪಡಿಯ ದೃಷ್ಟಿಕೋನದ  ಪೂರ್ಣಗೊಳಿಸುವಿಕೆಗೆ ಹೆಣ್ಣುಮಕ್ಕಳು ಶಿಕ್ಷಣವನ್ನು ಮುಂದುವರೆಸಲು ಹೆಣ್ಣುಮಕ್ಕಳ ಭತ್ಯೆ/ಸ್ಟೈಪಂಡ್ ನೀಡಲಾಗುತ್ತಿದೆ. 19268 ಪ್ರಾಥಮಿಕ ಹಂತದ ಹಾಗೂ 7362 ಪ್ರೌಢಶಾಲಾ ಹಂತದ  ಹೆಣ್ಣುಮಕ್ಕಳಿಗೆ ರೂ.532.60 ಲಕ್ಷಗಳ ಮೊತ್ತದ ಭತ್ಯೆಯನ್ನು ನೀಡಿದೆ.



ಕ್ರೀಡೆಯಲ್ಲಿ ವಿಜೇತರಾದ ವಿಶೇಷಚೇತನ ಮಕ್ಕಳು

ನೇರ್ಲಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಪಟ್ಟಣದ ಆದರ್ಶ ವಿದ್ಯಾಲಯದ ವಿದ್ಯಾರ್ಥಿಗಳು ನಾನಾ ಸ್ಪರ್ಧೆಗಳಲ್ಲಿ ವಿಜೇತರಾಗಿರುವುದು.

ರಾಜ್ಯ ಮಟ್ಟದ ವಿಶೇಷಚೇತನರ ಕ್ರೀಡಾಕೂಟ

**ಮೊಳಕಾಲ್ಮುರು:** ಪಟ್ಟಣದ ಆದರ್ಶ ವಿದ್ಯಾಲಯ ಹಾಗೂ ತಾಲೂಕಿನ ನೇರ್ಲಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಮಧುಗಿರಿ ಜಿಲ್ಲೆ ಕೊರಟಗೆರೆಯಲ್ಲಿ ಇತ್ತೀಚಿಗೆ ನಡೆದ ರಾಜ್ಯ ಮಟ್ಟದ ವಿಶೇಷಚೇತನರ ಕ್ರೀಡಾಕೂಟದಲ್ಲಿ ನಾನಾ ಸ್ಪರ್ಧೆಗಳಲ್ಲಿ ವಿಜೇತರಾಗಿದ್ದಾರೆ.

14 ವರ್ಷದೊಳಗಿನವರ ವಿಭಾಗದಲ್ಲಿ ಗುಂಡು ಎಸೆತ ಸ್ಪರ್ಧೆಯಲ್ಲಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ಸಮೃದ್ಧಿ ಗುಂಡು ಎಸೆತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ, ನೇರ್ಲಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿನಿ ಪಿ.ಸಂಜನಾ ಭರ್ಚಿ ಎಸೆತದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

17 ವರ್ಷದೊಳಗಿನ ವಿಭಾಗದಲ್ಲಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ಸಿ.ಸಿಂಚನ ಭರ್ಚಿ ಎಸೆತದಲ್ಲಿ ಪ್ರಥಮ ಹಾಗೂ ಗುಂಡು ಎಸೆತ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದು ತಾಲೂಕಿನ ಕೀರ್ತಿ ಹೆಚ್ಚಿಸಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಬಿಇಒ, ಬಿಆರ್‌ಸಿ ಹಾಗೂ ಮುಖ್ಯ ಶಿಕ್ಷಕರು ಅಭಿನಂದನೆ ಸಲ್ಲಿಸಿದ್ದಾರೆ.





**ಹೆಣ್ಣು ಮಕ್ಕಳಿಗೆ ಸ್ಟೈಫಂಡ್**

**ಫಿಜಿಯೋಥೆರಪಿ**

ತರಬೇತಿ ಹೊಂದಿರುವ ವೃತ್ತಿಪರ ಥೆರಸಿಪ್ಟ್‌ಗಳು ಎಲ್ಲಾ 204 ಶೈಕ್ಷಣಿಕ ಬ್ಲಾಕ್‌ಗಳಲ್ಲಿರುವ ಸಂಪನ್ಮೂಲ ಕೇಂದ್ರಗಳಲ್ಲಿ ಥೆರಪಿ ಸೇವೆ ನೀಡುತ್ತಿದ್ದಾರೆ. ಸದರಿ ಕೇಂದ್ರಗಳು ಈ ಸೇವೆ ನೀಡಲು ಅಗತ್ಯವಿರುವ ಸಾಧನ–ಸಲಕರಣೆಗಳಿಂದ ಸಜ್ಜುಗೊಂಡಿದೆ. ಈ ಮಕ್ಕಳ ಪೋಷಕರಿಗೆ ಸರಳ ವ್ಯಾಯಾಮಗಳು, ಮಸಾಜ್ ಮಾಡುವ ವಿಧಾನಗಳ ಕುರಿತು ತರಬೇತಿ ನೀಡಲಾಗುತ್ತಿದೆ.








**ಫಿಜಿಯೋಥೆರಪಿ**

**ಗೃಹಾಧಾರಿತ ಶಿಕ್ಷಣ ಮತ್ತು ಶಾಲಾ ಸಿದ್ಧತಾ ಕಾರ್ಯಕ್ರಮಗಳು**

ತೀವ್ರತರನಾದ ಮತ್ತು ಅತೀ ಹೆಚ್ಚಿನ ಪ್ರಮಾಣದ ನ್ಯೂನತೆಯುಳ್ಳ ಮಕ್ಕಳಿಗೆ ಗೃಹಾಧಾರಿತ ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಮಕ್ಕಳಿಗೆ ಕೌಶಲ ಮತ್ತು ಸ್ವಯಂ ನಿರ್ವಹಣೆಗೆ ತರಬೇತಿ ನೀಡಲಾಗುವುದು. ಇವರಿಗೆ ಫಿಜಿಯೋಥೆರಪಿ ಸೇವೆಯನ್ನೂ ನೀಡಲಾಗುತ್ತಿದೆ. ಶಿಕ್ಷಣದ ಸಾರ್ವತ್ರೀಕರಣದ ಅಡಿಯಲ್ಲಿ ಈ ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡಿಕೊಳ್ಳಲಾಗುತ್ತಿದೆ. BIERT ರವರು ಇವರ ಮನೆಗೆ ಭೇಟಿ ನೀಡಿ ಅಗತ್ಯ ಜೀವನ ಕೌಶಲಗಳ ಕುರಿತು ತರಬೇತಿ ನೀಡುತ್ತಿದ್ದಾರೆ. ಸಾಮರ್ಥ್ಯದಲ್ಲಿ ಸುಧಾರಣೆ ಕಂಡುಬರುವ ವಿದ್ಯಾರ್ಥಿಗಳಿಗೆ ಶಾಲಾ ಸಿದ್ಧತಾ/ಕಲಿಕಾ ಕೇಂದ್ರಗಳಲ್ಲಿ ತರಬೇತಿ ನೀಡಲಾಗುವುದು. ಅಗತ್ಯ ಕೌಶಲಗಳನ್ನು ಪಡೆದ ಮಕ್ಕಳನ್ನು ಸಮೀಪದ ಶಾಲೆಗಳಿಗೆ ದಾಖಲು ಮಾಡಿಕೊಳ್ಳಲಾಗುವುದು.

| | | |
|---|---|---|
|  |  |  |
| **ಗೃಹಾಧಾರಿತ ಶಿಕ್ಷಣ** | **ಶಾಲಾ ಸಿದ್ವತಾ ಕೇಂದ್ರ** | |

**ಶಾಲಾ ಸಿದ್ಧತಾ ಕೇಂದ್ರಗಳು**

1. ಶಾಲಾ ಸಿದ್ಧತಾ ಕೇಂದ್ರಗಳಲ್ಲಿ ತೀವ್ರತರನಾದ ನ್ಯೂನತೆಯುಳ್ಳ ಮಕ್ಕಳನ್ನು ಸ್ವಾವಲಂಭಿಗಳನ್ನಾಗಿ ಮತ್ತು ಸಾಮಾನ್ಯ ಶಾಲೆಗಳಿಗೆ ಹಾಜರಾಗುವಂತೆ ಅಗತ್ಯ ಕೌಶಲ ಮತ್ತು ತರಬೇತಿಯನ್ನು ನೀಡಲಾಗುತ್ತಿದೆ.
2. ಗೃಹಾಧಾರಿತ ಶಿಕ್ಷಣದಲ್ಲಿ ಸಾಕಷ್ಟು ಪ್ರಗತಿತೋರಿರುವ ವಿದ್ಯಾರ್ಥಿಗಳಿಗೆ ಶಾಲಾ ಸಿದ್ಧತಾ ಕೇಂದ್ರದಲ್ಲಿ ತರಬೇತಿ ನೀಡಲಾಗುವುದು.
3. ತೀವ್ರತರವಾದ ನ್ಯೂನತೆಯುಳ್ಳ ಮಕ್ಕಳು ಇತರೆ ಸಾಮಾನ್ಯ ಮಕ್ಕಳೊಂದಿಗೆ ಬೆರೆಯುವ ಕೌಶಲ ಮತ್ತು ತರಬೇತಿ ನೀಡಲಾಗುವುದು.
4. ಸರಳ ಮತ್ತು ಪರಿಣಾಮಕಾರಿ ಕಲಿಕೋಪಕರಣಗಳಿಂದ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಉತ್ತಮ ವಾತಾವರಣ ನಿರ್ಮಿಸಲಾಗುವುದು. ಅವರಲ್ಲಿನ ಕಲಿಕಾ ಕೊರತೆಗಳ ಅಂತರ ಕಡಿಮೆ ಮಾಡಲು ವೈಯುಕ್ತಿಕವಾಗಿ ತರಬೇತಿ ನೀಡಲಾಗುವುದು. ಈ ಕೇಂದ್ರಗಳಿಗೆ ಒದಗಿಸಿರುವ ಕಲಿಕೋಪಕರಣಗಳಿಂದ ಕಲಿಕಾ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಲಾಗುವುದು.

## ಕ್ರೀಡೆ ಮತ್ತು ಕ್ಷೇತ್ರ ಭೇಟಿ ಆಯೋಜನೆ

CWSN ವಿದ್ಯಾರ್ಥಿಗಳಿಗೆ ವಿವಿಧ ಕಲಿಕಾ ಅನುಭವಗಳನ್ನು ನೀಡಲು ಮತ್ತು ವಿವಿಧ ವಿಷಯಗಳ ಕುರಿತು ಮಾಹಿತಿ ಹೊಂದಲು ಕ್ಷೇತ್ರಭೇಟಿ, ತಜ್ಞರಿಂದ ಭಾಷಣ, ಚರ್ಚೆ, ಅನುಭವಗಳು ಇತ್ಯಾದಿಗಳ ಚಟುವಟಿಕೆಗಳನ್ನು ಆಯೋಜಿಸಲಾಗುವುದು. ಇದರೊಂದಿಗೆ ಹಲವು ಬ್ಲಾಕ್‌ಗಳಲ್ಲಿ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಐತಿಹಾಸಿಕ/ವೈಜ್ಞಾನಿಕ ಮಹತ್ವದ ಸ್ಥಳಗಳಿಗೆ, ವಿಶೇಷ ಅಗತ್ಯವುಳ್ಳ ವ್ಯಕ್ತಿಗಳಿಂದ ನಡೆಯುತ್ತಿರುವ ಸಂಸ್ಥೆ/ಕಾರ್ಯಾಗಾರಗಳಿಗೆ, ತಯಾರಿಕಾ ಘಟಕಗಳು ಮತ್ತಿತರ ಪ್ರಮುಖ ಸ್ಥಳಗಳಿಗೆ ಅವರಿಗೆ ವಿವಿಧ ಅನುಭವ ನೀಡುವ ಮತ್ತು ಅವರ ವೃತ್ತಿ ಆಯ್ಕೆಗೆ ಸಹಾಯಕವಾಗುವ ಉದ್ದೇಶದಿಂದ. ಈ ಚಟುವಟಿಕೆಯನ್ನು ಎಲ್ಲಾ 204 ಶೈಕ್ಷಣಿಕ ಬ್ಲಾಕ್‌ಗಳಲ್ಲಿ ಆಯೋಜಿಸಲಾಗಿದ್ದು, ಸುಮಾರು 32,000 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.





ಕ್ರೀಡೆ ಮತ್ತು ಕ್ಷೇತ್ರ ಭೇಟಿ

## ವಿವಿಧ ಸಂಸ್ಥೆಗಳ ಸಹಕಾರ


ಹಲವು ಸಂಸ್ಥೆಗಳು CWSN ಮಕ್ಕಳಿಗೆ ಬೆಂಬಲ ಸೇವೆಗಳನ್ನು ಒದಗಿಸುತ್ತಿವೆ– ಅಖಿಲ ಭಾರತ ಸೇವಾ ಸಮಾಜ ರವರು ಸೀಳುತುಟಿ ಮತ್ತು ಅಂಗುಲಿನ ನ್ಯೂನತೆಯುಳ್ಳ ಮಕ್ಕಳ ತಪಾಸಣೆ ಮತ್ತು ಉಚಿತ ಶಸ್ತ್ರ ಚಿಕಿತ್ಸೆಯನ್ನು ಒದಗಿಸುತ್ತಿದ್ದಾರೆ. ಅಹಮದಾಬಾದ್‌ನ We-Hear ಸಂಸ್ಥೆಯವರು 4 ಜಿಲ್ಲೆಗಳಲ್ಲಿ ಶ್ರವಣ ದೋಷವುಳ್ಳ (conductive hear loss) ಮಕ್ಕಳಿಗೆ ತಪಾಸಣೆ ನಡೆಸಿದ್ದು, ಹಂತ–ಹಂತವಾಗಿ ಸಾಧನಗಳನ್ನು ಒದಗಿಸುತ್ತಿದ್ದಾರೆ. ಅಸೋಶಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ ಸಂಸ್ಥೆಯು 6 ಜಿಲ್ಲೆಗಳ 60 ವಿಶೇಷ ಶಿಕ್ಷಕರಿಗೆ ಪುನಶ್ಚೇತನ ತರಬೇತಿ ನೀಡಿದೆ. ಸದರಿ ತರಬೇತಿಯಲ್ಲಿ ವೈಯುಕ್ತಿಕ ಶೈಕ್ಷಣಿಕ ಯೋಜನೆಯನ್ನು ತಯಾರಿಸುವ ವಿಧಾನವನ್ನು ತಿಳಿಸಿದ್ದಾರೆ. UNICEF ಸಂಸ್ಥೆಯು ವಿಶೇಷ ಶಿಕ್ಷಕರಿಗೆ ತರಬೇತಿ ಮಾಡ್ಯೂಲ್ ಸಿದ್ಧಪಡಿಸುವ ಮೂಲಕ ಬೆಂಬಲ ನೀಡುತ್ತಿದೆ.

## ಕ್ಷೇತ್ರ ಸಂಪನ್ಮೂಲ ಸಮನ್ವಯ ಕೇಂದ್ರಗಳು (ಬಿ.ಆರ್.ಸಿ) ಮತ್ತು

## ಸಮೂಹ ಸಂಪನ್ಮೂಲ ಸಮನ್ವಯ ಕೇಂದ್ರಗಳ (ಸಿ.ಆರ್.ಸಿ) ಕೇಂದ್ರಗಳ ಶೈಕ್ಷಣಿಕ ಬಲವರ್ಧನೆ:

ಬ್ಲಾಕ್ ಮತ್ತು ಕ್ಲಸ್ಟರ್ ಸಮೂಹ ಸಂಪನ್ಮೂಲ ಕೇಂದ್ರಗಳ ರಚನೆಯು ಶಾಲೆಗಳಲ್ಲಿನ ವಿದ್ಯಾರ್ಥಿಗಳ ಕಲಿಕೆ, ಶಿಕ್ಷಣದ ಗುಣಮಟ್ಟವನ್ನು ಬೆಂಬಲಿಸುವ, ಸುಧಾರಿಸುವ ಮತ್ತು ಶೈಕ್ಷಣಿಕ ಗುರಿಗಳನ್ನು ಮುಟ್ಟುವ ಮಹತ್ವಾಕಾಂಕ್ಷೆಯ ಸಂಪನ್ಮೂಲ ಕೇಂದ್ರಗಳಾಗಿವೆ. ಇದು ಶಿಕ್ಷಕರ ಸೇವೆಯಲ್ಲಿನ ತರಬೇತಿ, ಮಾರ್ಗದರ್ಶನ, ಆನ್‌ಸೈಟ್ ಬೆಂಬಲ ಮತ್ತು ತರಬೇತಿಯ ಅನುಸರಣೆಗೆ ಒತ್ತು ನೀಡುತ್ತದೆ. ಮುಖ್ಯವಾಗಿ ಪ್ರಾಥಮಿಕ ಶಾಲಾ ಶಿಕ್ಷಕರ ಶೈಕ್ಷಣಿಕ ಚಟುವಟಿಕೆಗಳಿಗೆ ತರಬೇತಿಯನ್ನು ನೀಡಲು, ಶಾಲಾ ಮಕ್ಕಳಿಗೆ ಕಲಿಕೆಯನ್ನು ಹೆಚ್ಚು ಆಹ್ಲಾದಕರ ಮತ್ತು ಆಸಕ್ತಿದಾಯಕವಾಗಿಸಲು ಬಿ.ಆರ್.ಸಿ ಗಳು ಮತ್ತು ಸಿ.ಆರ್.ಸಿ ಗಳ ಸಂಪನ್ಮೂಲ ಕೇಂದ್ರಗಳ ಮೂಲಕ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಕರ್ನಾಟಕದಲ್ಲಿ 204 ಬಿ.ಆರ್.ಸಿ ಮತ್ತು 4,103 ಸಿ.ಆರ್.ಸಿ ಕೇಂದ್ರಗಳಿವೆ. ಬಿ.ಆರ್.ಸಿ ಮತ್ತು ಸಿ.ಆರ್.ಸಿ ಸಂಪನ್ಮೂಲ ವ್ಯಕ್ತಿಗಳು ಬ್ಲಾಕ್ ಮತ್ತು ಕ್ಲಸ್ಟರ್ ಮಟ್ಟದಲ್ಲಿ ಶೈಕ್ಷಣಿಕ ಬೆಂಬಲವನ್ನು ಹಾಗೂ ಇಲಾಖೆಯ ಎಲ್ಲಾ ಶೈಕ್ಷಣಿಕ ಉಪಕ್ರಮಗಳನ್ನು ಶಾಲಾ ಹಂತದಲ್ಲಿ ಅನುಷ್ಠಾನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಶಿಕ್ಷಕರಿಗೆ ನಿರಂತರ ಬೆಂಬಲ ನೀಡುವುದು, ಅವರ ಶಾಲಾ ಶೈಕ್ಷಣಿಕ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು, ಅವರ ಶೈಕ್ಷಣಿಕ ಅಗತ್ಯತೆಗಳನ್ನು ಗುರುತಿಸುವುದು ಮತ್ತು ಎಸ್.ಡಿ.ಎಂ.ಸಿ ಗಳ ಮತ್ತು ಎನ್.ಜಿ.ಒ ಗಳೊಂದಿಗೆ ಸಂಪರ್ಕ ಸಾಧಿಸುವ ಜವಾಬ್ದಾರಿಯನ್ನು ನಿರ್ವಹಿಸುವುದರ ಮೂಲಕ ವಿದ್ಯಾರ್ಥಿಗಳ ಕಲಿಕೆಯಲ್ಲಿನ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ನೆರವಾಗುತ್ತಿದ್ದಾರೆ.

**ಪೋಷಕರ ಸಭೆ**

**ಕ್ಷೇತ್ರಸಂಪನ್ಮೂಲ ಕೇಂದ್ರಗಳ ಬಗ್ಗೆ ಮಾಹಿತಿ**

| ಒಟ್ಟು ಬ್ಲಾಕ್‌ಗಳ ಸಂಖ್ಯೆ | ಅನುಮೋದನೆಯಾದ BRCs | ಕಾರ್ಯನಿರ್ವಹಿಸುತ್ತಿರುವ BRCs | ಅನುಮೋದನೆಯಾದ BRPs | ಕಾರ್ಯನಿರ್ವಹಿಸುತ್ತಿರುವ BRPs |
|---|---|---|---|---|
| 204 | 204 | 204 | 1018 | 1018 |

ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳ ಬಗ್ಗೆ ಮಾಹಿತಿ

| ಒಟ್ಟು ಕ್ಲಸ್ಟರ್‌ಗಳ ಸಂಖ್ಯೆ | ಅನುಮೋದನೆಯಾದ CRCs | ಕಾರ್ಯನಿರ್ವಹಿಸುತ್ತಿರುವ CRCs |
|---|---|---|
| 4103 | 4103 | 4103 |

## ಬಿ.ಆರ್.ಸಿ ಶೈಕ್ಷಣಿಕ ಕೇಂದ್ರಗಳ 2023–24ನೇ ಸಾಲಿನ ಪ್ರಗತಿ ವಿವರ

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಚಟುವಟಿಕೆ | ಗುರಿ | | ಸಾಧನೆ | | ಸಾಧನೆ % | |
|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | Salary for 6 Resource Persons at BRC | **1027** | 4929.60 | 1027 | 4929.60 | 100 | 100 |
| 2 | Salary for 1 MIS Coordinator in position | **204** | 687.48 | 204 | 687.48 | 100 | 100 |
| 3 | Salary for 1 Data Entry Operator in position | **204** | 489.60 | 204 | 489.60 | 100 | 100 |
| 4 | Salary for 1 Accountant-cum-support staff | **204** | 526.32 | 204 | 526.32 | 100 | 100 |
| 5 | Contingency Grant | **204** | 61.20 | 204 | 61.20 | 100 | 100 |
| 6 | Meeting, TA | **204** | 51.00 | 204 | 51.00 | 100 | 100 |
| 7 | TLE/TLM Grant | **204** | 10.20 | 204 | 10.20 | 100 | 100 |
| 8 | Maintenance Grant | **204** | 20.40 | 204 | 20.40 | 100 | 100 |
| **Total** | | | **6775.80** | | **6775.80** | | **100** |

ಸಿ.ಆರ್.ಸಿ ಶೈಕ್ಷಣಿಕ ಕೇಂದ್ರಗಳ 2023–24 ನೇ ಸಾಲಿನ ಪ್ರಗತಿ ವಿವರ

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಚಟುವಟಿಕೆ | ಗುರಿ | | ಸಾಧನೆ | | ಸಾಧನೆ % | |
|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಭೌತಿಕ | ಆರ್ಥಿಕ | ಭೌತಿಕ |
| 1 | Salary of Cluster Coordinator | 4103 | 16247.88 | 4103 | 16247.88 | 100 | 100 |
| 2 | Contingency Grant | 4103 | 410.30 | 4103 | 410.30 | 100 | 100 |
| 3 | Meeting TA | 4103 | 205.15 | 4103 | 205.15 | 100 | 100 |
| 4 | TLM Grant | 4103 | 41.03 | 4103 | 41.03 | 100 | 100 |
| 5 | Maintenance Grant | 4103 | 205.15 | 4103 | 205.15 | 100 | 100 |
| 6 | Mobility Support for CRC(Strengthening of CRC) | 4103 | 41.03 | 4103 | 41.03 | 100 | 100 |
| | **Total** | | **17150.54** | | **17150.54** | | **100** |

ಸುಧಾರಿತ ತರಗತಿ ಪ್ರಕ್ರಿಯೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ವಿದ್ಯಾರ್ಥಿಗಳಲ್ಲಿ ಕಲಿಕೆ, ಶಿಕ್ಷಕರ ಸಕ್ರಿಯ ತರಗತಿ ಬೋಧನೆ ಮತ್ತು ಕಲಿಕೆಯ ಗುಣಮಟ್ಟವನ್ನು ಉತ್ತಮ ಪಡಿಸುವಲ್ಲಿ ಬಿ.ಆರ್.ಸಿ ಮತ್ತು ಸಿ.ಆರ್.ಸಿ ಸಂಪನ್ಮೂಲ ಕೇಂದ್ರಗಳು ಪ್ರಮುಖ ಪಾತ್ರ ವಹಿಸುತ್ತಿವೆ.

## ಮಾಧ್ಯಮ ಮತ್ತು ಸಮುದಾಯ ಸಂಚಯನ

ಶಾಲಾ ಶಿಕ್ಷಣದಲ್ಲಿ ಸಮುದಾಯದ ಸದಸ್ಯರ ನಿಕಟ ಭಾಗವಹಿಸುವಿಕೆ ಪ್ರಮುಖ ಅಂಶವಾಗಿದೆ. ಇದು ಶಾಲೆಗಳಲ್ಲಿ ಸಮುದಾಯದ ಪರಿಣಾಮಕಾರಿ ಭಾಗವಹಿಸುವಿಕೆ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನದಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಸಮುದಾಯದ ಪರಿಣಾಮಕಾರಿ ಭಾಗವಹಿಸುವಿಕೆಯಿಂದ ಇಲಾಖೆಯ ಶೈಕ್ಷಣಿಕ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನ, ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಸಮುದಾಯ ಶೈಕ್ಷಣಿಕವಾಗಿ ಧನಾತ್ಮಕವಾದ ಪ್ರಭುತ್ವವನ್ನು ಸಾಧಿಸಲು ಸಾಧ್ಯವಾಗುತ್ತದೆ. ಶಾಲೆಯಲ್ಲಿ ಸಮುದಾಯದ ಸಕ್ರೀಯ ಭಾಗವಹಿಸುವಿಕೆಯು ಪಾರದರ್ಶಕತೆ, ಉತ್ತರದಾಯಿತ್ವವನ್ನು ಖಾತ್ರಿಗೊಳಿಸುತ್ತದೆ ಮತ್ತು ಯಶಸ್ವಿ ಕಾರ್ಯನಿರ್ವಹಣೆಗೆ ಸಮುದಾಯದ ಸಂಚಿತಜ್ಞಾನವನ್ನು ಪಡೆಯಲು ಸಹಾಯಕವಾಗುತ್ತದೆ. ಶಾಲೆಯಲ್ಲಿ ಸಮುದಾಯ, ಪೋಷಕರು, ಶಿಕ್ಷಕರು ಮತ್ತು ಮಕ್ಕಳ ಭಾಗವಹಿಸುವಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ನಿರಂತರವಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ರಾಜ್ಯ ಕಛೇರಿಗಳು ಮತ್ತು ಜಿಲ್ಲಾ ಹಂತದಲ್ಲಿ ಅನುಭವಿ ಮತ್ತು ಸಕ್ರಿಯ ನಾಗರೀಕ ಸಮಾಜ ಹಾಗೂ ಸಂಘ ಸಂಸ್ಥೆಗಳೊಂದಿಗೆ ಕೈ ಜೋಡಿಸುತ್ತಿದೆ.

## ವಿದ್ಯಾಂಜಲಿ 2.0 ಕಾರ್ಯಕ್ರಮ

ಶಿಕ್ಷಣ ಸಚಿವಾಲಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಭಾರತ ಸರ್ಕಾರ ಶಾಲಾ ಶಿಕ್ಷಣದಲ್ಲಿ ಸಮುದಾಯ ಸ್ವಯಂಸೇವಕರು ಮತ್ತು ಸ್ವಯಂಸೇವಾ ಸಂಸ್ಥೆಗಳ ಕೊಡುಗೆ ಸೇವೆಗಳನ್ನು ಗುರುತಿಸಿ ಶಾಲೆಗಳಿಗೆ ಸದುಪಯೋಗವಾಗುವಂತೆ ಮಾಡಲು ವಿದ್ಯಾಂಜಲಿ 2.0 ಕಾರ್ಯಕ್ರಮದ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿದೆ. ಈ ಕಾರ್ಯಕ್ರಮವು ಶಾಲೆಗಳೊಂದಿಗೆ ಸಮುದಾಯ ಸ್ವಯಂಸೇವಕರು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸ್ವಯಂ ಪ್ರೇರಿತ ಕೊಡುಗೆಗಳನ್ನು ಹಾಗೂ ಸೇವೆಗಳನ್ನು ಒಟ್ಟುಗೂಡಿಸುವ ಒಂದು ವೇದಿಕೆಯಾಗಿದೆ. ಶಿಕ್ಷ ಸಪ್ತಾಹ ಅಂಗವಾಗಿ ಶಾಲಾ ಮುಖ್ಯಸ್ಥರು ವಿದ್ಯಾಂಜಲಿ ಕಾರ್ಯಕ್ರಮವನ್ನು ಪ್ರಚಾರ ಮಾಡುವಂತಹ ಹಲವಾರು ಚಟುವಟಿಕೆಗಳನ್ನು ಶಾಲೆಗಳಲ್ಲಿ ಹಮ್ಮಿಕೊಳ್ಳಲು ಸೂಚಿಸಲಾಗಿತ್ತು.

### ವಿದ್ಯಾಂಜಲಿ ಎಂದರೇನು?

ಶಿಕ್ಷಣ ಸಚಿವಾಲಯ, ಶಾಲಾ ಶಿಕ್ಷಣ ಮತ್ತು ಸಾಕ್ಷರತ ಇಲಾಖೆ, ಭಾರತ ಸರ್ಕಾರವು ಶಾಲಾ ಶಿಕ್ಷಣದಲ್ಲಿ ಸಮುದಾಯ, ಸ್ವಯಂ ಸೇವಕರು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಕೊಡುಗೆ/ ಸೇವೆಗಳನ್ನು ಗುರುತಿಸಿ ಶಾಲೆಗಳಿಗೆ ಸದುಪಯೋಗವಾಗುವಂತೆ ಮಾಡಲು ಇರುವ ವೇದಿಕೆಯೇ ವಿದ್ಯಾಂಜಲಿ 2.0 ಪೋರ್ಟಲ್.

### ಶಾಲಾಭಿವೃದ್ಧಿಗೆ ನೋಂದಾಯಿಸಿಕೊಳ್ಳಬಹುದಾದ ಸ್ವಯಂ ಸೇವಕರು

ಭಾರತದ ಪ್ರಜೆ / ಅನಿವಾಸಿ ಭಾರತೀಯ ಅಥವಾ ಭಾರತೀಯ ಮೂಲದ ವ್ಯಕ್ತಿ, ಸೇವೆಯಲ್ಲಿ ಇರುವ ಮತ್ತು ನಿವೃತ್ತ ಶಿಕ್ಷಕರು ವಿಜ್ಞಾನಿಗಳು, ಸಶಸ್ತ್ರ ಉದ್ಯೋಗಿಗಳು, ಶಿಕ್ಷಣ ಸಂಸ್ಥೆಗಳ ಹಳೆಯ ವಿದ್ಯಾರ್ಥಿಗಳು, ಗೃಹಿಣಿಯರು ಅಥವಾ ಭಾರತದಲ್ಲಿ ನೋಂದಾಯಿಸಲಾದ ಸ್ವಯಂ ಸೇವಾ ಸಂಸ್ಥೆಗಳು / CSR ಗುಂಪು/ NGO ಗಳು https://vidyanjali. education. gov.in ವಿದ್ಯಾಂಜಲಿ 2.0 ಪೋರ್ಟಲ್ ನಲ್ಲಿ ನೋಂದಾಯಿಸಿ ಕೊಳ್ಳಬಹುದು.









ಮಾಹಿತಿಯನ್ನು ಎರಡೂ ಬದಿಯಲ್ಲಿ ಪ್ರಕಟಿಸಿರುವುದು

**ಶಾಲೆಗಳಲ್ಲಿ ವಿದ್ಯಾಂಜಲಿ ಅನುಷ್ಠಾನ**








**ಶಗುನ್ ಪೋರ್ಟಲ್**

ಇದು ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮವಾಗಿದೆ. ದೇಶದ ಎಲ್ಲಾ ರಾಜ್ಯಗಳು ತಮ್ಮಲ್ಲಿ ನಿರ್ವಹಿಸಲಾದ ಶೈಕ್ಷಣಿಕ ಕಾರ್ಯಕ್ರಮಗಳ ದಾಖಲೀಕರಣದ ಒಂದು ಡಿಜಿಟಲ್ ರೆಪಾಸಿಟರಿಯಾಗಿದೆ. ನಮ್ಮ ರಾಜ್ಯದಲ್ಲಿ ಶಾಲಾ ಹಂತದಿಂದ ರಾಜ್ಯ ಹಂತದವರೆಗೆ ಎಲ್ಲಾ ಹಂತಗಳಲ್ಲಿ ನಿರ್ವಹಿಸಲಾದ, ಹಮ್ಮಿಕೊಳ್ಳಲಾದ ವಿವಿಧ ಶೈಕ್ಷಣಿಕ ಚಟುವಟಿಕೆಗಳು, ಕಾರ್ಯಕ್ರಮಗಳು, ವೀಡಿಯೊಗಳು, ಫೋಟೋಗಳು, ಕೇಸ್ ಸ್ಟಡಿಗಳು, ಟೆಸ್ಟಿಮೋನಿಯಲ್‌ಗಳು, ಹ್ಯೂಮನ್ ಸ್ಟೋರೀಸ್‌ಗಳು, ಉತ್ತಮ ಪ್ರಯತ್ನಗಳು, ಉತ್ತಮ ಅಭ್ಯಾಸಗಳು, ಯಶೋಗಾಥೆಗಳು, ವ್ಯಕ್ತಿ ಅಧ್ಯಯನಗಳು, ವಿವಿಧ ಶೈಕ್ಷಣಿಕ ವರದಿಗಳು, ಕ್ರಿಯಾ ಸಂಶೋಧನೆಗಳು, ಸಂಶೋಧನಾ ವರದಿಗಳು, ಇತರೆ ಇಲಾಖೆಗಳ ಸಹಯೋಗದೊಂದಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ನಿರ್ವಹಿಸಲಾದ ಚಟುವಟಿಕೆಗಳು ಇತ್ಯಾದಿ ಎಲ್ಲ ಶೈಕ್ಷಣಿಕ ಚಟುವಟಿಕೆಗಳನ್ನು, ಶಗುನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು, Ministry of Education, Govt. of India, Department of School Education & Literacy ಗೆ ರಾಜ್ಯ ಹಂತದಿಂದ ಕಳುಹಿಸಬೇಕಾಗಿರುತ್ತದೆ. ಈ ರೀತಿಯಾಗಿ 2023–24 ನೇ ಸಾಲಿನಲ್ಲಿ ರಾಜ್ಯ ಹಂತದಿಂದ ಶಗುನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ದಾಖಲೆಗಳ ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ | **E-Content ನ ವಿವರ** | **MoE ಗೆ ಕಳುಹಿಸಿದ E-Content ಗಳ ವಿವರ** |
| --- | --- | --- |
| 01 | ಫೋಟೋಗಳು | 1061 |
| 02 | ವೀಡಿಯೊಗಳು | 43 |
| 03 | ದಾಖಲೆಗಳು | 59 |
| | **ಒಟ್ಟು** | **1163** |

ಒಟ್ಟು 1163 ಫೋಟೋಗಳು, ವೀಡಿಯೊಗಳು ಮತ್ತು ದಾಖಲೆಗಳನ್ನು ಶಗುನ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ.




## ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ) ಸದಸ್ಯರ ತರಬೇತಿ

ಶಾಲಾ ಕಾರ್ಯಚಟುವಟಿಕೆಗಳಲ್ಲಿ ಸಮುದಾಯದ ಭಾಗವಹಿಸುವಿಕೆ ಹಾಗೂ ಶೈಕ್ಷಣಿಕ ಗುಣಮಟ್ಟ ವ್ಯವಸ್ಥೆಯ ಸುಧಾರಣೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವಿಕೆ ಮೂಲಕ ಶಾಲೆಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣವನ್ನು ಕಲ್ಪಿಸುವ ಉದ್ದೇಶದಿಂದ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 'ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ' ಗಳನ್ನು ರಚಿಸಲಾಗಿರುತ್ತದೆ. ಈ ಸಮಿತಿಗಳು ಗ್ರಾಮ ಪಂಚಾಯತ್ ಉಪಸಮಿತಿ ನಾಗರಿಕ ಸೌಲಭ್ಯಗಳ ಸಮಿತಿ 2001ನೇ ಸಾಲಿನಿಂದ ಸ್ಥಾಪಿಸಲಾಗಿರುತ್ತದೆ.

### 2023-24ನೇ ಸಾಲಿನಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ತರಬೇತಿ:

2023-24ನೇ ಸಾಲಿನಲ್ಲಿ ರಾಜ್ಯ ಎಲ್ಲಾ ಸರ್ಕಾರಿ ಕಿರಿಯ ಹಿರಿಯ ಹಾಗೂ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಸದಸ್ಯರಿಗೆ ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನ, ಶಾಲಾ ಅಭಿವೃದ್ಧಿ ಯೋಜನೆ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಮರು ದಾಖಲಿಸುವ ಬಗ್ಗೆ ಅರಿವು ಮೂಡಿಸಲು ಸಭೆಗಳನ್ನು ಅಯೋಜಿಸಲಾಗಿರುತ್ತದೆ.

## 2023–24 ರಲ್ಲಿ ಎಸ್.ಡಿ.ಎಂ.ಸಿ ಚಟುವಟಿಕೆಗಳ ಪ್ರಗತಿ ವಿವರ

| ಕ್ರ.ಸಂ | ಚಟುವಟಿಕೆ | ಭೌತಿಕ ಪ್ರಗತಿ | ಬಿಡುಗಡೆ (ರೂ. ಲಕ್ಷಗಳಲ್ಲಿ) | ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|---|---|
| 01. | ಪ್ರಾಥಮಿಕ ಹಂತ | 42593 | 425.93 | 212.965 |
| 02. | ಪ್ರೌಢ ಹಂತ | 5307 | 53.07 | 0.00 |
| | ಒಟ್ಟು | 47900 | 479.00 | 212.965 |







# ಅಧ್ಯಾಯ–4

# ಗುಣಮಟ್ಟ

# ನಲಿಕಲಿ ಕಾರ್ಯಕ್ರಮ ಬಲವರ್ಧನೆ – 2023–24





ಕರ್ನಾಟಕ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳ ಕನ್ನಡ ಮಾಧ್ಯಮದ 01 ರಿಂದ 03ನೇ ತರಗತಿಗಳಲ್ಲಿ ಹಾಗೂ ಉರ್ದು ಮಾಧ್ಯಮದ 01 ಮತ್ತು 02ನೇ ತರಗತಿಗಳಲ್ಲಿ ನಲಿಕಲಿ ಚಟುವಟಿಕೆ ಆಧಾರಿತ ಬೋಧನಾ ಕಲಿಕಾ ಪದ್ಧತಿಯನ್ನು ಅನುಷ್ಠಾನಗೊಳಿಸಲಾಗಿದ್ದು, ಇತರೆ ಮಾಧ್ಯಮಗಳ 04 ಮತ್ತು 05ನೇ ತರಗತಿಗಳಲ್ಲಿ ಕಲಿನಲಿ ಬೋಧನಾ ಕಲಿಕಾ ಪದ್ಧತಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

**1.1 ನಲಿಕಲಿ ತರಗತಿ ಕೊಠಡಿಗಳ ಚಿತ್ರಣ**













### 1.1 ನಲಿಕಲಿ ಅಭ್ಯಾಸ ಸಹಿತ ಪಠ್ಯಪುಸ್ತಕಗಳ ವಿವರ:

2023–24ನೇ ಶೈಕ್ಷಣಿಕ ಸಾಲಿಗೆ ಪೂರಕವಾಗಿ **ನಿಪುಣ್ ಭಾರತ್ ಮಿಷನ್–ಬುನಾದಿ ಅಕ್ಷರ ಮತ್ತು ಸಂಖ್ಯಾ ಜ್ಞಾನ (ಎಫ್.ಎಲ್.ಎನ್)**ದ ಅಡಿಯಲ್ಲಿ ಕಲಿಕೆಯ ಫಲಗಳನ್ನು ಗುರುತಿಸಲಾಗಿದೆ. ಇದನ್ನು ಆಧರಿಸಿ ಕನ್ನಡ ಮತ್ತು ಉರ್ದು ಮಾಧ್ಯಮದಲ್ಲಿ ಹೊಸ ಮಾದರಿಯ ನಲಿಕಲಿ ಅಭ್ಯಾಸ ಸಹಿತ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಲಾಗಿದೆ. ಕರ್ನಾಟಕ ಸರ್ಕಾರದ **‘ವಿದ್ಯಾ ವಿಕಾಸ’** ಯೋಜನೆಯ ಅಡಿಯಲ್ಲಿ ಕೆ.ಟಿ.ಬಿ.ಎಸ್ ಸಂಸ್ಥೆಯ ಮೂಲಕ ಅವುಗಳನ್ನು ಮುದ್ರಿಸಿ, ಉಚಿತ ವಿತರಣೆಯ ಭಾಗವಾಗಿ ಎಲ್ಲಾ ಶಾಲೆಗಳಿಗೂ ಒದಗಿಸಲಾಗಿರುತ್ತದೆ. ಕನ್ನಡ ಮತ್ತು ಉರ್ದು ಮಾಧ್ಯಮದ ಒಟ್ಟು 11,82,000 ವಿದ್ಯಾರ್ಥಿಗಳು ಸದರಿ ಕಾರ್ಯಕ್ರಮದ ಫಲಾನುಭವಿಗಳಾಗಿರುತ್ತಾರೆ.



**1.2 ವಿದ್ಯಾ ಪ್ರವೇಶ ಕಾರ್ಯಕ್ರಮ ಅನುಷ್ಠಾನ:**

ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳ 01ನೇ ತರಗತಿಯಲ್ಲಿ ಕಲಿಯುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ 40 ದಿನಗಳ **'ವಿದ್ಯಾ ಪ್ರವೇಶ'** (ಶಾಲಾ ಸಿದ್ಧತಾ ಕಾರ್ಯಕ್ರಮ)ವನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದ್ದು, ಅನುಪಾಲನೆಗೊಳಿಸಲಾಗುತ್ತಿದೆ. ಮಕ್ಕಳ ಅಭ್ಯಾಸ ಸಹಿತ ಪಠ್ಯಪುಸ್ತಕಗಳಲ್ಲಿ ಹೆಚ್ಚುವರಿ ಚಟುವಟಿಕೆ ಹಾಳೆಗಳನ್ನು ಸಿದ್ಧಪಡಿಸಿ ಅಳವಡಿಸಿದ್ದು, ವಿದ್ಯಾರ್ಥಿಗಳ ಪೂರ್ವಭಾವಿ ಕಲಿಕೆಗೆ ಪ್ರೋತ್ಸಾಹವನ್ನು ನೀಡಲಾಗುತ್ತಿದೆ.

**ವಿದ್ಯಾ ಪ್ರವೇಶ ಕಾರ್ಯದಲ್ಲಿ ಚಟುವಟಿಕೆ ಕಾರ್ನರ್‌ಗಳಲ್ಲಿ ಅಳವಡಿಸಿದ ಕಲಿಕೋಪಕರಣಗಳ ಚಿತ್ರಣ**







**1.3 ನಲಿಕಲಿ ಕಲಿಕಾ ಸಾಮಗ್ರಿಗಳ ಸಮಗ್ರ ಪರಿಷ್ಕರಣೆ:**

**ಸರ್ಕಾರದ ಆದೇಶ ಸಂಖ್ಯೆ: ಇಪಿ 396 ಯೋಸಕ 2022, ಬೆಂಗಳೂರು, ದಿನಾಂಕ: 28.03.2023** ರಂತೆ ಕರ್ನಾಟಕ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳ ಕನ್ನಡ ಮತ್ತು ಉರ್ದು ಮಾಧ್ಯಮದ ಒಟ್ಟು 57,584 ಘಟಕಗಳಿಗೆ ಒಟ್ಟು 1,68,633 ಸೆಟ್‌ಗಳಷ್ಟು ನಲಿಕಲಿ ಕಲಿಕೋಪಕರಣಗಳನ್ನು **ರೂ.39.79** ಕೋಟಿಗಳ ವೆಚ್ಚದಲ್ಲಿ ಮುದ್ರಿಸಿ ಸರಬರಾಜು ಕೈಗೊಳ್ಳಲು ಸರ್ಕಾರದ ವತಿಯಿಂದ ಆದೇಶವಾಗಿದ್ದು, ಕಲಿಕಾ ಸಾಮಗ್ರಿಗಳನ್ನು ಪರಿಷ್ಕರಣೆ ಒಳಪಡಿಸಲಾಗಿದೆ. ಎಸ್.ಎಸ್.ಕೆ ಮತ್ತು ಕೆ.ಟಿ.ಬಿ.ಎಸ್ ಸಂಸ್ಥೆಯ ನೇತೃತ್ವದಲ್ಲಿ ಸದರಿ ಸಾಮಗ್ರಿಗಳ ಮುದ್ರಣ ಮತ್ತು ಸರಬರಾಜು ಕಾರ್ಯಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ.

### ನಲಿಕಲಿ ಕಲಿಕಾ ಸಾಮಗ್ರಿಗಳ ಸಮಗ್ರ ಪರಿಷ್ಕರಣೆ ಕಾರ್ಯಾಗಾರದ ಚಿತ್ರಣಗಳು






## ಆಂಗ್ಲ ಕೋಶ

ಕರ್ನಾಟಕ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಭಾಷಾ ಕಲಿಕೆಯ ಕೌಶಲಗಳನ್ನು ವೃದ್ಧಿಪಡಿಸುವ ಕಾರಣಕ್ಕಾಗಿ ಸಮಗ್ರ ಶಿಕ್ಷಣ ಕರ್ನಾಟಕದಲ್ಲಿ ಆಂಗ್ಲ ಕೋಶವನ್ನು ಸ್ಥಾಪಿಸಲಾಗಿದೆ. ಆಂಗ್ಲ ಭಾಷಾ ಕಲಿಕೆಗೆ ಪೂರಕವಾಗಿ ಕಲಿಕಾ ವಾತಾವರಣವನ್ನು ಸೃಷ್ಟಿಸುವುದು ಹಾಗೂ ಕಲಿಕಾರ್ಥಿಗಳನ್ನು ಅರ್ಥಪೂರ್ಣವಾಗಿ ಈ ವಾತಾವರಣಕ್ಕೆ ಒಗ್ಗಿಸುವುದು ಉತ್ತಮವಾದ ಮಾರ್ಗವಾಗಿದೆ.

2019–20ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರವು ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಂದು ದ್ವಿ–ಭಾಷಾ ಮಾಧ್ಯಮ ವಿಭಾಗವನ್ನು ಪ್ರಾರಂಭಿಸಲಾಗಿದೆ. ಈ ಆಂಗ್ಲ ಮಾಧ್ಯಮ ವಿಭಾಗದಲ್ಲಿ ಬೋಧಿಸುತ್ತಿರುವ ಶಿಕ್ಷಕರಿಗೆ ಅವರ ಭಾಷಾ ಕೌಶಲಗಳನ್ನು ವೃದ್ಧಿಪಡಿಸುವುದು ಹಾಗೂ ಬೋಧನಾ ವಿಧಾನದಲ್ಲಿ ಬಲವರ್ಧಿಸುವ ಅವಶ್ಯವಿತ್ತು. 2019–20ನೇ ಸಾಲಿನಿಂದ ಕ್ರಮೇಣವಾಗಿ 2024–25ನೇ ಸಾಲಿನವರೆಗೆ ಒಟ್ಟು 4196 ಸರ್ಕಾರಿ ಕನ್ನಡ/ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಒಂದು ದ್ವಿ–ಭಾಷಾ ಮಾಧ್ಯಮ ವಿಭಾಗವನ್ನು ಪ್ರಾರಂಬಿಸಿದ್ದು ಕಾರ್ಯ ನಿರ್ವಹಿಸುತ್ತಿವೆ.

ಕರ್ನಾಟಕದಲ್ಲಿ ದ್ವಿಭಾಷಾ ಮಾಧ್ಯಮ ವಿಭಾಗದ ಶಾಲೆಗಳಲ್ಲಿ ದ್ವಿಭಾಷಾ ಶಿಕ್ಷಣವನ್ನು ನೀಡಲು ಹಾಗೂ ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಮತ್ತು ಮೌಲ್ಯಗಳನ್ನು ಮನದಟ್ಟು ಮಾಡಿಕೊಂಡು ಶಿಕ್ಷಣದಲ್ಲಿ ಅಳವಡಿಸಲು ಒಂದು ಹೆಜ್ಜೆಯನ್ನು ಮುಂದಿಡಲಾಗಿದೆ. ದ್ವಿಭಾಷಾ ಶಿಕ್ಷಣದ ಮೂಲ ಉದ್ದೇಶ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಯುಗದಲ್ಲಿ, ಯಾವುದೇ ಕೌಟುಂಬಿಕ ಹಿನ್ನಲೆ ಇದ್ದರೂ, ಭಾಗಿಗಳಾಗುವಂತೆ ಮಾಡುವುದು. ಮಾತನಾಡುವ ಮತ್ತು ಬರೆಯುವ ಕೌಶಲಗಳನ್ನು ಬೆಳೆಸುವುದು ಯಾವುದೇ ಭಾಷೆಯ ಪಾಂಡಿತ್ಯವನ್ನು ಗುರುತಿಸುತ್ತದೆ. ಇದು ಆಂಗ್ಲ ಭಾಷೆಗೆ ಬೇರೆಯಾಗುವುದಿಲ್ಲ. ಈ ನಿಟ್ಟಿನಲ್ಲಿ ಶಿಕ್ಷಕರು ಯಶಸ್ವಿಯಾಗಿ ತರಗತಿಗಳಲ್ಲಿ ಆಂಗ್ಲ ಭಾಷೆಯಲ್ಲಿಯೇ ಸಂವಹನ ನಡೆಸಲು ಅನುಕೂಲವಾಗುವಂತೆ ಸಂಪನ್ಮೂಲಗಳನ್ನು ಆರ್.ಐ.ಇ.ಎಸ್.ಐ. ಮತ್ತು ಅಜೀಂ ಪ್ರೇಮ್ ಜೀ ಸಂಸ್ಥೆಯವರಿಂದ ಸಿದ್ಧಪಡಿಸಲಾಯಿತು. ಕ್ಯಾಸ್ಕೇಡಿಂಗ್ ಮಾದರಿಯಲ್ಲಿ ಸಂಬಂಧಿಸಿದ ಎಲ್ಲಾ ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗಿದೆ. 2019-20ನೇ ಸಾಲಿನಲ್ಲಿ ಪ್ರಾರಂಭವಾದ ದ್ವಿ-ಭಾಷಾ ಮಾಧ್ಯಮ ಶಾಲೆಗಳ ವಿದ್ಯಾರ್ಥಿಗಳು ಸದರಿ 2024-25ನೇ ಸಾಲಿನಲ್ಲಿ 6ನೇ ತರಗತಿಯಲ್ಲಿ ದಾಖಲಾಗಿರುತ್ತಾರೆ. 6ನೇ ತರಗತಿಯನ್ನು ಕೋರ್ ವಿಷಯಗಳನ್ನು ದ್ವಿ-ಭಾಷೆಯಲ್ಲಿ ಬೋಧಿಸಲಾಗುವುದರಿಂದ ಅಂಗ್ಲ ಮಾಧ್ಯಮ ಎಂದು ಕರೆಯಲಾಗುವುದು. 6ನೇ ತರಗತಿ ಬೋಧಿಸುತ್ತಿರುವ ಶಿಕ್ಷಕರಿಗೆ 6ನೇ ತರಗತಿಯನ್ನು ನಿರ್ವಹಿಸುವ ವಿಶೇಷ ತರಬೇತಿಯನ್ನು ನೀಡಲಾಗಿದೆ.

ಎನ್.ಸಿ.ಇ.ಆರ್.ಟಿ ನವದೆಹಲಿರವರ ಪಠ್ಯಕ್ರಮದನ್ವಯ 1 ಮತ್ತು 2ನೇ ತರಗತಿಗಳಿಗೆ ಆಂಗ್ಲ ಭಾಷೆಯ ಪಠ್ಯ 'ಮೃದಂಗ್' ಹಾಗೂ ಗಣಿತ ವಿಷಯಕ್ಕೆ 'Joyful Mathematics' ಪಠ್ಯವನ್ನು ಅನುಸರಿಸುವಂತೆ ರಾಜ್ಯದ ದ್ವಿಭಾಷಾ ಮಾಧ್ಯಮ 1 ಮತ್ತು 2ನೇ ವಿಭಾಗಗಳಲ್ಲಿ ಇದೇ ಪಠ್ಯವನ್ನು 2024-25ನೇ ಸಾಲಿನಿಂದ ಅನುಸರಿಸಲಾಗುತ್ತಿದೆ.

ದ್ವಿಭಾಷಾ ಮಾಧ್ಯಮ ವಿಭಾಗಗಳಲ್ಲಿ ವಿದ್ಯಾರ್ಥಿಗಳು ಆ ತರಗತಿಯ ಕಲಿಕಾ ಫಲಗಳನ್ನು ಗಳಿಸಲು ಉತ್ತೇಜಿಸುವಂತೆ ಮತ್ತು ಭಾಷಾ ಕೌಶಲಗಳನ್ನು ವೃದ್ಧಿಪಡಿಸಲು ಕಲಿಕಾ ಸಾಮಾಗ್ರಿಗಳನ್ನು ಸಿದ್ಧಪಡಿಸಿ ಶಾಲೆಗಳಿಗೆ ನೀಡಲಾಗಿದೆ. ಇದರೊಂದಿಗೆ ಒಂದನೇ ಮತ್ತು ಎರಡನೇ ತರಗತಿ ವಿದ್ಯಾರ್ಥಿಗಳಿಗೆ ಸಣ್ಣ ಕಥೆಗಳ ಪುಸ್ತಕಗಳು, ಸಣ್ಣ ಚಿತ್ರಪಟಗಳು ಮತ್ತು ಓದುವ ಸಾಮಗ್ರಿಗಳನ್ನು ನೀಡಲಾಗಿದೆ.

1ನೇ ತರಗತಿಯಿಂದ 8ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ Spoken English Course ಅನ್ನು ಆರ್.ಐ.ಇ.ಎಸ್.ಐ. ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಯಿತು. ಸದರಿ ಕೋರ್ಸ್‌ನಲ್ಲಿ 3 ಹಂತಗಳಿಗೆ 1ನೇ ತರಗತಿಯಿಂದ 3ನೇ ತರಗತಿಯವರೆಗೆ ಮೊದಲನೇ ಹಂತ, 4ನೇ ತರಗತಿಯಿಂದ 6ನೇ ತರಗತಿಯವರೆಗೆ ಎರಡನೇ ಹಂತ ಹಾಗೂ 7ನೇ ಮತ್ತು 8ನೇ ತರಗತಿಗಳು ಮೂರನೇ ಹಂತ ಎಂದು ವಿಂಗಡಿಸಿಕೊಳ್ಳಲಾಗಿತ್ತು. ಒಟ್ಟು 132 ಎಂ.ಆರ್.ಪಿಗಳಿಗೆ ಆರ್.ಐ.ಇ ಬೆಂಗಳೂರಿನಲ್ಲಿ ಈ ತರಬೇತಿಯನ್ನು ನೀಡಲಾಗಿದೆ.

'ದ ಟೀಚರ್ ಫೌಂಡೇಶನ್' ಸಂಸ್ಥೆಯ ವತಿಯಿಂದ ಸೆಪ್ಟಂಬರ್ 2023 ರಿಂದ ಫೆಬ್ರವರಿ 2024 ರವರೆಗೆ ಆನ್ ಲೈನ್ ಮೂಲಕ 850 ಶಿಕ್ಷಕರಿಗೆ 20 ಅವಧಿಗಳಲ್ಲಿ "English Encounters" ಎಂಬ ಶೀರ್ಷಿಕೆಯಲ್ಲಿ ತರಬೇತಿಯನ್ನು ನಡೆಸಲಾಯಿತು. ಅಂತಿಮವಾಗಿ 850 ಶಿಕ್ಷಕರು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ.

# ಎನ್.ಇ.ಪಿ–ಕೋಶ

- ನಿಪುಣ್ ಭಾರತ್ ಮಿಷನ್ ಸ್ಥಾಪಿಸಲಾಗಿದೆ. ಎಲ್ಲಾ ಜಿಲ್ಲೆಗಳ ಮತ್ತು ರಾಜ್ಯ ಹಂತದ ಯೋಜನಾ ನಿರ್ವಹಣಾ ಘಟಕಗಳನ್ನು ಮತ್ತು ಚಾಲನಾ ಸಮಿತಿಗಳನ್ನು ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತು ರಾಜ್ಯ ಹಂತದಲ್ಲಿ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ನಿಯತಕಾಲಿಕ ಪರಿಣಾಮಕಾರಿ ಮೇಲ್ವಿಚಾರಣೆ ಆಗುವಂತೆ ಖಚಿತಪಡಿಸಿಕೊಳ್ಳಲಾಗುತ್ತಿದೆ. ನಿಪುಣ್ ಭಾರತ್ ಮಿಷನ್‌ನ ಉದ್ದೇಶಗಳನ್ನು ಎಫ್.ಎಲ್.ಎನ್ ಶಿಕ್ಷಕರು ಪರಿಣಾಮಕಾರಿ ಅನುಷ್ಠಾನಗೊಳಿಸಲು, ಇವರ ಮೇಲ್ವಿಚಾರಣೆಗಾಗಿ ಸಿ.ಆರ್.ಪಿಗಳನ್ನು ಗುರ್ತಿಸಲಾಗಿದೆ.
- ನಿಪುಣ್ ಭಾರತ್ ಶಿಫಾರಸ್ಸಿನಂತೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಗುರಿಗಳನ್ನು ಸಾಧಿಸಲು ಸಾಮರ್ಥ್ಯಗಳು/ಕಲಿಕಾ ಫಲಗಳನ್ನು ಕರ್ನಾಟಕ ರಾಜ್ಯ ಪಠ್ಯಕ್ರಮ ಚೌಕಟ್ಟು ಮತ್ತು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟುಗಳಿಗೆ ಮ್ಯಾಪ್ ಮಾಡಲಾಗಿದೆ. ಅದರಂತೆಯೇ ಕಲಿಕಾ ಫಲಗಳನ್ನು ಅಭಿವೃದ್ಧಿಗೊಳಿಸಲಾಗುವುದು.
- 2023–24ನೇ ಸಾಲಿನಲ್ಲಿ 1ನೇ ತರಗತಿಗೂ ಸಹ ವಿದ್ಯಾಪ್ರವೇಶವನ್ನು ಜಾರಿಗೊಳಿಸಲಾಗಿದೆ.
- ಶಿಕ್ಷಕರ ಬಲವರ್ಧನೆಗೆ ಕೈಗೊಂಡ ಕಾರ್ಯಕ್ರಮಗಳು
  - ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರಿಗೆ ನಿಷ್ಠಾ ಆನ್‌ಲೈನ್ ತರಬೇತಿಯನ್ನು ಎನ್.ಸಿ.ಇ.ಆರ್.ಟಿ ವತಿಯಿಂದ ನೀಡಲಾಗಿದೆ.
  - ಆನ್‌ಲೈನ್ ತರಗತಿಗಳನ್ನು ನಡೆಸುವ ವಿಧದ ಬಗ್ಗೆ ಶಿಕ್ಷಕರಿಗೆ ತರಬೇತಿ – ಸಿಂಕ್ರೊನಸ್ ಮತ್ತು ಅಸಿಂಕ್ರೊನಸ್ ವಿಧಾನಗಳು
  - ಕಲಿಕಾ ಚೇತರಿಕೆ ಕಾರ್ಯಕ್ರಮವು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಶಿಕ್ಷಕರಿಗೆ ತರಬೇತಿ ಮತ್ತು ಶಿಕ್ಷಕರ ಕೈಪಿಡಿಗಳನ್ನು ಒದಗಿಸಲಾಗಿದೆ
  - ಅನುಭವ ಮತ್ತು ಸಾಮರ್ಥ್ಯಾಧಾರಿತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಣ್ಣ ಸಾಕ್ಷ್ಯ ಚಿತ್ರಗಳನ್ನು ತಯಾರಿಸಿ, ನೀಡಲಾಗಿದೆ.

- ವಿದ್ಯಾರ್ಥಿಗಳ ಸಾಮಾಜಿಕ, ಭಾವನಾತ್ಮಕ, ಮನೋವೈಜ್ಞಾನಿಕ ಅವಶ್ಯಕತೆಗಳನ್ನು ಪೂರೈಸುವ, ಶಿಕ್ಷಣ ಮಂತ್ರಾಲಯ, ನವದೆಹಲಿರವರ ಸಲಹೆಯಂತೆ "ಮನೋದರ್ಪಣ್" ಕಾರ್ಯಕ್ರಮವನ್ನು ನುರಿತ ಸಲಹೆಗಾರರಿಂದ ಬಲವರ್ಧನೆಗೊಳಿಸಲಾಗಿದೆ.

- 2023–24ನೇ ಸಾಲಿನಲ್ಲಿ 1 ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಕಲಿಕಾ ಬಲವರ್ಧನೆ ಕಾರ್ಯಕ್ರಮವನ್ನು ಜಾರಿಗೊಳಿಸಲಾಯಿತು. ಕಲಿಕೆಯಲ್ಲಿ ಅಂತರವನ್ನು ಸರಿದೂಗಿಸಲು ಹಾಗೂ ಕಲಿಕೆಯ ನ್ಯೂನತೆಗಳನ್ನು ಸರಿಪಡಿಸಲು ವಿದ್ಯಾರ್ಥಿಗಳ ಚಟುವಟಿಕೆ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು. ಈ ಪುಸ್ತಕವು ತರಗತಿಗನುಗುಣವಾದ ಕಲಿಕಾ ಫಲಗಳನ್ನು ಆಧರಿಸಿ ಸಿದ್ಧಪಡಿಸಲಾಗಿದೆ. ಇದರೊಂದಿಗೆ ಶಿಕ್ಷಕರ ಕೈಪಿಡಿಯನ್ನು ನೀಡಲಾಗಿದೆ. ಇದು ಶಿಕ್ಷಕರಿಗೆ ಜ್ಞಾನದ ದೀವಿಗೆ ಇದ್ದ ಹಾಗೆ ಸಂದರ್ಭಕ್ಕೆ ಅನುಗುಣವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ.

- 1 ರಿಂದ 5ನೇ ತರಗತಿಯಲ್ಲಿ ಬೋಧಿಸುತ್ತಿರುವ ಶಿಕ್ಷಕರಿಗೆ ಸ್ವತ: ಸೃಜನಾತ್ಮಕ ಕೃತಿಗಳನ್ನು ರಚಿಸಲು, ಸ್ವತ: ಕಥೆಗಳನ್ನು ಬರೆಯಲು ಮತ್ತು ಕಥೆಗಳಿಗೆ ಸಂಬಂಧಿಸಿದ ಆಟಿಕೆಗಳನ್ನು ಸಿದ್ಧಪಡಿಸುವ ಕುಶಲಕರ್ಮಿಗಳಿಗೆ ಒಂದು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಥೆಗಳನ್ನು ಹೇಳುವಾಗ ಆಟಿಕೆಗಳನ್ನು ಬಳಸುವ ಮುನ್ನ – ಬಳಸುವ ಅವಧಿಯಲ್ಲಿ – ನಂತರದ ಚಟುವಟಿಕೆಗಳಿಗೆ ಕಥೆ ಹೇಳುವ ಮತ್ತು ನಡೆಸುವ ಕಲೆ ಕುರಿತು ಶಿಕ್ಷಕರಿಗೆ ತರಬೇತಿ ಸಾಹಿತ್ಯವನ್ನು ಸಿದ್ಧಪಡಿಸಲಾಗಿದೆ. ಶಿಕ್ಷಕರು ಪರಿಣಾಮಕಾರಿಯಾಗಿ ಹಾಗೂ ಯಶಸ್ವಿಯಾಗಿ ಈ ಕಥೆ ಹೇಳುವ ವಿಧಾನವನ್ನು ಶಾಲಾ ಕೊಠಡಿಗಳಲ್ಲಿ ನಿರ್ವಹಿಸಲು 2 ದಿನದ ತರಬೇತಿಯನ್ನು ಶಿಕ್ಷಕರಿಗೆ ಆಯೋಜಿಸಲಾಯಿತು.

- ಕಥೆಗಳನ್ನು ಹೇಳುವ ಮೂಲಕ ವಿದ್ಯಾರ್ಥಿಗಳು ಆ ಕಥೆಗಳಲ್ಲಿ ಬರುವ ಪಾತ್ರಗಳಿಗೆ ಮತ್ತು ಆ ಪಾತ್ರಗಳಿಗೆ ಸಂಬಂಧಿಸಿದ ಘಟನೆಗಳನ್ನು ಗ್ರಹಿಸಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗದೆ, ಭಾಷೆಯ ಶಬ್ದಕೋಶ, ವಾಕ್ಯ ರಚನೆ, ವ್ಯಾಕರಣ ಮತ್ತು ಭಾಷಾ ವೈಶಿಷ್ಟ್ಯವನ್ನು ವಿದ್ಯಾರ್ಥಿಗಳು ಕಥಾ ಹಾಳೆಗಳಿಂದ (Story cards)ಕಲಿಯುತ್ತಾರೆ. ಪಾತ್ರಗಳ ಗ್ರಹಿಕೆಯನ್ನು ಹೆಚ್ಚಿಸಲು ಮತ್ತು ಕಥೆಯಲ್ಲಿ ಬರುವ ಘಟನೆಗಳ ಅನುಕ್ರಮವನ್ನು ಹೆಚ್ಚಿಸಲು ನಿರೂಪಣೆಯೊಂದಿಗೆ ಆಟಿಕೆಗಳನ್ನು ವಿನ್ಯಾಸಗೊಳಿಸಲಾಗಿದೆ. ತರಗತಿಯ ಚಟುವಟಿಕೆಗಳಲ್ಲಿ ಬಳಸುವ ಆಟಿಕೆಗಳನ್ನು ಅತೀ ಕಡಿಮೆ ವೆಚ್ಚದಲ್ಲಿ, ಲಭ್ಯವಿರುವ ಸಂಪನ್ಮೂಲಗಳೊಂದಿಗೆ ತಯಾರಿಸಲು ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.

- ಆಟಿಕೆಗಳು ಮತ್ತು ಕಥೆಯ ನಿರೂಪಣೆಯು ಭಾಷಾ ಕಲಿಕೆಗೆ ಸೀಮಿತವಾಗಿರದೆ, ಗಣಿತ ಮತ್ತು ಪರಿಸರ ಅಧ್ಯಯನದ ವಿಷಯಗಳನ್ನು ಬೋಧಿಸುವಾಗ ಬಳಸಬಹುದಾಗಿದೆ. ವಿದ್ಯಾರ್ಥಿಗಳು ಪುಸ್ತಕಗಳನ್ನು ಓದುವ ಮತ್ತು ಕಥೆಗಳನ್ನು ಆಟಿಕೆಗಳೊಂದಿಗೆ ಆಲಿಸುವ ಕೌಶಲ್ಯಗಳನ್ನು ವೃದ್ಧಿಪಡಿಸಲು ಶಾಲೆಗಳಿಗೆ ಕಥಾ ಪುಸ್ತಕಗಳು ಮತ್ತು ಆಟಿಕೆಗಳ ಕಿಟ್‌ಅನ್ನು ನೀಡಲಾಗಿದೆ.

- 2023–24ನೇ ಸಾಲಿನಲ್ಲಿ ಮರುಸಿಂಚನ ಕಾರ್ಯಕ್ರಮವನ್ನು ರಾಜ್ಯದ 17 ಜಿಲ್ಲೆಗಳ 93 ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿ ಆಯ್ದ ಶಾಲೆಗಳಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದೆ. 982 ಶಾಲೆಗಳಲ್ಲಿ ಸುಮಾರು 1 ಲಕ್ಷ ವಿದ್ಯಾರ್ಥಿಗಳಿಗೆ ತರಗತಿಗನುಗುಣವಾದ ಕಲಿಕಾ ಫಲಗಳನ್ನು ವೃದ್ಧಿಸಲು ಹಾಗೂ 10ನೇ ತರಗತಿಯ ಪರೀಕ್ಷಾ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸಾಫಲ್ಯ ಪರೀಕ್ಷೆಯ ವಿಶ್ಲೇಷಣೆಯು ವಿದ್ಯಾರ್ಥಿಗಳ ಕಲಿಕಾ ಮಟ್ಟದಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ.

**ಸೇವಾ ನಿರತ ಶಿಕ್ಷಕರ ತರಬೇತಿ**

2023–24ನೇ ಸಾಲಿನಲ್ಲಿ ಪ್ರೌಢಶಾಲಾ ಶಿಕ್ಷಕರಿಗೆ ಕಲಿಕಾ ಫಲಗಳು ಮತ್ತು ತರಗತಿ ಪ್ರಕ್ರಿಯೆಗಳ ಕುರಿತು ಐದು ದಿನಗಳ ವಿಷಯವಾರು (ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಗಣಿತ, ವಿಜ್ಞಾನ ಮತ್ತು ಸಮಾಜವಿಜ್ಞಾನ) ತರಬೇತಿಯನ್ನು ರಾಜ್ಯದ 34 ಡಯಟ್‌ಗಳಲ್ಲಿ ಆಯೋಜಿಸಲಾಗಿತ್ತು.

ಶಿಕ್ಷಕರ ಅಂತರ್ಯದ ಕಾರ್ಯಕ್ಷಮತೆ ಹೆಚ್ಚಿಸುವ ಹಲವು ಕಾರ್ಯಕ್ರಮ, ಉಪಕ್ರಮ, ತರಬೇತಿ ಮತ್ತು ಕಾರ್ಯಾಗಾರಗಳು ಈ ಹಿಂದೆ ಆಯೋಜಿಸಲ್ಪಟ್ಟಿದ್ದು ಸಾಕಷ್ಟು ಪ್ರಗತಿಯಾಗಿದ್ದರೂ FLN, NAS, ಮೌಲ್ಯಾಂಕನದ ಅಡಿ ಸಂಗ್ರಹಿಸಿದ ದತ್ತಾಂಶಗಳು, ಗುಣಾತ್ಮಕವಾಗಿ ವಿಶ್ಲೇಷಿಸಿ ಸುಧಾರಣೆ ಕೈಗೊಳ್ಳುವ ಅಗತ್ಯತೆ ಇದೆ.

9 ರಿಂದ 10ನೇ ತರಗತಿಯ ಪ್ರೌಢಶಾಲಾ ಶಿಕ್ಷಕರಿಗೆ FLN, NAS ಕಲಿಕಾ ಫಲ ಆಧಾರಿತ ಚಟುವಟಿಕೆ ಪುಸ್ತಕ ಮತ್ತು ಚಟುವಟಿಕೆ ಬ್ಯಾಂಕ್ ಕುರಿತು ತರಬೇತಿಯನ್ನು ನೀಡಲಾಗಿದೆ. ಒಟ್ಟು 10000 ಶಿಕ್ಷಕರಿಗೆ ತರಬೇತಿ ನೀಡುವ ಗುರಿ ಹೊಂದಲಾಗಿತ್ತು, ಇದರಲ್ಲಿ 10051 ಶಿಕ್ಷಕರು ತರಬೇತಿ ಪಡೆದಿರುತ್ತಾರೆ. ಈ ತರಬೇತಿಗೆ ಒಟ್ಟು ರೂ. 241.15 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

## ತರಬೇತಿಗೆ ಸಂಬಂಧಿಸಿದ ಛಾಯಚಿತ್ರಗಳು




**ವಿಜ್ಞಾನ ಶಿಕ್ಷಕರ ತರಬೇತಿ – ಡಯಟ್ ದಾವಣಗೆರೆ**




**ಕನ್ನಡ ಮತ್ತು ಹಿಂದಿ ಶಿಕ್ಷಕರಿಗೆ ಪುನಃಶ್ಚೇತನ ತರಬೇತಿ –ಡಯಟ್ ದಕ್ಷಿಣಕನ್ನಡ**



**ಗಣಿತ ಶಿಕ್ಷಕರ ಪುನಃಶ್ಚೇತನ ತರಬೇತಿ – ಡಯಟ್ ಉಡುಪಿ**




**ವಿಜ್ಞಾನ ಶಿಕ್ಷಕರ ಪುನಃಶ್ಚೇತನ ತರಬೇತಿ – ಡಯಟ್ ಶಿರಸಿ**

# ಗ್ರಂಥಾಲಯ ವಿಭಾಗ

**1. ಮಕ್ಕಳಲ್ಲಿ ಓದುವ ಕೌಶಲ್ಯವನ್ನು ವೃದ್ಧಿಸುವ ಸಲುವಾಗಿ ಗ್ರಂಥಾಲಯ ಅನುದಾನವನ್ನು ಸದರಿ ವರ್ಷದಲ್ಲಿ ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ.**

➢ ಸದರಿ ಸಾಲಿನಲ್ಲಿ 2022-23 ನೇ ಸಾಲಿನ PAB ಅನುಮೋದಿತ ಚಟುವಟಿಕೆಯಡಿಯಲ್ಲಿ 2022-23ನೇ ಸಾಲಿನ ಬದ್ಧವೆಚ್ಚವೆಂದು ಪರಿಗಣಿಸಿ, ರಾಜ್ಯದ 2483 ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ತಲಾ ರೂ.5000/-ದಂತೆ ಒಟ್ಟು ರೂ.124.15 ಲಕ್ಷ ಗ್ರಂಥಾಲಯ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

➢ ಇದೇ ಸಾಲಿನಲ್ಲಿ, 2023-24ನೇ ಸಾಲಿನ **ರಾಜ್ಯ ಬಜೆಟ್ ಯೋಜನೆಗಳಡಿಯಲ್ಲಿ ಗ್ರಂಥಾಲಯ ಮತ್ತು ಓದುವ ಮೂಲೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮವನ್ನು** ಅನುಷ್ಠಾನಗೊಳಿಸಲು ರಾಜ್ಯದ 17 ಜಿಲ್ಲೆಗಳ 93 ಮಹತ್ವಕಾಂಕ್ಷಿ ತಾಲ್ಲೂಕುಗಳ ಒಟ್ಟು 24347 ಶಾಲೆಗಳಿಗೆ ವಿದ್ಯಾರ್ಥಿಗಳಿಗೆ ಮೊದಲ ಕಂತಿನ ಅನುದಾನ ಒಟ್ಟು **ರೂ.1000.00 ಲಕ್ಷವನ್ನು** ಈ ಕೆಳಂಡಂತೆ ಬಿಡುಗಡೆ ಮಾಡಲಾಗಿದೆ.

2023-24ನೇ ಸಾಲಿನ ಗ್ರಂಥಾಲಯ ಬಲವರ್ಧನೆ ಮತ್ತು ಓದುವ ಮೂಲೆಗಳ ಸ್ಥಾಪನೆಗಾಗಿ ಅನುದಾನ ಬಿಡುಗಡೆ ಮಾಡಿರುವ ಶಾಲೆಗಳವಿವರ.

| ಕ್ರ. ಸಂ | ಶಾಲೆಯ ವಿಧ | ಶಾಲೆಗಳ ಸಂಖ್ಯೆ | ಅನುಮೋದಿತ ಘಟಕ ವೆಚ್ಚ (ಲಕ್ಷಗಳಲ್ಲಿ) | ಬಿಡುಗಡೆಯಾದ ಘಟಕ ವೆಚ್ಚ (ಲಕ್ಷಗಳಲ್ಲಿ) | ಒಟ್ಟು ವೆಚ್ಚ (ಲಕ್ಷಗಳಲ್ಲಿ) |
|---|---|---|---|---|---|
| 1. | ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ | 14049 | 0.05 | 0.025 | 351.225 |
| 2. | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ | 8344 | 0.12 | 0.06 | 500.64 |
| 3. | ಸರ್ಕಾರಿ ಪ್ರೌಢ ಶಾಲೆ | 1830 | 0.15 | 0.075 | 137.25 |
| 4. | ಆದರ್ಶ ವಿದ್ಯಾಲಯ | 48 | 0.17 | 0.085 | 4.08 |
| 5. | ಕರ್ನಾಟಕ ಪಬ್ಲಿಕ್ ಶಾಲೆ | 76 | 0.18 | 0.08954 | 6.80500 |
| | ಒಟ್ಟು | 24347 | | | 1000.00 |

## 2. ರಾಜ್ಯದ ಶಾಲಾ ಗ್ರಂಥಾಲಯಗಳಿಗೆ ಸೂಕ್ತ ಪುಸ್ತಕಗಳನ್ನು ಖರೀದಿಸಲು ಆಯ್ಕೆ ಪ್ರಕ್ರಿಯೆ.

- ಕೇಂದ್ರ ಶಿಕ್ಷಣ ಸಚಿವಾಲಯ, ನವದೆಹಲಿ ಇವರಿಂದ ಹೊರಡಿಸಲಾದ ಗ್ರಂಥಾಲಯ ಮಾರ್ಗಸೂಚಿಗಳನ್ವಯ ರಾಜ್ಯದ ಶಾಲಾ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಆಯ್ಕೆ ಮಾಡುವ ಸಲುವಾಗಿ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯ ವತಿಯಿಂದ ಸಾರ್ವಜನಿಕ ಪ್ರಕಟಣೆ ಹೊರಡಿಸಿ ಆಸಕ್ತ ಪ್ರಕಾಶಕರುಗಳಿಂದ ಪುಸ್ತಕಗಳನ್ನು ಆಹ್ವಾನಿಸಲಾಗಿದ್ದು, ಈ ಸಂಬಂಧ ಒಟ್ಟು 7220 (ಕನ್ನಡ, ಇಂಗ್ಲೀಷ್, ಹಿಂದಿ ಮತ್ತು ದ್ವಿಭಾಷಾ:ಕನ್ನಡ-ಇಂಗ್ಲೀಷ್) ಪುಸ್ತಕಗಳನ್ನು ಸಂಗ್ರಹಿಸಲಾಯಿತು.
- ಸದರಿ ಪುಸ್ತಕಗಳಿಂದ ರಾಜ್ಯದ ಶಾಲಾ ಗ್ರಂಥಾಲಯಗಳಿಗೆ ವಿದ್ಯಾರ್ಥಿಗಳ ವಯೋಮಾನಕ್ಕನುಗುಣವಾಗಿ ಸೂಕ್ತ ಪುಸ್ತಕಗಳನ್ನು ಆಯ್ಕೆ ಮಾಡುವ ಸಲುವಾಗಿ, DSERTಯ ಗ್ರಂಥಾಲಯ ವಿಭಾಗದ ಸಹಯೋಗದಲ್ಲಿ ಸಂಬಂಧಿತ ಸಂಪನ್ಮೂಲ ವ್ಯಕ್ತಿಗಳ ಮೂಲಕ 04 ಹಂತಗಳಲ್ಲಿ ಕಾರ್ಯಾಗಾರಗಳನ್ನು ನಡೆಸಲಾಯಿತು. ಆಯ್ಕೆ ಮಾಡಿದ ಪುಸ್ತಕಗಳ ಪಟ್ಟಿಯನ್ನು ಸಮಗ್ರ ಶಿಕ್ಷಣ ಕರ್ನಾಟಕದ ಹಂತದಲ್ಲಿ ಮತ್ತೊಮ್ಮೆ ಪರಿಶೀಲಿಸಿ ಅಂತಿಮಗೊಳಿಸಲಾಗಿದ್ದು, ಒಟ್ಟು 4989 (ಕನ್ನಡ, ಇಂಗ್ಲೀಷ್, ಹಿಂದಿ ಮತ್ತು ದ್ವಿಭಾಷಾ:ಕನ್ನಡ-ಇಂಗ್ಲೀಷ್) ಪುಸ್ತಕಗಳನ್ನು ಆಯ್ಕೆ ಮಾಡಲಾಯಿತು.
- ಮೇಲ್ಕಂಡಂತೆ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ವತಿಯಿಂದ ನಿರ್ಧರಿಸಲಾದ ಪುಸ್ತಕಗಳ ಪಟ್ಟಿಯನ್ನು ಸಂಬಂಧಿತ ವಿವರಗಳೊಂದಿಗೆ DSERT Website ನಲ್ಲಿ ಅಳವಡಿಸಲಾಯಿತು ಮತ್ತು ಸದರಿ ಪುಸ್ತಕಗಳ ಪಟ್ಟಿಯಿಂದ ತಮ್ಮ ಶಾಲಾ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಪುಸ್ತಕಗಳನ್ನು ತಮ್ಮ ಶಾಲೆಗೆ ಬಿಡುಗಡೆಯಾಗುವ ಗ್ರಂಥಾಲಯ ಅನುದಾನದ ವತಿಯಿಂದ ಶಾಲಾ ಮುಖ್ಯೋಪಾಧ್ಯಾಯರುಗಳು SDMC ಅನುಮೋದನೆ ಪಡೆದು ನಿಯಮಾನುಸಾರ ಖರೀದಿಸಲು ಸುತ್ತೋಲೆ ಹೊರಡಿಸಲಾಯಿತು.

## 3. ಭಾಷಾ ಉತ್ಸವ

- ಸ್ಥಳೀಯ ಭಾಷೆಗಳ ಮತ್ತು ತಂತ್ರಜ್ಞಾನದ ಬಳಕೆಯಿಂದ ಭಾಷಾ ಕಲಿಕೆಯನ್ನು ಉತ್ತೇಜಿಸುವ ಸಲುವಾಗಿ ಭಾರತೀಯ ಭಾಷಾ ಉತ್ಸವ್ ಕಾರ್ಯಕ್ರಮವನ್ನು ಜಿಲ್ಲಾ ಉಪನಿರ್ದೇಶಕರು (ಆ)ರವರ ನಿರ್ದೇಶನದಲ್ಲಿ ರಾಜ್ಯದ ಎಲ್ಲಾ ಶಾಲೆಗಳಲ್ಲಿ 11 ಡಿಸೆಂಬರ್ 2023 ರಿಂದ 75 ದಿನಗಳ ಕಾಲ ನಡೆಸಲಾಯಿತು.
- ಸದರಿ ಕಾರ್ಯಕ್ರಮವನ್ನು ರಾಜ್ಯದ ಜಿಲ್ಲೆಗಳಲ್ಲಿ ವಿಶೇಷವಾಗಿ ಆಚರಿಸಲಾಯಿತು. ವಿವಿಧ ಭಾಷೆಗಳ ಹಾಡುಗಳು, ನೃತ್ಯಗಳು ಮತ್ತು ಇತರೆ ಕಲಾತ್ಮಕ ಪ್ರದರ್ಶನಗಳನ್ನು ಜಿಲ್ಲಾ, ತಾಲ್ಲೂಕು ಮತ್ತು ಶಾಲಾ ಹಂತಗಳಲ್ಲಿ ನಡೆಸಲಾಯಿತು.

## 4. 100 ದಿನಗಳ ಓದುವ ಅಭಿಯಾನ

ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸುವುದರೊಂದಿಗೆ ಭಾಷಾ ಕೌಶಲ್ಯವನ್ನು ಅಭಿವೃದ್ಧಿಗೊಳಿಸಲು ರಾಜ್ಯವ್ಯಾಪಿ ಎಲ್ಲಾ ಬಾಲವಾಟಿಕ/ ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ದಿನಾಂಕ:15.11.2023 ರಿಂದ 22.02.2024ರವರೆಗೆ 100 ದಿನಗಳ ಓದುವ ಆಂದೋಲನವನ್ನು ಅನುಷ್ಠಾನಗೊಳಿಸಲಾಯಿತು. ಸದರಿ ಕಾರ್ಯಕ್ರಮದ ಅನುಷ್ಠಾನದ ಸಲುವಾಗಿ ಅಗತ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಸಂಬಂಧ ವಿದ್ಯಾರ್ಥಿಗಳನ್ನು ಅವರ ವಯೋಮಾನಕ್ಕನುಗುಣವಾಗಿ 03 ಗುಂಪುಗಳಲ್ಲಿ

ವಿಂಗಡಿಸಿ, ಪ್ರತಿ ಗುಂಪಿಗೂ ಪ್ರತ್ಯೇಕವಾದ 14 ವಾರಗಳ ವೇಳಾ ಪಟ್ಟಿಯನ್ನು ನೀಡಿ ಕಾರ್ಯಕ್ರಮ ನಡೆಸಲಾಯಿತು.



ಶಾಲಾ ಗ್ರಂಥಾಲಯದ ನೋಟ-01



ಶಾಲಾ ಗ್ರಂಥಾಲಯದ ನೋಟ-02



100 ದಿನಗಳ ಓದುವ ಅಭಿಯಾನದ ನೋಟ-01




100 ದಿನಗಳ ಓದುವ ಅಭಿಯಾನದ ನೋಟ-02



ಭಾಷಾ ಉತ್ಸವ ಕಾರ್ಯಕ್ರಮ

# ಆವಿಷ್ಕೃತ ಚಟುವಟಿಕೆಗಳು

## ಕಲೋತ್ಸವ

ಶಿಕ್ಷಣದಲ್ಲಿ ಕಲೆಗಳನ್ನು ಉತ್ತೇಜಿಸಿ, ಪೋಷಿಸುವ ಮೂಲಕ ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಮತ್ತು ಅದರ ವೈವಿಧ್ಯತೆಯ ಅರಿವನ್ನು ಶಾಲಾ ಮಕ್ಕಳಿಗೆ ಮೂಡಿಸಲು, ಶಾಲಾ ವಿದ್ಯಾರ್ಥಿಗಳಲ್ಲಿರುವ ಕಲಾತ್ಮಕ ಪ್ರತಿಭೆಯನ್ನು ಗುರುತಿಸಿ, ಪ್ರದರ್ಶಿಸಲು ಶಾಲಾ ಶಿಕ್ಷಣ ಸಚಿವಾಲಯ (MoE) ಭಾರತ ಸರ್ಕಾರ 2015 ರಲ್ಲಿ ಪ್ರಾರಂಭಿಸಿದ ಕಲೋತ್ಸವ ಕಾರ್ಯಕ್ರಮವನ್ನು ಶಾಲಾ/ಕಾಲೇಜು ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಆನ್‌ಲೈನ್ ಮೂಲಕ ಹಾಗೂ ರಾಷ್ಟ್ರ ಮಟ್ಟದಲ್ಲಿ ಮುಖಾ ಮುಖಿಯಾಗಿ ಆಚರಿಸಲಾಯಿತು.

**ಉದ್ದೇಶಗಳು:**

- ವಿದ್ಯಾರ್ಥಿಗಳಲ್ಲಿ ದೇಶದ ವಿವಿಧ ಸಂಪ್ರದಾಯಗಳನ್ನು ಗೌರವಿಸುವ ಗುಣಗಳನ್ನು ಬೆಳೆಸುವುದು ಹಾಗೂ ಅವರನ್ನು ಸಂಸ್ಕೃತಿಯ ರಾಯಭಾರಿಯನ್ನಾಗಿ ತಯಾರಿಸುವುದು.
- ವಿದ್ಯಾರ್ಥಿಗಳು ವೈವಿಧ್ಯಮಯ ಮತ್ತು ಅಮೂರ್ತವಾದ ಸಾಂಸ್ಕೃತಿಕ ಅಭಿವ್ಯಕ್ತಿತ್ವಗಳನ್ನು ಗುರುತಿಸುವ ಮತ್ತು ಅರ್ಥೈಸಿಕೊಳ್ಳುವಂತೆ ಮಾಡುವುದು.
- ವಿದ್ಯಾರ್ಥಿಗಳಲ್ಲಿರುವ ಕಲಾತ್ಮಕ ಪ್ರತಿಭೆಯನ್ನು ವಿಸ್ತರಿಸಲು ಹಾಗೂ ಪ್ರದರ್ಶಿಸಲು ಅವಕಾಶ ಮಾಡಿಕೊಡುವುದು.
- ವಿದ್ಯಾರ್ಥಿಗಳಲ್ಲಿ ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಅದನ್ನು ಅಭಿವೃದ್ಧಿ ಪಡಿಸುವುದು.

**ಅನುಷ್ಠಾನ ಪ್ರಕ್ರಿಯೆ:–**

ರಾಜ್ಯದ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲಾ/ ಕಾಲೇಜುಗಳಲ್ಲಿ 9ರಿಂದ 12ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ಕಲಾ ಪ್ರಕಾರವನ್ನು (ಪ್ರದರ್ಶನ ಮತ್ತು ರಚನೆ) 5 ನಿಮಿಷಗಳಿಗೆ ಮೀರದಂತೆ ಚಿತ್ರೀಕರಣ ಮಾಡಿ, ಆನ್‌ಲೈನ್ ಮೂಲಕ **www.schooleducation.kar.nic.in** ನ **vidyavahini** ಯಲ್ಲಿ ಅಥವಾ **vidyavahini.karnataka.gov.in** ವೆಬ್‌ಸೈಟ್ ಲಿಂಕ್‌ನಲ್ಲಿ **"ಕಲೋತ್ಸವ"** ಕಾರ್ಯಕ್ರಮ ಸ್ಪರ್ಧೆಯ ನಿಯಮಗಳನ್ನು ತಿಳಿದುಕೊಂಡು, ತಮ್ಮ ಮೊಬೈಲ್ ಸಂಖ್ಯೆ ಹಾಗೂ ಸ್ಯಾಟ್ಸ್ ಗುರುತಿನ ಸಂಖ್ಯೆಯನ್ನು ನಮೂದಿಸಿ, ತಮ್ಮ ಕಲಾ ಪ್ರಕಾರದ ಪ್ರಸ್ತುತಿಯನ್ನು (ವಿಡಿಯೋ ಫೈಲ್ಸ್‌ನ್ನು **MP-4 Format)** ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲು ಅವಕಾಶ ಮಾಡಿಕೊಡಲಾಯಿತು.

ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಲಿಂಕ್‌ನಲ್ಲಿ ಅಪ್‌ಲೋಡ್ ಮಾಡಿರುವ ಪ್ರಸ್ತುತಿಗಳನ್ನು ಜಿಲ್ಲಾ ಹಂತದ ಮೌಲ್ಯಮಾಪನ ಸಮಿತಿಯ ಸದಸ್ಯರು ಮೌಲ್ಯಮಾಪನ ಮಾಡಿ ರಾಜ್ಯ ಹಂತಕ್ಕೆ ಪ್ರತಿ ಕಲಾ ಪ್ರಕಾರದಿಂದ ಪ್ರಥಮ ಸ್ಥಾನ ಪಡೆದ ಒಬ್ಬ ವಿದ್ಯಾರ್ಥಿ ಹಾಗೂ ಒಬ್ಬ ವಿದ್ಯಾರ್ಥಿನಿಯನ್ನು ಆಯ್ಕೆ ಮಾಡಿ ರಾಜ್ಯ ಮಟ್ಟಕ್ಕೆ ಸಲ್ಲಿಸಲಾಯಿತು. ರಾಜ್ಯ ಮಟ್ಟದಲ್ಲಿ ರಾಜ್ಯ ಹಂತದ ಮೌಲ್ಯ ಮಾಪನ ಸಮಿತಿಯ ಸದಸ್ಯರು ಮೌಲ್ಯಮಾಪನ ಮಾಡಿ ಪ್ರತಿ ಕಲಾ ಪ್ರಕಾರದಿಂದ ಪ್ರಥಮ ಸ್ಥಾನ ಪಡೆದ ಒಬ್ಬ ವಿದ್ಯಾರ್ಥಿ ಹಾಗೂ ಒಬ್ಬ ವಿದ್ಯಾರ್ಥಿನಿಯನ್ನು ಆಯ್ಕೆ ಮಾಡಿ ರಾಷ್ಟ್ರ ಮಟ್ಟಕ್ಕೆ ಸಲ್ಲಿಸಲಾಯಿತು. ದಿನಾಂಕ: 9.01.2024 ರಿಂದ 14.01.2024 ರವರೆಗೆ ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಕಲೋತ್ಸವ ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯದಿಂದ 10 ವಿದ್ಯಾರ್ಥಿನಿಯರು ಹಾಗೂ 10 ವಿದ್ಯಾರ್ಥಿಗಳು (ಒಟ್ಟು 20 ವಿದ್ಯಾರ್ಥಿಗಳು) ಭಾಗವಹಿಸಿ 2 ಬಹುಮಾನಗಳನ್ನು ಪಡೆದು ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ.




**ಕುಮಾರಿ ರಕ್ಷಿತಾ.** ಸರ್ಕಾರಿ ಪ್ರೌಢಶಾಲೆ, ಮುಸುವಿನ ಕೊಪ್ಪಲು, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ, ದೃಶ್ಯ ಕಲೆಗಳು–2ಡಿ ಆಯಾಮ – ಪ್ರಥಮ ಬಹುಮಾನ




**ಕುಮಾರಿ ಗಾರ್ಗಿದೇವಿ,** ಹೆಚ್.ಎಂ.ಎಂ. ಇಂಗ್ಲೀಷ್ ಮೀಡಿಯಂ ಪ್ರೈಮರಿ ಶಾಲೆ ಮತ್ತು ಆಚಾರ್ಯ ಮೆಮೋರಿಯಲ್ ಇಂಗ್ಲೀಷ್ ಮೀಡಿಯಂ ಪ್ರೌಢಶಾಲೆ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ. ಶಾಸ್ತ್ರೀಯ ನೃತ್ಯ – ತೃತೀಯ ಬಹುಮಾನ

**ಅನುದಾನದ ವಿವರ:**

| ಕ್ರ ಸಂ | ಚಟುವಟಿಕೆಯ ಹೆಸರು | ಅನುಮೋದನೆ | | ಪ್ರಗತಿ | | ಶೇಕಡ ವಾರು |
|---|---|---|---|---|---|---|
| | | ಭೌತಿಕ | ಆರ್ಥಿಕ (ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ಲಕ್ಷಗಳಲ್ಲಿ) | |
| 1. | ಕಲೋತ್ಸವ | 35 ಜಿಲ್ಲೆಗಳು 4716 ವಿದ್ಯಾರ್ಥಿಗಳು | 12.00 | 35 ಜಿಲ್ಲೆಗಳು 4716 ವಿದ್ಯಾರ್ಥಿಗಳು | 12.00 | 100% |

**ರಸಪ್ರಶ್ನೆ ಸ್ಪರ್ಧೆ – 2023–24**

2023–24 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆಯನ್ನು ಶಾಲಾ ಹಾಗೂ ಬ್ಲಾಕ್ ಹಂತದಲ್ಲಿ ಆನ್ ಲೈನ್ ಮೂಲಕ ಹಾಗೂ ಜಿಲ್ಲೆ, ವಿಭಾಗ ಹಾಗೂ ರಾಜ್ಯ ಹಂತದ ರಸಪ್ರಶ್ನೆ ಸ್ಪರ್ಧೆಯನ್ನು ಮುಖಾಮುಖಿಯಾಗಿ ಹಮ್ಮಿಕೊಳ್ಳಲಾಯಿತು.

ಶಾಲಾ ಹಂತದಲ್ಲಿ ಶಿಕ್ಷಕರು ರಸಪ್ರಶ್ನೆ ಸ್ಪರ್ಧೆಯನ್ನು ನಡೆಸಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದು ವಿಜೇತರಾದ ವಿದ್ಯಾರ್ಥಿಗಳ ಮಾಹಿತಿಯನ್ನು ವಿದ್ಯಾವಾಹಿನಿಯ ವೆಬ್‌ಸೈಟ್ ನಲ್ಲಿ SATs ID, ಫೋಟೋ, ಮೊಬೈಲ್ ಸಂಖ್ಯೆಯನ್ನು ನೀಡಿ ನೋಂದಣಿ ಮಾಡಿದರು.

ಶಾಲಾ ಹಂತದ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಬ್ಲಾಕ್ ಹಂತದ ಸ್ಪರ್ಧೆಯಲ್ಲಿ ಭಾಗವಹಿಸಿದರು. ಬ್ಲಾಕ್ ಹಂತದ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದು ವಿಜೇತರಾದ ವಿದ್ಯಾರ್ಥಿಗಳು ಜಿಲ್ಲಾ ಹಂತದ ರಸಪ್ರಶ್ನೆ ಸ್ಪರ್ಧೆಯಲ್ಲಿ, ಜಿಲ್ಲಾ ಹಂತದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದು ವಿಜೇತರಾದ ವಿದ್ಯಾರ್ಥಿಗಳು ವಿಭಾಗ ಹಂತದ ರಸಪ್ರಶ್ನೆ ಸ್ಪರ್ಧೆಯಲ್ಲಿ ಹಾಗೂ ವಿಭಾಗ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದು ವಿಜೇತರಾದ ವಿದ್ಯಾರ್ಥಿಗಳು ರಾಜ್ಯ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿದರು.

ರಾಜ್ಯ ಮಟ್ಟದ ರಸಪ್ರಶ್ನೆ ಸ್ಪರ್ಧೆಯನ್ನು ದೂರದರ್ಶನ ಚಂದನವಾಹಿನಿ, ಬೆಂಗಳೂರು ಇಲ್ಲಿ ದಿನಾಂಕ : 18.05.2024 ರಂದು ನಡೆಸಲಾಯಿತು. ಪ್ರತಿ ಹಂತದ ಸ್ಪರ್ಧೆಯಲ್ಲಿಯೂ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಆನ್ ಲೈನ್ ಮೂಲಕ ಪ್ರಮಾಣ ಪತ್ರವನ್ನು, ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, ಟ್ರೋಫಿ ಹಾಗೂ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.



**ಅನುದಾನದ ವಿವರ**

**(ರೂ.ಲಕ್ಷಗಳಲ್ಲಿ)**

| ಕ್ರ ಸಂ | ಚಟುವಟಿಕೆಯ ಹೆಸರು | ಅನುಮೋದನೆ | | ಪ್ರಗತಿ | | ಶೇಕಡ ವಾರು |
|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | |
| 1. | ರಸಪ್ರಶ್ನೆ ಸ್ಪರ್ಧೆ | 35 ಜಿಲ್ಲೆಗಳು | 35.00 | 35 ಜಿಲ್ಲೆಗಳು 455841 ವಿದ್ಯಾರ್ಥಿಗಳು | 35.00 | 100% |

**ಝಾನ್ಸಿ ರಾಣಿ ಲಕ್ಷ್ಮೀಬಾಯಿ ಆತ್ಮ ರಕ್ಷಾ ಪ್ರಶಿಕ್ಷಣ**

2023–24ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಸ್ವರಕ್ಷಣಾ ಕೌಶಲ್ಯಗಳ ತರಬೇತಿ ನೀಡಲು ಪ್ರತಿ ಶಾಲೆಗೆ ಘಟಕ ವೆಚ್ಚ ರೂ.3000/–ರಂತೆ ಒಟ್ಟು 5307 ಶಾಲೆಗಳಿಗೆ ಒಟ್ಟು 159.21 ಲಕ್ಷಗಳ ಅನುದಾನ ಅನುಮೋದನೆಯಾಗಿರುತ್ತದೆ.

**ಉದ್ದೇಶಗಳು:**

- ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಅಭಿವೃದ್ಧಿ ಪಡಿಸುವುದು.
- ವಿದ್ಯಾರ್ಥಿನಿಯರಲ್ಲಿ ಸ್ವರಕ್ಷಣಾ ಕೌಶಲ್ಯಗಳನ್ನು ಬೆಳೆಸಿ, ಅವರಲ್ಲಿ ಆತ್ಮ ವಿಶ್ವಾಸವನ್ನು ಹೆಚ್ಚಿಸುವುದು.
- ಹೆಣ್ಣು ಮಕ್ಕಳು ಉನ್ನತ ವಿದ್ಯಾಭ್ಯಾಸ ಕೈಗೊಳ್ಳುವಂತೆ ಪ್ರೇರೇಪಿಸುವುದು.

**ಅನುಷ್ಠಾನ ಮತ್ತು ನಿರ್ವಹಣೆ**

ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಸ್ಥಳೀಯ ಸ್ವರಕ್ಷಣಾ ಕೌಶಲ್ಯಗಳ ತರಬೇತಿ ಪಡೆದ ಸಂಪನ್ಮೂಲ ವ್ಯಕ್ತಿಗಳಿಂದ ಮುಖ್ಯೋಪಾಧ್ಯಾಯರ/ದೈಹಿಕ ಶಿಕ್ಷಣ ಶಿಕ್ಷಕರ ನೇತೃತ್ವದಲ್ಲಿ ತರಬೇತಿ ನೀಡುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಸ್ವಯಂ ರಕ್ಷಣಾ ಕೌಶಲ್ಯಗಳನ್ನು ಬೆಳಸಲಾಯಿತು.



**ಸರ್ಕಾರಿ ಆದರ್ಶ ವಿದ್ಯಾಲಯ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ**

**ಅನುದಾನದ ವಿವರ:**

**(ರೂ.ಲಕ್ಷಗಳಲ್ಲಿ)**

| ಕ್ರ ಸಂ | ಚಟುವಟಿಕೆಯ ಹೆಸರು | ಅನುಮೋದನೆ | | ಪ್ರಗತಿ | | ಶೇಕಡ ವಾರು |
|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | |
| 1. | ಝಾನ್ಸಿ ರಾಣಿ ಲಕ್ಷ್ಮೀಬಾಯಿ ಆತ್ಮ ರಕ್ಷಾ ಪ್ರಶಿಕ್ಷಣ | 5307 ಪ್ರೌಢ ಶಾಲೆಗಳು | 159.21 | 5307 ಪ್ರೌಢ ಶಾಲೆಗಳು | 159.21 | 100% |

## ಹದಿ ಹರೆಯದ ಹೆಣ್ಣು ಮಕ್ಕಳ ಶಿಕ್ಷಣ

2023–24ನೇ ಸಾಲಿನಲ್ಲಿ ವಾರ್ಷಿಕ ಕ್ರಿಯಾ ಯೋಜನಾ ಅನುಮೋದನಾ ಮಂಡಳಿಯಿಂದ ಹದಿಹರೆಯದ ಹೆಣ್ಣು ಮಕ್ಕಳಿಗೆ ಗುಣಾತ್ಮಕ ಕಲಿಕೆಯ ಜೊತೆಗೆ ಅವರ ದೈಹಿಕ, ಸಾಮಾಜಿಕ ಹಾಗೂ ಮಾನಸಿಕ ಬೆಳವಣಿಗೆಗೆ ಅನುಕೂಲವಾಗುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಪ್ರತಿ ಶಾಲೆಗೆ ಘಟಕ ವೆಚ್ಚ ರೂ.500 ಗಳಂತೆ ಒಟ್ಟು 5307 ಪ್ರೌಢಶಾಲೆಗಳಿಗೆ ಒಟ್ಟು ರೂ.26.535 ಲಕ್ಷಗಳ ಅನುದಾನ ಅನುಮೋದನೆಯಾಗಿರುತ್ತದೆ. ಈ ಅನುದಾನವನ್ನು ಬಳಸಿಕೊಂಡು ಶಾಲಾ ಹಂತದಲ್ಲಿ ಶಿಕ್ಷಕರು ಹೆಣ್ಣು ಮಕ್ಕಳಿಗೆ ವೈಯಕ್ತಿಕ ಸ್ವಚ್ಛತೆ, ಋತುಸ್ರಾವ ನೈರ್ಮಲ್ಯ, ಸಾಂಕ್ರಾಮಿಕ ರೋಗಗಳ ಹರಡುವಿಕೆ, ಆರ್ಥಿಕ ಸಾಕ್ಷರತೆ, ಉನ್ನತ ಶಿಕ್ಷಣಕ್ಕೆ ಇರುವ ಅವಕಾಶಗಳು, ವಕೀಲರಿಂದ ಮಕ್ಕಳ ಹಕ್ಕುಗಳು ಮತ್ತು ಕರ್ತವ್ಯಗಳು ಮುಂತಾದ ಕಲಿಕೆಗೆ ಪೂರಕವಾಗುವ ಚಟುವಟಿಕೆಗಳನ್ನು ಹಮ್ಮಿಕೊಂಡು ಹದಿಹರೆಯದ ಹೆಣ್ಣು ಮಕ್ಕಳ ಕಲಿಕೆಯಲ್ಲಿ ಆಸಕ್ತಿಯನ್ನು ಬೆಳೆಸಿ, ಅವರ ಆರೋಗ್ಯದ ಮಟ್ಟವನ್ನು ಹೆಚ್ಚಿಸಲಾಯಿತು.





**ವಿಷಯ ತಜ್ಞರಿಂದ ವೃತ್ತಿ ಮಾರ್ಗದರ್ಶನ ನೀಡುತ್ತಿರುವುದು – ಸರ್ಕಾರಿ ಪ್ರೌಢಶಾಲೆ, ಹಾವೇರಿ ಜಿಲ್ಲೆ**

**ಅನುದಾನದ ವಿವರ:**

**(ರೂ.ಲಕ್ಷಗಳಲ್ಲಿ)**

| ಕ್ರ ಸಂ | ಚಟುವಟಿಕೆಯ ಹೆಸರು | ಅನುಮೋದನೆ | | ಪ್ರಗತಿ | | ಶೇಕಡ ವಾರು |
|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | |
| 1. | ಹದಿ ಹರೆಯದ ಹೆಣ್ಣು ಮಕ್ಕಳ ಶಿಕ್ಷಣ | 5307 ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಶಾಲೆಗಳು | 26.535 | 5307 ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಶಾಲೆಗಳು | 26.535 | 100% |

# ಕರ್ನಾಟಕ ಪಬ್ಲಿಕ್ ಶಾಲೆ–2023–24

ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಒಂದೇ ಭೌಗೋಳಿಕ ಸ್ಥಳಗಳಲ್ಲಿ ಅದೇ ಗ್ರಾಮ/ಪಟ್ಟಣ ವ್ಯಾಪ್ತಿಯಲ್ಲಿರುವ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಒಗ್ಗೂಡಿಸಿ ಸ್ಥಾಪಿಸಲಾಗಿದೆ. ರಾಜ್ಯ ಸರ್ಕಾರದ ಈ ಕ್ರಮವು ಎಂ.ಹೆಚ್.ಆರ್.ಡಿಯ ಶಾಲಾ ಶಿಕ್ಷಣದ ಸಂಯೋಜಿತ ಯೋಜನೆಯ ಮಾರ್ಗಸೂಚಿಗಳನ್ವಯ ರಾಜ್ಯಗಳು ಪ್ರಾಥಮಿಕ ಹಂತದಿಂದ ಪದವಿ ಪೂರ್ವ ಶಿಕ್ಷಣದ ಹಂತದವರೆಗೆ ಒಗ್ಗೂಡಿಸಿ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡುವುದಾಗಿರುತ್ತದೆ.

- ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಇಡಿ 04 ಯೋಸಕ 2017, ಬೆಂಗಳೂರು ದಿನಾಂಕ: 05.01.2018 ರನ್ವಯ 176 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗಿದೆ.
- ಆದೇಶ ಸಂಖ್ಯೆ: ಇಡಿ 230 ಯೋಸಕ 2018, ಬೆಂಗಳೂರು ದಿನಾಂಕ: 18.05.2019 ರನ್ವಯ 100 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗಿದೆ.
- ಸರ್ಕಾರಿ ಆದೇಶ ಸಂಖ್ಯೆ: ಇಪಿ 204 ಪಿ.ಎಂ.ಸಿ 2021 ಬೆಂಗಳೂರು ದಿನಾಂಕ: 25.10.2021 ರನ್ವಯ 01 ಹೊಸ ಕೆ.ಪಿ.ಎಸ್ ಶಾಲೆಯನ್ನು ಪ್ರಾರಂಭಿಸಲಾಗಿದೆ.
- ಸರ್ಕಾರಿ ಆದೇಶ ಸಂಖ್ಯೆ: ಇಪಿ 09 ಎಂಪಿಇ 2021 ಬೆಂಗಳೂರು ದಿನಾಂಕ: 04.04.2022 ರನ್ವಯ 2022–23ನೇ ಸಾಲಿಗೆ 05 ಹೊಸ ಕೆ.ಪಿ.ಎಸ್ ಶಾಲೆಗಳು ಸೇರ್ಪಡೆಗೊಂಡಿದೆ.
- ಸರ್ಕಾರಿ ಆದೇಶ ಸಂಖ್ಯೆ: ಇಪಿ 09 ಎಂಪಿಇ 2021 ಬೆಂಗಳೂರು ದಿನಾಂಕ: 13.05.2022 ರನ್ವಯ 02 ಹೊಸ ಕೆ.ಪಿ.ಎಸ್ ಶಾಲೆಗಳನ್ನು ಪ್ರಾರಂಭಿಸಲಾಗಿದೆ.
- ಆದೇಶ ಸಂಖ್ಯೆ: ಇಪಿ 116 ಎಂಪಿಇ 2022, ಬೆಂಗಳೂರು ದಿನಾಂಕ: 25.01.2023 ರ ಸರ್ಕಾರಿ ಆದೇಶದಂತೆ 01 ಹೊಸ ಕೆ.ಪಿ.ಎಸ್ ಶಾಲೆಯನ್ನು ಪ್ರಾರಂಭಿಸಲಾಗಿದೆ.
- ಆದೇಶ ಸಂಖ್ಯೆ: ಇಪಿ 01 ಎಂಪಿಇ 2024 ಬೆಂಗಳೂರು ದಿನಾಂಕ: 05.02.2024 ರ ಸರ್ಕಾರಿ ಆದೇಶದಂತೆ 01 ಹೊಸ ಶಾಲೆಯನ್ನು ಪ್ರಾರಂಭಿಸಲಾಗಿದೆ.
- ಆದೇಶ ಸಂಖ್ಯೆ: ಪಿಡಿಎಸ್ 27 ಎಸ್ ಡಿ ಪಿ 2022 ದಿನಾಂಕ: 05.07.2022 ರ ಸರ್ಕಾರಿ ಆದೇಶದಂತೆ 22 ಹೊಸ ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿ ಕೆ.ಪಿ.ಎಸ್ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

ಒಟ್ಟಾರೆಯಾಗಿ 308 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಸದರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಪೂರ್ವ ಪ್ರಾಥಮಿಕದಿಂದ 12 ನೇ ತರಗತಿವರೆಗೂ ಶಿಕ್ಷಣವನ್ನು ಒದಗಿಸಲಾಗಿದೆ ಮತ್ತು ಕನ್ನಡ ಹಾಗೂ ಆಂಗ್ಲ ಮಾಧ್ಯಮ ಬೋಧನಾ ಪದ್ಧತಿಯನ್ನು ಅಳವಡಿಸಲಾಗಿದೆ.

ಪೂರ್ವ ಪ್ರಾಥಮಿಕದಿಂದ ಪದವಿ ಪೂರ್ವ ತರಗತಿವರೆಗೆ ಒಟ್ಟು **279343** ವಿದ್ಯಾರ್ಥಿಗಳು ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈ ಶಾಲೆಗಳಿಗೆ ನೀಡುವ ಅನುದಾನ ಮತ್ತು ಶಿಕ್ಷಣ ತಜ್ಞರ ಪರಿಣತಿಯಿಂದ ಇಂತಹ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣವನ್ನು ನೀಡಲಾಗಿದೆ.

ರಾಜ್ಯ ಸರ್ಕಾರವು 308 ಕರ್ನಾಟಕ ಪಬ್ಲಿಕ್ ಶಾಲೆಗಳು ಯಶಸ್ವಿಯಾಗಿ ಸ್ಥಾಪನೆಗೊಂಡಿರುವ ಹಿನ್ನೆಲೆಯಲ್ಲಿ ಒಂದೇ ಸೂರಿನಡಿಯಲ್ಲಿ ಪೂರ್ವ ಪ್ರಾಥಮಿಕದಿಂದ ಪದವಿ ಪೂರ್ವದವರೆಗೂ ಶಿಕ್ಷಣ

ನೀಡುವ ಸಲುವಾಗಿ ಹಂತ ಹಂತವಾಗಿ ಒಟ್ಟು 1000 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಸ್ಥಾಪಿಸುವ ನಿರ್ಧಾರ ತೆಗೆದುಕೊಂಡಿದೆ.

ಇಲಾಖೆಯು ಮೂಲಸೌಕರ್ಯ ಹೊಂದಿರುವ ಉತ್ತಮ ಕಲಿಕಾ ವಾತಾವರಣ ಮತ್ತು ಸಕ್ರಿಯ ಬೋಧನಾ ಕ್ರಮ ಅನುಸರಿಸುವ ತರಬೇತಿ ಹೊಂದಿದ ಹಾಗೂ ತಾಂತ್ರಿಕ ನೆರವು ಕಲಿಕಾ ಪದ್ಧತಿಯನ್ನು ಅಳವಡಿಸಿ ಶಿಕ್ಷಣ ನೀಡುವ ಸಮರ್ಪಿತ ಶಿಕ್ಷಕರು ಹಾಗೂ ಉತ್ತಮ ಕಲೆ ಮತ್ತು ವಿಜ್ಞಾನ ಪ್ರಯೋಗಾಲಯಗಳು ಮತ್ತು ಗ್ರಂಥಾಲಯ ಸೌಲಭ್ಯಗಳನ್ನು ಒದಗಿಸುವ ಗುರಿ ಹೊಂದಿರುತ್ತದೆ. ಈ ಕೆ.ಪಿ.ಎಸ್ ಗಳಲ್ಲಿ ಪ್ರತಿ ತರಗತಿಯಲ್ಲಿನ ಎಲ್ಲಾ ವಿದ್ಯಾರ್ಥಿಗಳ ಪೈಕಿ ಕನಿಷ್ಠ ಶೇ.75 ರಷ್ಟು ವಿದ್ಯಾರ್ಥಿಗಳು ಆಯಾ ತರಗತಿಗನುಗುಣವಾಗಿ ನಿಗದಿಪಡಿಸಿದ ಕಲಿಕಾ ಸಾಮರ್ಥ್ಯಗಳನ್ನು ಕಲೆ, ಸಂಗೀತ ಮತ್ತು ದೈಹಿಕ ಶಿಕ್ಷಣದಲ್ಲಿ ಸಮನಾಗಿ ಸಾಧಿಸುವುದನ್ನು ಖಚಿತಪಡಿಸಿಕೊಳ್ಳುವುದು. ಈ ಶಾಲೆಗಳಲ್ಲಿ ತರಗತಿ ಪ್ರಕ್ರಿಯೆಗಳನ್ನು ಬೆಂಬಲಿಸಲು ಕಲಿಕಾ ಫಲಿತಾಂಶಗಳ ಮೌಲ್ಯಾಂಕನ ಹಾಗೂ ಪರಿಹಾರ ಬೋಧನೆ ನೀಡುವ ಸಂಬಂಧ ಯೋಜನಾ ತಯಾರಿಕೆ ಮಾಡಲು ವಿಶ್ವಾಸಾರ್ಹ ವ್ಯವಸ್ಥೆಯನ್ನು ರೂಪಿಸಲು ಇಲಾಖೆಯು ಪ್ರತಿಪಾದಿಸುತ್ತದೆ.

**ಪ್ರಗತಿ ವಿವರ:**

- ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರಿಂದ ಪ್ರತಿ ಕೆಪಿಎಸ್ ಶಾಲೆಗೆ ವಾರ್ಷಿಕ ನಿರ್ವಹಣೆ ಅನುದಾನ ದಾಖಲಾತಿಗೆ ಅನುಗುಣವಾಗಿ ಈ ಕೆಳಕಂಡಂತೆ ಬಿಡುಗಡೆ ಮಾಡಿ, ನಿಯಾಮಾನುಸಾರ ಖರ್ಚು ಮಾಡಲು ಆದೇಶಿಸಲಾಗಿದೆ.

ಬಿಡುಗಡೆಯಾದ ಒಟ್ಟು ಅನುದಾನ – ರೂ. 1842.00 ಲಕ್ಷಗಳು

<table>
<tr><th>ಕ್ರ.ಸಂ</th><th>ವರ್ಷ</th><th>ಕೆ.ಪಿ.ಎಸ್ ಶಾಲೆಗಳ ಸಂಖ್ಯೆ</th><th colspan="3">ಘಟಕ ವೆಚ್ಚ (ಲಕ್ಷಗಳಲ್ಲಿ)</th><th>ಬಿಡುಗಡೆಯಾದ ಒಟ್ಟು ಅನುದಾನ (ಲಕ್ಷಗಳಲ್ಲಿ)</th></tr>
<tr><td>1</td><td>2018-19</td><td>176</td><td colspan="3">5.00</td><td>880.00</td></tr>
<tr><td>2</td><td>2019-20</td><td>276</td><td colspan="3">5.00</td><td>1380.00</td></tr>
<tr><td>3</td><td>2020-21</td><td>276</td><td colspan="3">5.00</td><td>1380.00</td></tr>
<tr><td>4</td><td>2021-22</td><td>276</td><td colspan="3">4.00</td><td>1104.00</td></tr>
<tr><td>5</td><td>2022-23</td><td>276</td><td colspan="3">4.00</td><td>1104.00</td></tr>
<tr><td rowspan="5">6</td><td rowspan="5">2023-24</td><td rowspan="5">283</td><td>ದಾಖಲಾತಿ</td><td>ಶಾಲೆ .ಸಂ</td><td rowspan="2">5.00</td><td rowspan="5">1857.00</td></tr>
<tr><td>0-500</td><td>35</td></tr>
<tr><td>501-1000</td><td>126</td><td>6.00</td></tr>
<tr><td>1001-1500</td><td>86</td><td>7.00</td></tr>
<tr><td>1501-</td><td>36</td><td>9.00</td></tr>
<tr><td rowspan="4">7</td><td rowspan="4">2024-25</td><td rowspan="4">283</td><td>0-500</td><td>43</td><td>5.00</td><td rowspan="4">1842.00</td></tr>
<tr><td>501-1000</td><td>122</td><td>6.00</td></tr>
<tr><td>1001-1500</td><td>84</td><td>7.00</td></tr>
<tr><td>1501-</td><td>34</td><td>9.00</td></tr>
</table>

- ಕರ್ನಾಟಕ ಪಬ್ಲಿಕ್ ಶಾಲೆಗಳ ಸಮಗ್ರ ಯೋಜನೆ ಹಾಗೂ ಕಾರ್ಯನಿರ್ವಹಣೆ ಕುರಿತು ಆಯುಕ್ತರು, ಸಾಶಿಇ ಮತ್ತು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಜಂಟಿ ಸಹಿಯುಳ್ಳ ದಿನಾಂಕ: 18.12.2018 ರ ಸುತ್ತೋಲೆಯನ್ನು ಕಳುಹಿಸಿ, ಅನುದಾನ ನಿರ್ವಹಣೆ, ಆಡಳಿತ್ಮಾತಕ ಕ್ರಮಗಳು ಮತ್ತು ಜಿಲ್ಲಾ ಹಂತದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ವಿವರ ನೀಡಲಾಗಿದೆ.
- 2019-20 ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕದಡಿ 100 ಕೆಪಿಎಸ್ ಶಾಲೆಯವರಿಗೆ ತಲಾ ರೂ.50.00 ಲಕ್ಷಗಳಂತೆ 5000.00 ಲಕ್ಷಗಳ ಅನುದಾನ ಶೈಕ್ಷಣಿಕ ಚಟುವಟಿಕೆಗಳ ಯೋಜನೆಗಳಿಗೆ ಮಂಜೂರಾಗಿರುತ್ತದೆ, ಈ ಸಂಬಂಧ ದಿನಾಂಕ: 05.11.2019 ರಿಂದ 08.11.2019 ಮತ್ತು 03.12.2019 ರಿಂದ 07.12.2019 ರವರೆಗೆ 79 ಕೆಪಿಎಸ್ ಶಾಲೆಗಳ ಮುಖ್ಯಸ್ಥರಿಂದ ಮಾಸ್ಟರ್ ಪ್ಲಾನ್ ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳನ್ನು ರಾಜ್ಯ ಕಚೇರಿಯಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಆಧಾರದ ಮೇರೆಗೆ 79 ಕೆಪಿಎಸ್ ಶಾಲೆಗಳಿಗೆ ತಲಾ ರೂ.10.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
- 2020-21ನೇ ಸಾಲಿನಲ್ಲಿ ಆಯವ್ಯಯ ಘೋಷಣೆಯಂತೆ ವಿನೂತನ ಕಾರ್ಯಕ್ರಮಗಳ ಸಾಲಿನಲ್ಲಿ 50 ಕೆಪಿಎಸ್ ಶಾಲೆಗಳಿಗೆ ತಲಾ ರೂ.2.00 ಕೋಟಿ ಅನುದಾನದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಒಟ್ಟು ರೂ.100.00 ಕೋಟಿ ಅನುದಾನ ಬಿಡುಗಡೆಯಾಗಿದೆ.
- 2021-22ನೇ ಸಾಲಿನಲ್ಲಿ ಇಲಾಖಾವತಿಯಿಂದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮೂಲಭೂತ ಸೌಕರ್ಯಗಳಿಗಾಗಿ 50 ಕೆಪಿಎಸ್ ಶಾಲೆಗಳಿಗೆ ಒಟ್ಟು ರೂ.100.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.
- 2022-23 ಸಾಲಿಗೆ ರಾಜ್ಯ ವಲಯ ಕಾರ್ಯಕ್ರಮದಡಿ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ **ಮೂಲಭೂತ ಸೌಕರ್ಯ** ಒದಗಿಸಲು ಲೆಕ್ಕಶೀರ್ಷಿಕೆ: 4202-01-201-1-06 ರಡಿಯಲ್ಲಿ ರೂ.135.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

| **ಕ್ರ. ಸಂ** | **ಲೆಕ್ಕಶೀರ್ಷಿಕೆ** | **ಬಿಡುಗಡೆಗೊಳಿಸಿರುವ ಅನುದಾನ (ಕೋಟಿಗಳಲ್ಲಿ)** | **ಶಾಲೆಗಳ ಸಂಖ್ಯೆ** | | |
|---|---|---|---|---|---|
| | | | ಸಿವಿಲ್ | ಕಲಿಕಾ ಸಾಮಗ್ರಿ | ಯಂತ್ರೋಪಕರಣಗಳು & ಸಾದನಾ ಸಾಮಗ್ರಿ |
| 1 | 4202-01-201-1-06-133 | ರೂ.50.00 | 82 | - | - |
| 2 | 4202-01-201-1-06-139 | ರೂ.70.00 | 69 | 129 | - |
| 3 | 4202-01-201-1-06-180 | ರೂ.15.00 | - | - | 276 |
| | **ಒಟ್ಟು** | **ರೂ.135.00** | | | |

- 2023-24 ಸಾಲಿಗೆ ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಲ್ಲಿ ಕೆ.ಪಿ.ಎಸ್ ಹೊಂದಿಲ್ಲದ 22 ತಾಲ್ಲೂಕುಗಳಲ್ಲಿ ಹೊಸದಾಗಿ 22 ಕೆ.ಪಿ.ಎಸ್ ಶಾಲೆಗಳನ್ನು ಆರಂಭಿಸುವುದು ಹಾಗೂ ಕಾರ್ಯನಿರ್ವಹಿಸುತ್ತಿರುವ 82 ಕೆ.ಪಿ.ಎಸ್ ಶಾಲೆಗಳಿಗೆ ಕಲಿಕಾ ಸಾಮಗ್ರಿಗಳನ್ನು ಒದಗಿಸುವುದು.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಲೆಕ್ಕಶೀರ್ಷಿಕೆ | ಬಿಡುಗಡೆಗೊಳಿಸಿರುವ ಅನುದಾನ | ಶಾಲೆಗಳ ಸಂಖ್ಯೆ | |
|---|---|---|---|---|
| | | | ಸಿವಿಲ್ | ಕಲಿಕಾ ಸಾಮಗ್ರಿ |
| 1 | 4202-01-201-1-08-132/139/422/423 | 6000.00 | 22 | 104 |

- 2023-24 ಸಾಲಿಗೆ ಆಯವ್ಯಯ ಘೋಷಣೆಯಂತೆ ಕಾರ್ಯನಿರ್ವಹಿಸುತ್ತಿರುವ 69 ಕೆ.ಪಿ.ಎಸ್ ಶಾಲೆಗಳಿಗೆ ಕಲಿಕಾ ಸಾಮಗ್ರಿಗಳು ಹಾಗೂ ಮೂಲಭೂತ ಸೌಕರ್ಯ ಒದಗಿಸುವುದು.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಲೆಕ್ಕಶೀರ್ಷಿಕೆ | ಬಿಡುಗಡೆಗೊಳಿಸಿರುವ ಅನುದಾನ | ಶಾಲೆಗಳ ಸಂಖ್ಯೆ | |
|---|---|---|---|---|
| | | | ಸಿವಿಲ್ | ಕಲಿಕಾ ಸಾಮಗ್ರಿ |
| 1 | 4202-01-201-1-06-139 | 3000.00 | 38 | 69 |

**ವರ್ಷವಾರು ಕೆ.ಪಿ.ಎಸ್ ಶಾಲೆಗಳಿಗೆ ರಾಜ್ಯವಲಯದಿಂದ ಬಿಡುಗಡೆ ಮಾಡಿದ ಅನುದಾನದ ವಿವರ :**

(ಲಕ್ಷಗಳಲ್ಲಿ)

| ಕ್ರ. ಸಂ | ವರ್ಷ | ಅನುದಾನದ ಮೂಲ | ಕೆ.ಪಿ.ಎಸ್ ಗಳ ಸಂಖ್ಯೆ | ಘಟಕ ವೆಚ್ಚ | ಮಂಜೂರಾದ ಅನುದಾನ | ಕೆ.ಪಿ.ಎಸ್ ಗಳ ಸಂಖ್ಯೆ | ಘಟಕ ವೆಚ್ಚ | ಬಿಡುಗಡೆ ಮಾಡಿದ ಅನುದಾನ |
|---|---|---|---|---|---|---|---|---|
| 1 | 2019-20 | ರಾಜ್ಯವಲಯ | 100 | 50.00 | 5000.00 | 79 | 10.00 | 790.00 |

## ಕೆ.ಪಿ.ಎಸ್ ಶಾಲೆಗಳ ಭಾವಚಿತ್ರ



ಕೆ.ಪಿ.ಎಸ್ ಚಂದಕವಾಡಿ – ಚಾಮರಾಜನಗರ



ಕೆ.ಪಿ.ಎಸ್ ಲೊಕ್ಕನಹಳ್ಳಿ–ಚಾಮರಾಜನಗರ

| | |
|---|---|
|  | <br> |
| ಕೆ.ಪಿ.ಎಸ್ ನಾಗವಲ್ಲಿ–ತುಮಕೂರು | ಕೆ.ಪಿ.ಎಸ್ ನಾಪೋಕ್ಲು–ಕೊಡಗು |
|  |  |
| ಕೆ.ಪಿ.ಎಸ್ ವರ್ತೂರು–ಬೆಂಗಳೂರು ದಕ್ಷಿಣ | ಕರ್ನಾಟಕ ಪಬ್ಲಿಕ್ ಶಾಲೆ ಪ್ರೌಢ ವಿಭಾಗ ಜವಳಗೇರಾ–ರಾಯಚೂರು |

## ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣ ಶಾಲಾ ಪೂರ್ವ ಶಿಕ್ಷಣಕ್ಕೆ ಬೆಂಬಲ–2023–24

ಕರ್ನಾಟಕ ರಾಜ್ಯವು 2018–19ನೇ ಸಾಲಿನಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ವಿಭಾಗಗಳನ್ನು ಒಂದುಗೂಡಿಸಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸುವುರೊಂದಿಗೆ ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಪ್ರಯೋಗವನ್ನು ಪ್ರಾರಂಭಿಸಿತು. 2019–20ನೇ ಸಾಲಿನಲ್ಲಿ ಒಂದೇ ಸೂರಿನಡಿ ಪೂರ್ವ ಪ್ರಾಥಮಿಕದಿಂದ ಪದವಿಪೂರ್ವ ಶಿಕ್ಷಣವನ್ನು ಒದಗಿಸುವ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಈ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಎರಡು ವರ್ಷದ ಪೂರ್ವ ಪ್ರಾಥಮಿಕ ವಿಭಾಗಗಳನ್ನು ಪ್ರಾರಂಭಿಸಲಾಗಿದೆ.

**2023–24ನೇ ಸಾಲಿನ ಪೂರ್ವಪ್ರಾಥಮಿಕ ಚಟುವಟಿಕೆಯ ಆಯವ್ಯಯ ವಿವರ**

| **ಚಟುವಟಿಕೆ** | **ಪಿಎಬಿ ಅನುಮೋದನೆ** | | **ಮಾರ್ಚ 30,2024 ರಂತೆ ಸಾಧನೆ** | | ಷರ |
|---|---|---|---|---|---|
| | ಭೌತಿಕ ಸಂಖ್ಯೆ | ಘಟಕ ವೆಚ್ಚ (ಮೊತ್ತ ಲಕ್ಷಗಳಲ್ಲಿ) | ಭೌತಿಕ ಸಂಖ್ಯೆ | ಘಟಕ ವೆಚ್ಚ (ಮೊತ್ತ ಲಕ್ಷಗಳಲ್ಲಿ) | |
| ಹೊಸ ಅನುಮೋದನೆ ( ಶಿಶು ಸ್ನೇಹಿ ಪಿಠೋಪಕರಣ, ಬಾಲಾ ಫಿಚರ್ಸ, ಹೊರಾಂಗಣ | 322 | 286.00 | 322 | 286.00 | |
| ಮಕ್ಕಳಿಗಾಗಿ ಟಿ.ಎಲ್.ಎಮ್. | 22415 | 112.075 | - | - | |

| | | | | | |
|---|---|---|---|---|---|
| ಪೂರ್ವ ಪ್ರಾಥಮಿಕ ತರಗತಿಗಳಿಗೆ ಬೆಂಬಲ (ಹೊಸ) | 507 | 63.375 | - | - | |
| ಪೂರ್ವ ಪ್ರಾಥಮಿಕ ತರಗತಿಗಳಿಗೆ ಬೆಂಬಲ (ಅಸ್ತಿತ್ವದಲ್ಲಿರುವ) | 583 | 378.95 | - | - | |

**2023–24 ನೇ ಸಾಲಿನ ಪ್ರಗತಿ:**

- 2023–24 ನೇ ಸಾಲಿನಲ್ಲಿ 283 ಕೆ.ಪಿ.ಎಸ್ ಗಳ ಎಲ್.ಕೆ.ಜಿ ಮತ್ತು ಯು.ಕೆ.ಜಿ ವಿಭಾಗಗಳಲ್ಲಿ 29858 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು. ಪ್ರವೇಶಕ್ಕೆ ಬೇಡಿಕೆ ಹೆಚ್ಚಾದ್ದರಿಂದ ಹಲವು ಶಾಲೆಗಳು ಲಾಟರಿ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕಾಯಿತು.
- ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ಬೋಧಿಸುತ್ತಿರುವ ಶಿಕ್ಷಕಿಯರಿಗೆ ಬುನಾದಿ ತರಬೇತಿ ನೀಡಲು ಜಿಲ್ಲಾ ಮಟ್ಟದ ಎಮ್.ಆರ್.ಪಿ.ಯವರಿಗೆ ರಾಜ್ಯ ಮಟ್ಟದಲ್ಲಿ 3 ದಿನಗಳ ತರಬೇತಿ ಕಾರ್ಯಾಗಾರವನ್ನು ಕೀ ಎಜುಕೇಷನ್ ಫೌಂಡೇಶನ್ ರವರ ಸಹಯೋಗದೊಂದಿಗೆ ಆನ್‌ಲೈನ ತರಬೇತಿಯನ್ನು ಆಯೋಜಿಸಲಾಯಿತು.
- ಎಸ್.ಡಿ.ಎಂ.ಸಿ ಬೆಂಬಲಿತ 908 ಪೂರ್ವ ಪ್ರಾಥಮಿಕ ವಿಭಾಗಗಳಿಗೆ ಯು.ಕೆ.ಜಿ ವಿಭಾಗಕ್ಕಾಗಿ ಚಿಲಿ–ಪಿಲಿ+ ಪಠ್ಯಕ್ರಮವನ್ನು ಒದಗಿಸಲು ಕ್ರಮವಹಿಸಲಾಯಿತು.

### 1.1 ಕೀ–ಎಜುಕೇಶನ್ ಫೌಂಡೇಶನ್‌ವತಿಯಿಂದ ನಡೆದ CLAP ಕಾರ್ಯಕ್ರಮ

ರಾಜ್ಯದ ಎಲ್ಲಾ 276 ಕೆಪಿಎಸ್ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಈ ವರ್ಷ ಕೀ ಎಜುಕೇಶನ್ ಫೌಂಡೇಶನ್ ಮೂಲಕ CLAP ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಈ ಕಾರ್ಯಕ್ರಮವು ಕೆಪಿಎಸ್ ಪೂರ್ವ ಪ್ರಾಥಮಿಕ ಮಕ್ಕಳು ಮತ್ತು ಅವರ ಪೋಷಕರಿಗಾಗಿ ಆಯೋಜಿಸಲಾಗಿದೆ.

ಬೆಂಗಳೂರಿನ ಕೀ ಎಜುಕೇಶನ್ ಫೌಂಡೇಶನ್ ವತಿಯಿಂದ CLAP ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವು ಪೋಷಕರಿಗೆ ತಮ್ಮ ಮಕ್ಕಳಿಗೆ ಕಲಿಕೆಯಲ್ಲಿ ಸಹಾಯ ಮಾಡಲು ಪ್ರೋತ್ಸಾಹಿಸುತ್ತದೆ. ಈ ಕಾರ್ಯಕ್ರಮವು ಆಫ್‌ಲೈನ್ ಮತ್ತು ಆನ್‌ಲೈನ್ ಮೋಡ್‌ನಲ್ಲಿ ಮೂರು ಭಾಷೆಗಳಲ್ಲಿ ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಲಭ್ಯವಿದೆ. ಈ ಕಾರ್ಯಕ್ರಮವನ್ನು ವಾಟ್ಸಾಪ್ ಗ್ರೂಪ್‌ಗಳಲ್ಲಿ ಲಭ್ಯವಾಗುವಂತೆ ಸಿದ್ದಪಡಿಸಿದೆ.

ಕಾರ್ಯಕ್ರಮದ ಸ್ವರೂಪ; ಚಿಟಿಜಚಿಡಿಥಿಚಿ

- KPS ನ ಪೋಷಕರಿಗೆ CLAP ತರಬೇತಿ ಕಾರ್ಯಕ್ರಮವು ಉಚಿತವಾಗಿದೆ.
- ಈ ಕಾರ್ಯಕ್ರಮದ ಮೂಲಕ ಪೋಷಕರು ತಮ್ಮ ಮಗುವಿನ ದೈನಂದಿನ ಚಟುವಟಿಕೆಗಳ ಬಗ್ಗೆ ಅರಿವು ದೊರೆಯಲು ಸಹಕರಿಸಿದೆ.
- ಈ ಕಾರ್ಯಕ್ರಮದ ಮೂಲಕ ಪೋಷಕರು ತಮ್ಮ ಮಕ್ಕಳಿಗೆ ಸಹಾಯ ಮಾಡಲು ಅವಕಾಶವನ್ನು ಪಡೆದರು ಹಾಗೂ ಈ ರೀತಿಯಲ್ಲಿ ಅವರು ತಮ್ಮ ಮಕ್ಕಳೊಂದಿಗೆ ಉತ್ತಮವಾಗಿ ಸಂಪರ್ಕ ಸಾಧಿಸಲು ಮತ್ತು ಅವರ ಮಕ್ಕಳು ಮಾಡಿದ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು.

- CLAP ಕಾರ್ಯಕ್ರಮದ ಸಹಾಯದಿಂದ ಪೋಷಕರು ತಮ್ಮ ಮಗುವಿಗೆ ವರ್ಕ್‌ಶೀಟ್/ಚಟುವಟಿಕೆಯನ್ನು ಪೂರ್ಣಗೊಳಿಸುವಲ್ಲಿ ಸಹಾಯ ಮಾಡಲು ಮತ್ತು ಅದನ್ನು ಶಿಕ್ಷಕರಿಗೆ ಹಿಂತಿರುಗಿಸಲು ಸಾಧ್ಯವಾಯಿತು.
- CLAP ಕಾರ್ಯಕ್ರಮವನ್ನು ಜಿಲ್ಲೆಗಳಲ್ಲಿ ಎಪಿಸಿಯವರು ಹಾಗೂ ಡಯಟ್ ಒಬ್ಬ ಉಪನ್ಯಾಸಕರು ಮೇಲ್ವಿಚಾರಣೆ ಮಾಡಿದರು.

ವಿದ್ಯಾರ್ಥಿಗಳು ವರ್ಕ್‌ಶೀಟ್/ಚಟುವಟಿಕೆಗಳನ್ನು ಪೂರ್ಣಗೊಳಿಸಿದ ನಂತರ ತಮ್ಮ ತರಗತಿಯ ಶಿಕ್ಷಕರಿಗೆ ವರ್ಕ್‌ಶೀಟ್/ಚಟುವಟಿಕೆಗಳನ್ನು ಹಿಂತಿರುಗಿಸಿದರು. ಸದರಿ ವರ್ಕ್‌ಶೀಟ್ ಸಲ್ಲಿಸಿದ ವಿದ್ಯಾರ್ಥಿಗಳ ಹೆಸರುಗಳನ್ನು ಕೆಪಿಎಸ್ ಶಾಲೆಯ ಶಿಕ್ಷಕರು ಕೀ ಎಜುಕೇಶನ್ ಫೌಂಡೇಶನ್ ವತಿಯಿಂದ ನೀಡಲಾದ ಟ್ರ್ಯಾಕರ್‌ನಲ್ಲಿ ನಮೂದಿಸಿದ್ದಾರೆ. ಈ ವರ್ಕ್‌ಶೀಟ್ ಟ್ರ್ಯಾಕರ್ ಮಗುವಿನ ಕಾರ್ಯಕ್ಷಮತೆಯನ್ನು ತಿಳಿಸುವಲ್ಲಿ ನಮಗೆ ಸಹಾಯ ಮಾಡಿತು.



# <u>ಕರ್ನಾಟಕದಲ್ಲಿ ವೃತ್ತಿ ಶಿಕ್ಷಣ</u>

2025 ರ ಒಳಗಾಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಶೇಕಡ 50% ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ಕುರಿತು ಅರಿವು ಮೂಡಿಸಬೇಕು. ಹಾಗೂ ವೃತ್ತಿ ಶಿಕ್ಷಣವನ್ನು ಶಾಲಾ ಪಠ್ಯಕ್ರಮದಲ್ಲಿ ಸಮ್ಮಿಲನಗೊಳಿಸಿರಬೇಕು ಎಂಬುದು ಎನ್‌ಇಪಿ 2020ರ ಆಶಯ.









# <u>ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು (ಎನ್.ಎಸ್.ಕ್ಯೂ.ಎಫ್)</u>

**ಹಿನ್ನಲೆ:**

ಶಾಲಾ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣವನ್ನು ಆಳವಡಿಸಿರುವ ಮುಖ್ಯ ಉದ್ದೇಶ ಯುವಜನತೆಯಲ್ಲಿ ಸಾಮರ್ಥ್ಯಧಾರಿತ ಕೌಶಲ್ಯ ಅಭಿವೃದ್ಧಿಯನ್ನು ಅವಶ್ಯಕತೆಗೆ ಅನುಗುಣವಾಗಿ ರೂಪಿಸುವುದಲ್ಲದೆ ಶಾಲೆಯನ್ನು ತೊರೆಯುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತಾ ಅವರಿಗೆ ಹೆಚ್ಚಿನ ಔದ್ಯೋಗಿಕ ಅವಕಾಶಗಳನ್ನು ನೀಡುವುದೇ ಆಗಿದೆ.

ಶಾಲಾ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣವನ್ನು ಅಳವಡಿಸಲು ಕೇಂದ್ರ ಸರ್ಕಾರವು ಸೆಪ್ಟೆಂಬರ್–2011 ರಂದು ಅನುಮೋದನೆಯನ್ನು ನೀಡಿದ್ದು, ಈ ಆದೇಶವನ್ನು ದಿನಾಂಕ:12–02–2014 ರಂದು ಮತ್ತೊಮ್ಮೆ ಪರಿಷ್ಕರಿಸಿ ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು ಎಂದು ಪದನಾಮೀಕರಿಸಿ ಆದೇಶಿಸಿದೆ. ಈ ಯೋಜನೆಯು ರಾಷ್ಟ್ರದ ಎಲ್ಲಾ ಶಾಲೆಗಳಲ್ಲಿ 09ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆವಿಗೂ ಹಲವಾರು ಹಂತಗಳಲ್ಲಿ ಹರಡಿದೆ.

ಈ ಪರಿಷ್ಕೃತ ಯೋಜನೆಯು ಪ್ರೌಢಶಾಲಾ ಹಂತದಲ್ಲಿ ವೃತ್ತಿ ಶಿಕ್ಷಣವನ್ನು ನೀಡುವುದಲ್ಲದೆ ಈ ವೃತ್ತಿ ಶಿಕ್ಷಣವನ್ನು ಸಾಮಾನ್ಯ ಶಿಕ್ಷಣದಲ್ಲಿ ಅಳವಡಿಸಿ ವಿದ್ಯಾರ್ಥಿಗಳಿಗೆ ಸಮತಲ ಹಾಗೂ ಲಂಬ ಚಲನಶೀಲತೆಯನ್ನು ವೃದ್ಧಿಸಲು ಸಹಕರಿಸುತ್ತದೆ. ಈ ಯೋಜನೆಯು ಕೈಗಾರಿಕೆಗಳು ಹಾಗೂ ಕೌಶಲ್ಯಗಳ ನಡುವೆ ಸಂಬಂಧೀಕರಿಸುವುದಲ್ಲದೆ ಇದರ ರೂಪುರೇಷೆಗಳನ್ನು ರೂಪಿಸುತ್ತಾ ಕೌಶಲ್ಯಗಳೊಂದಿಗೆ ಜಂಟಿ ಪ್ರಮಾಣೀಕರಿಸುತ್ತದೆ.

ಕೌಶಲ್ಯಾಭಿವೃದ್ಧಿಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದ್ದು ಪ್ರಧಾನ ಮಂತ್ರಿಯವರ ವೃತ್ತಿಕೌಶಲ್ಯ ಮಿಷನ್‌ನ್ನು ಅನುಷ್ಠಾನಗೊಳಿಸುವಲ್ಲಿ ಪ್ರಥಮ ಸ್ಥಾನದಲ್ಲಿದೆ.ಎನ್.ಎಸ್.ಕ್ಯೂ.ಎಫ್‌ಯೋಜನೆಯನ್ನು ಹಾಲಿ 375 ಸರ್ಕಾರಿ ಶಾಲೆ/ ಪದವಿ ಪೂರ್ವ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**ವಿಷಯಗಳು:**

1. ಕರ್ನಾಟಕ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸ್ವಯಂ ಆಸಕ್ತಿಯಿಂದ ಆಯ್ಕೆ ಮಾಡುವ ಕೋರ್ಸ್ ಇದಾಗಿರುತ್ತದೆ.
2. ಈ ವಿಷಯವನ್ನು ವ್ಯಾಸಂಗ ಮಾಡುವ 9 ಮತ್ತು 10 ನೇ ತರಗತಿ ವಿದ್ಯಾರ್ಥಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ: G.O:ED.59.MCD.2016, Dated:16-06-2016ರನ್ವಯ ತೃತೀಯ ಭಾಷೆ ಅಧ್ಯಯನದಿಂದ ವಿನಾಯಿತಿ
3. 11 ಮತ್ತು 12ನೇ ತರಗತಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಇದೇ ಆದೇಶದನ್ವಯ ಯಾವುದಾದರು ಒಂದು ಭಾಷೆಯ ಅಧ್ಯಯನದಿಂದ ವಿನಾಯಿತಿ ಇದೆ.
4. ತಾತ್ವಿಕ ಪರೀಕ್ಷೆಯನ್ನು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಹಾಗೂ ಪದವಿ ಪೂರ್ವ ಶಿಕ್ಷಣ ಮಂಡಳಿಗಳು ನಡೆಸುತ್ತವೆ.
5. ಪ್ರಾಯೋಗಿಕಾ ಪರೀಕ್ಷೆಗಳನ್ನು ಆಯಾ ಸೆಕ್ಟಾರ್ ಸ್ಕಿಲ್ ಕೌನ್ಸಿಲ್ ಹಾಗೂ ಸಂಬಂಧಿಸಿದ ಮಂಡಳಿಗಳು ಜಂಟಿಯಾಗಿ ನಡೆಸುತ್ತವೆ.
6. ಈ ಸಂಬಂಧ ವಿದ್ಯಾರ್ಥಿಗಳಿಗೆ ಜಂಟಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತದೆ.

- 2020–21 ಸಾಲಿನಿಂದ 2023–24ನೇ ಸಾಲಿನ ವರಗೆ ದಾಖಲಾತಿ: ಸೆಕ್ಟಾರ್‌ವಾರು ದಾಖಲಾತಿ ವಿವರ ಈ ಕೆಳಕಂಡಂತಿದೆ.

| Sl. No | Sector | 2020-21 | 2021-22 | 2022-23 | 2023-24 |
|---|---|---|---|---|---|
| 1 | IT / ITEs | 7265 | 8205 | 8285 | 9036 |
| 2 | Automobile | 5467 | 5069 | 7194 | 8936 |
| 3 | Health Care | 548 | - | - | - |
| 4 | Beauty & Wellness | 2634 | 2993 | 3695 | 5462 |
| 5 | Retail | 700 | 796 | 772 | 1027 |
| 6 | Electronics | - | - | 649 | 1513 |
| 7 | Apparels & Made ups | - | - | 632 | 1307 |
| | **TOTAL** | **16614** | **17063** | **21227** | **27281** |

- **ತರಬೇತುದಾರರ ವಿವರಗಳು 2023–24**

| Sl. No | Sector | No of Sectors |
|---|---|---|
| 01 | IT / ITES | 125 |
| 02 | Automobile | 138 |
| 03 | Beauty & Wellness | 75 |
| 04 | Retail | 17 |
| 05 | Electronics and Hardware | 29 |
| 06 | Apparels made-ups and home furnishing | 26 |
| | **Total** | **465** |

- **10 ಮತ್ತು 12ನೇ ತರಗತಿಯ ವರ್ಷವಾರು ಫಲಿತಾಂಶದ ವಿವರ:**

| Sl. No | Sector | 2020-21 | | 2021-22 | | 2022-23 | | 2023-24 | |
|---|---|---|---|---|---|---|---|---|---|
| | | 10th std | 12th std | 10th std | 12th std | 10th std | 12th std | 10th std | 12th std |
| 1 | IT / ITEs | 2403 | 885 | 2490 | 1216 | 2469 | 1330 | 2498 | 1608 |
| 2 | Automobile | 1851 | 689 | 1989 | 748 | 1493 | 1102 | 2728 | 935 |
| 3 | Electronics | 0 | 0 | 0 | 0 | 0 | 0 | 592 | 0 |
| 4 | Beauty & Wellness | 823 | 263 | 995 | 775 | 1004 | 419 | 1744 | 599 |
| 5 | Retail | 258 | 89 | 243 | 95 | 204 | 125 | 345 | 101 |
| 6 | Apparel & Home Made up | 0 | 0 | 0 | 0 | 0 | 0 | 547 | 0 |
| **TOTAL** | | **5335** | **2474** | **5717** | **2834** | **5170** | **2976** | **8454** | **3243** |

**1. NSDC VTPs ಯವರೊಂದಿಗೆ ಕರಾರು ಒಪ್ಪಂದ**

ಎನ್.ಎಸ್.ಕ್ಯೂ.ಎಫ್ ಯೋಜನೆಯನ್ನು ಅನುಷ್ಠಾನ ಮಾಡಿರುವ ಶಾಲೆಗಳಿಗೆ ಮಾನವ ಸಂಪನ್ಮೂಲ ಒದಗಿಸಲು ಹಾಗೂ ಇತರೆ ಸೇವೆಗಳಾದ ಅತಿಥಿ ಉಪನ್ಯಾಸ, ಕ್ಷೇತ್ರ ಸಂದರ್ಶನ, Internship, Apprenticeship ಸಂಬಂಧ ಈ ಕೆಳಕಂಡ NSDC VTPs ರವರೊಂದಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.

| Sl. No | Sector | TOTAL | Name of the VTP |
|---|---|---|---|
| 1 | Automobile | 152 | M/s Quesscorp Ltd, Bangalore |
| 2 | Beauty & Wellness | 100 | M/s Skill tree Pvt Ltd |
| 3 | Information Technology | 125 | M/s Quesscorp Ltd, Bangalore |
| 4 | Retail | 17 | M/s Quesscorp Ltd, Bangalore |
| 5 | Electronics and Hardware | 31 | M/s Quesscorp Ltd, Bangalore |
| 6 | Apparels and Home Furnishing | 40 | M/s Quesscorp Ltd, Bangalore |
| **TOTAL** | | **465** | |

**2. ಯೋಜನಾ ಅನುಮೋದನಾ ಸಮಿತಿಯ ಅನುಮೋದನೆ:**

ಪಿ.ಎ.ಬಿಯು 2023–24ನೇ ಸಾಲಿಗೆ ಎನ್.ಎಸ್.ಕ್ಯೂ.ಎಫ್ ಯೋಜನೆಯ ಅನುಷ್ಠಾನಕ್ಕೆ ಈ ಕೆಳಕಂಡಂತೆ ಅನುಮೋದನೆಯನ್ನು ನೀಡಿರುತ್ತದೆ.

| **ACTIVITY WISE PROPOSAL & APPROVAL FOR THE YEAR 2023-24 - NSQF** | | | | | | | |
|---|---|---|---|---|---|---|---|
| **Sl. No** | **Activity** | **Proposal** | | | **Final Approved Out Lay(in Lakhs)** | | |
| | | **Unit cost** | **Phy** | **Fin** | **Unit cost** | **Phy** | **Fin** |
| | **NON RECURRING** | | | | | | |
| 1 | Tools & Equipments (New schools) | 5.00 | 116 | 580.00 | 5.37 | 108 | 579.96 |
| 2. | Construction of Lab-cum-classroom-NR | 28.90 | 16 | 462.40 | 56.00 | 8 | 448.00 |
| | **TOTAL FOR NON RECURRING** | | | | **1042.4** | | **1027.00** |
| | **RECURRING FOR NEW SCHOOLS** | | | | | | |
| 1 | Financial Support for Vocational Teacher/ Trainer (New) | 3.00 | 573 | 1719.00 | 2.887 | 573 | 1654.251 |
| 2 | Financial Support for Resource Persons (New) | 1.68 | 375 | 630.00 | 1.40 | 375 | 525.00 |

| | | | | | | | |
|---|---|---|---|---|---|---|---|
| 3 | Raw material grant for new school per course (New) | 1.50 | 375 | 562.50 | 1.50 | 375 | 562.50 |
| 4 | Cost of providing Hands Training Students (New) | 1.25 | 375 | 468.75 | 1.25 | 375 | 468.75 |
| 5 | Assessment and Certification Cost (New) | 0.006 | 15158 | 90.948 | 0.006 | 15158 | 90.948 |
| 6 | Office Expenses / Contingencies for School (New) | 1.50 | 375 | 562.50 | 1.40 | 375 | 525.00 |
| 7 | Induction training of VE - Teachers (10 Days) - (New) | 0.05 | 58 | 2.90 | 0.05 | 58 | 2.90 |
| 8 | In-service Training of VE - Teachers (5 Days) - (New) | 0.10 | 515 | 51.50 | 0.10 | 515 | 51.50 |
| 9 | Recurring Support to Hub and Spoke Model | 5.00 | 9 | 45.00 | 2.50 | 9 | 22.50 |
| 10 | Transportation to Hub schools from Spoke @Rs. 3000/- per student. | 0.03 | 900 | 27.00 | 0.03 | 900 | 27.00 |
| | **TOTAL RECURRING FOR NEW SCHOOLS** | **14.116** | **18713** | **4160.098** | **11.123** | **18713** | **3930.349** |
| | **RECURRING FOR EXISTING SCHOOLS** | | | | | | |
| 1 | Financial Support for Vocational Teacher/ Trainer (Existing) | 3.00 | 573 | 1719.00 | 2.887 | 573 | 1654.251 |
| 2 | Financial Support for Resource Persons (Existing) | 1.68 | 375 | 630.00 | 1.40 | 375 | 525.00 |
| 3 | Raw material grant for new school per course (Existing) | 1.50 | 375 | 562.50 | 1.50 | 375 | 562.50 |
| 4 | Cost of providing Hands Training Students (Existing) | 1.25 | 375 | 468.75 | 1.25 | 375 | 468.75 |
| 5 | Assessment and Certification Cost (Existing) | 0.006 | 15158 | 90.948 | 0.006 | 15158 | 90.9480 |
| 6 | Office Expenses / Contingencies for School (Existing) | 1.50 | 375 | 562.50 | 1.40 | 375 | 525.00 |

| | | | | | | | |
|---|---|---|---|---|---|---|---|
| 7 | Induction training of VE - Teachers (10 Days) - (Existing) | 0.05 | 58 | 2.90 | 0.05 | 58 | 2.90 |
| 8 | In-service Training of VE - Teachers (5 Days) - (Existing) | 0.10 | 515 | 51.50 | 0.10 | 515 | 51.50 |
| 9 | Recurring Support for Hub and Spoke schools(Previous) | 5.00 | 9 | 45.00 | 2.50 | 9 | 22.50 |
| 10 | Transportation Allowance for children from spoke to Hub School(Previous) | 0.03 | 900 | 27.00 | 0.03 | 900 | 27.00 |
| | **TOTAL RECURRING FOR EXISTING SCHOOLS** | **14.116** | **18713** | **4160.098** | **11.123** | **18713** | **3930.349** |

## 8. ಶಾಲೆಗಳಿಗೆ ಹಣ ಬಿಡುಗಡೆ:

NSQF ಅಡಿಯಲ್ಲಿ ಶಾಲಾ ಮಟ್ಟದಲ್ಲಿ ವಿವಿಧ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು 2023-24 ನೇ ಸಾಲಿಗೆ 1043.45 ಲಕ್ಷ ರೂ.ಗಳನ್ನು ಶಾಲೆಗಳಿಗೆ ಬಿಡುಗಡೆ ಮಾಡಲಾಗಿದೆ.ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು 2023-24 ನೇ ಸಾಲಿಗೆ 1043.45 ಲಕ್ಷ ರೂ.ಗಳನ್ನು ಶಾಲೆಗಳಿಗೆ ಬಿಡುಗಡೆ ಮಾಡಲಾಗಿದೆ.

1. ಶಾಲೆಗಳಲ್ಲಿ ಪ್ರೇರಣೆ ಶಿಬಿರಗಳು:

   ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣದ ಮಹತ್ವವನ್ನು ಮನವರಿಕೆ ಮಾಡಿಕೊಡಲು ಮತ್ತು ವೃತ್ತಿಪರ ಶಿಕ್ಷಣವನ್ನು ತೆಗೆದುಕೊಳ್ಳಲು ಪ್ರೇರೇಪಿಸಲು, ಶೈಕ್ಷಣಿಕ ವರ್ಷದ ಆರಂಭದಲ್ಲಿ ತರಬೇತುದಾರರು ತಮ್ಮ ಶಾಲೆಗಳಲ್ಲಿ ನಡೆಸುವ ಮೊದಲ ಚಟುವಟಿಕೆಯಾಗಿದೆ.





2. ತರಬೇತುದಾರರ ತರಬೇತಿ

## ಇಂಡಕ್ಷನ್ ತರಬೇತಿ:

ಸಾಮರ್ಥ್ಯ ನಿರ್ಮಾಣ ಚಟುವಟಿಕೆಯ ಭಾಗವಾಗಿ ತರಬೇತುದಾರರಿಗೆ ಇಂಡಕ್ಷನ್ ತರಬೇತಿಯನ್ನು ಆಯೋಜಿಸಲಾಗಿತು TOT ಅನ್ನು 3 ಬ್ಯಾಚ್‌ಗಳಲ್ಲಿ ನಡೆಸಲಾಯಿತು. ವೃತ್ತಿಪರ ಶಿಕ್ಷಣ/NSQF, ವೊಕೇಶನಲ್ ಪೆಡಾಗೋಜಿ, VE ಅಡಿಯಲ್ಲಿ ವಿವಿಧ ಚಟುವಟಿಕೆಗಳು, ದಾಖಲಾತಿ, ತರಗತಿಯ ಸಂವಹನ ಕೌಶಲ್ಯ ಇತ್ಯಾದಿಗಳ ಪರಿಚಯದ ಕುರಿತು VT ಯ ಸೆಷನ್‌ಗಳಿಗೆ ಹಾಜರಾದರು. TOT ಅನ್ನು ಬೆಂಗಳೂರಿನ ಸೇಂಟ್ ಜೋಸೆಫ್ ಸಮುದಾಯ ಕಾಲೇಜಿನಲ್ಲಿ ನಡೆಸಲಾಯಿತು.

ಮಿದುಳುದಾಳಿ, ಸಂವಾದಾತ್ಮಕ ಚರ್ಚೆಗಳು, ಅನುಭವ ಹಂಚಿಕೆ, ರೋಲ್ ಪ್ಲೇಯಿಂಗ್, ಕೇಸ್ ಸ್ಟಡೀಸ್ ಹಂಚಿಕೆ, ಗುಂಪು ಚಟುವಟಿಕೆಗಳು ಮತ್ತು ಭಾಗವಹಿಸುವವರ ಗುಂಪು ಪ್ರಸ್ತುತಿಗಳನ್ನು ಒಳಗೊಂಡಿರುವ ಮಿಶ್ರ ತರಬೇತಿ ವಿಧಾನವನ್ನು ಅನುಸರಿಸಲಾಯಿತು. ಆಸಕ್ತಿ ಮತ್ತು ಸಕ್ರಿಯ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಸೆಷನ್‌ಗಳನ್ನು ಸಂವಾದಾತ್ಮಕ ಆಯೋಜಿಸಲಾಗಿತು

**ತರಬೇತುದಾರರಿಗೆ ತರಬೇತಿಗಳು**







ತರಬೇತುದಾರರಿಗೆ Soft Skills ಗಳ ಬಗ್ಗೆ ತರಬೇತಿಯನ್ನು "MACMILLAN PUBLISHERS INDIA PRIVATE LIMITED". ರವರಿಂದ ಏರ್ಪಡಿಸಲಾಗಿದ್ದು ಈ ಕಾರ್ಯಕ್ಕಾಗಿ Karnataka State Skill Development Corporation ಸಹಕರಿಸಿರುತ್ತಾರೆ. ಈ ತರಬೇತಿಯಲ್ಲಿ 21st century skills ಗಳ ಬಗ್ಗೆ ತಿಳಿಸಲಾಯಿತು.

ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣದ ಬಗ್ಗೆ ಅರಿವು ಮೂಡಿಸಲು Project Innovation ಕಾರ್ಯಕ್ರಮ ಹಮ್ಮಿ ಕೊಳ್ಳಲಾಯಿತು.










**ಕೆ.ಕೆ.ಆರ್.ಡಿ.ಬಿ ಯೋಜನೆ** : ಕಲ್ಯಾಣ ಕರ್ನಾಟಕ ಮಂಡಳಿಯು ಆ ವಲಯದ 306 ಶಾಲೆಗಳಲ್ಲಿ ವೃತ್ತಿ ಶಿಕ್ಷಣ ನೀಡಲು ಮುಂದಾಗಿದ್ದು ಅಕ್ಷರ ಆವಿಷ್ಕಾರ ಕಾರ್ಯಕ್ರಮದ ಅಡಿಯಲ್ಲಿ ಶಾಲೆಗಳನ್ನು ಈಗಾಗಲೇ ಗುರುತಿಸಿದ್ದು ಸೆಕ್ಟಾರ್ಗಳನ್ನು ಮ್ಯಾಪ್ ಮಾಡಲಾಗಿದೆ.

**ಸ್ಕಿಲ್ ಹಬ್ಬ್ ಮತ್ತು ಸ್ಪೋಕ್:** 2023–24 ನೇ ಸಾಲಿಗೆ 9 ಶಾಲೆಗಳನ್ನು ಹಬ್ಬ ಮತ್ತು ಸ್ಪೋಕ್ ಮಾದರಿ ಶಾಲೆಗಳನ್ನಾಗಿ ಆಯ್ಕೆ ಮಾಡಲಾಗಿದೆ.

**ಅನುಪಾಲನಾ ತಂತ್ರ:** ಶಾಲಾ ಹಂತ, ಜಿಲ್ಲಾ ಹಂತ, ಮತ್ತು ರಾಜ್ಯ ಹಂತ ದಲ್ಲಿ ಭೇಟಿಗಳ ಅನುಪಾಲನೆ ಅರಿಯಲು online format ಮೂಲಕ ಮಾಹಿತಿ ಪಡೆದಿದ್ದು ಇದು ಎಲ್ಲಾ ಹಂತದ ಅಧಿಕಾರಿಗಳಿಗೆ feedback ನೀಡಲು ಸಹಕರಿಸುವುದಲ್ಲದೇ ಅಂತಿಮವಾಗಿ ಶಾಲಾ ಹಂತದ ವರೆವಿಗೂ ಗುಣಾತ್ಮಕ ಅನುಪಾಲನೆ ನೀಡಲು ಸಹಕರಿಸುತ್ತದೆ.

**ಕ್ಷೇತ್ರ ಭೇಟಿ ಮತ್ತು ಅತಿಥಿ ಉಪನ್ಯಾಸ ಚಟುವಟಿಕೆಗಳು:** ವಿದ್ಯಾರ್ಥಿಗಳಲ್ಲಿ ವೃತ್ತಿ ಶಿಕ್ಷಣದಲ್ಲಿ ಆಸಕ್ತಿ, ಹಾಗೂ ಅವರಲ್ಲಿ ಸಂತಸದಾಯಕ ಕಲಿಕೆಯನ್ನು ವೃದ್ದಿಸಲು ಕ್ಷೇತ್ರ ಭೇಟಿ ಮತ್ತು ಅತಿಥಿ ಉಪನ್ಯಾಸ ಕೈಗೊಳ್ಳುವುದು.







## 8 ಇಂಟರ್ನ್‌ಶಿಪ್:

ಇಂಟರ್ನ್‌ಶಿಪ್ ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟಿನ (NSQF) ಅತ್ಯಗತ್ಯ ಲಕ್ಷಣವಾಗಿದೆ. ಕಲಿಕೆಯ ಪ್ರಪಂಚ ಮತ್ತು ಕೆಲಸದ ಪ್ರಪಂಚದ ನಡುವಿನ ಅಂತರವನ್ನು ಕಡಿಮೆ ಮಾಡುವಲ್ಲಿ ಇಂಟರ್ನ್ಶಿಪ್ ಪ್ರಮುಖವಾಗಿದೆ ಎಂದು ಸಾಬೀತಾಗಿದೆ. ಆಯ್ದ ಸಂಸ್ಥೆಗಳಲ್ಲಿ ನೈಜ-ಸಮಯದ ಪರಿಸರದಲ್ಲಿ ಕೆಲಸ ಮಾಡಲು ಇದು ವಿದ್ಯಾರ್ಥಿಗಳಿಗೆ ಅಲ್ಪಾವಧಿಯಲಿ , ನೀಡಿದೆ. ಎಲ್ಲಾ ಹೈಯರ್ ಸೆಕೆಂಡರಿ ಶಾಲೆಗಳ ವೃತ್ತಿಪರ ವಿದ್ಯಾರ್ಥಿಗಳಿಗೆ ತಮ್ಮ ರಜಾದಿನಗಳಲ್ಲಿ ವಿವಿಧ ಸಂಸ್ಥೆಗಳಲ್ಲಿ 100 ಗಂಟೆಗಳ ಇಂಟರ್ನ್ಶಿಪ್ ಮಾಡಲು ಪ್ರೋತ್ಸಾಹಿಸಲಾಯಿತು. ವಿವಿಧ ವಲಯಗಳ 498 ವಿದ್ಯಾರ್ಥಿಗಳು 100 ಗಂಟೆಗಳ ಇಂಟರ್ನ್ಶಿಪ್ಗಳನ್ನು ಪೂರ್ಣಗೊಳಿಸಿದ್ದಾರೆ.



**Puc 1st year student from GJC Doddaballapur at Car Doctors during his internship under fixing tire.**




**GPUC for girls, Malleshwaram:Beauty and welness students at Lakme Salon learning hair styles during their internship**



9. ಅಪ್ರಾನ್‌ಗಳ ಪೂರೈಕೆ:

ಹಿಂದಿನ ವರ್ಷದಲ್ಲಿ NSQF ಅಡಿಯಲ್ಲಿ ಮತ್ತೊಂದು ನವೀನ ಚಟುವಟಿಕೆಯು NSQF ಅನ್ನು ಪರಿಶೀಲಿಸುವ ಎಲ್ಲಾ ಮಕ್ಕಳಿಗೆ ಅಪ್ರಾನ್‌ಗಳ ಪೂರೈಕೆಯಾಗಿದೆ.



**NSQF - IT/ITeS Sector Aprons**



**NSQF – Automobile sector Aprons**



**NSQF- Beauty & wellness Sector Aprons**



**NSQF- Retail Sector Aprons**

10. ಶೈಕ್ಷಣಿಕ ಕೋಶದ ಸಂವಿಧಾನ:

ಸಮಗ್ರ ಶಿಕ್ಷಾ-ಕರ್ನಾಟಕದಲ್ಲಿ ರಾಜ್ಯ ಸಲಹಾ ಸಮಿತಿ ಮತ್ತು ಶೈಕ್ಷಣಿಕ ಕೋಶವನ್ನು ರಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದಿಂದ ಸರ್ಕಾರಿ ಆದೇಶ ಹೊರಡಿಸಲಾಗಿದೆ. ರಾಜ್ಯ ಯೋಜನಾ ನಿರ್ದೇಶಕರ ನೇತೃತ್ವದ ಸಮಿತಿಯು ಎನ್‌ಎಸ್‌ಡಿಸಿ/ಕೆವಿಟಿಎಸ್‌ಡಿಸಿ ಸದಸ್ಯರು, ಕೌಶಲಾಭಿವೃದ್ಧಿ ಕ್ಷೇತ್ರದ ಗಣ್ಯ ವ್ಯಕ್ತಿಗಳು ಮತ್ತು ವಿವಿಧ ಹಂತದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಇಲಾಖೆ ಅಧಿಕಾರಿಗಳನ್ನು ಹೊಂದಿದೆ.

11. ಚಕ್ರದಲ್ಲಿ ಕೌಶಲ್ಯ-

ಸಮಗ್ರ ಶಿಕ್ಷಾ ಕರ್ನಾಟಕ ಜೊತೆಗೆ ಲೆಂಡ್-ಎ-ಹ್ಯಾಂಡ್-ಇಂಡಿಯಾ ಸಂಘಟಿತ SOW ಚಟುವಟಿಕೆಗಳು ಕರ್ನಾಟಕದಲ್ಲಿ ವೃತ್ತಿಪರ ಶಿಕ್ಷಣ ಅಳವಡಿಸಿದ ಶಾಲೆಗಳಲ್ಲಿ. ಶಾಲೆಗಳು,

ಸಮುದಾಯಗಳು, ಪೋಷಕರಲ್ಲಿ ಕೌಶಲ್ಯ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ವೃತ್ತಿಪರ ಶಿಕ್ಷಣದ ಬಗ್ಗೆ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ.

ವಿದ್ಯಾರ್ಥಿಗಳನ್ನು 6 ಗುಂಪುಗಳಾಗಿ ವಿಂಗಡಿಸಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕೌಶಲ್ಯ ಪ್ರದರ್ಶನವನ್ನು ನಡೆಸಲಾಯಿತು. SOW ಕಾರ್ಯಕ್ರಮದ ಗ್ಲಿಂಪ್ಸ್ ನೀಡಲಾಗಿದೆ










# ಐಸಿಟಿ & ಡಿಜಿಟಲ್ ಇನಿಶಿಯೇಟೀವ್ಸ್

ಕರ್ನಾಟಕವು ಐಸಿಟಿ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಿದೆ ಮತ್ತು ಎಲ್ಲಾ ತಂತ್ರಜ್ಞಾನ ಆಧಾರಿತ ಕಾರ್ಯಕ್ರಮಗಳನ್ನು ತಂತ್ರಜ್ಞಾನ ಆಧಾರಿತ ಕಲಿಕೆ ಕಾರ್ಯಕ್ರಮ (ಟೆಕ್ನಾಲಜಿ ಅಸಿಸ್ಟೆಡ್ ಲರ್ನಿಂಗ್ ಪ್ರೋಗ್ರಾಂ–ಟಿಎಎಲ್‌ಪಿ)ದ ಅಡಿಯಲ್ಲಿ ಸಂಯೋಜಿಸಿದೆ. ಎಜುಸ್ಯಾಟ್, ಎಸ್‌ಎಸ್‌ಕೆ ಅಡಿಯಲ್ಲಿರುವ ಕಂಪ್ಯೂಟರ್ ಅಸಿಸ್ಟೆಡ್ ಕಲಿಕಾ ಕೇಂದ್ರಗಳು, ರೇಡಿಯೋ ಕಾರ್ಯಕ್ರಮಗಳು ಮತ್ತು ಕರ್ನಾಟಕದ ಐಟಿ @ ಶಾಲೆಗಳನ್ನು TALP ಒಳಗೊಂಡಿದೆ. 2016–17 ನೇ ಸಾಲಿನಿಂದ ರಾಜ್ಯವು ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ತಂತ್ರಜ್ಞಾನ ಆಧಾರಿತ ಕಲಿಕಾ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. 2022–23 ನೇ ಸಾಲಿನಲ್ಲಿ ಪಿಎಬಿಯು 1631 ಸ.ಹಿ.ಪ್ರಾ. ಶಾಲೆಗಳಿಗೆ ಮತ್ತು 137 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸ್ಮಾರ್ಟ್ ಕ್ಲಾಸ್ ರೂಂ ಹಾಗೂ 204 ಬಿಆರ್‌ಸಿಗಳಿಗೆ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸಲು ಮಿನಿ ಪಿಸಿಗಳನ್ನು, ಲ್ಯಾಪ್‌ಟಾಪ್‌ಗಳನ್ನು ಮತ್ತು ಪ್ರೊಜೆಕ್ಟರ್ ಇತ್ಯಾದಿಗಳನ್ನು ಸರಬರಾಜು ಮಾಡಲು ಅನುಮೋದಿಸಲಾಗಿದೆ. 2023–24 ನೇ ಸಾಲಿನಲ್ಲಿ ಪಿಎಬಿಯು ಐಸಿಟಿ & ಡಿಜಿಟಲ್ ಇನಿಶಿಯೇಟೀವ್ಸ್ ಕಾರ್ಯಕ್ರಮದಡಿ ಯಾವುದೇ ಚಟುವಟಿಕೆ ಅನುಮೋದನೆಯಾಗಿರುವುದಿಲ್ಲ.

**ಕಾರ್ಯಕ್ರಮದ ಉದ್ದೇಶಗಳು :–**

1. ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳಲ್ಲಿ 1 ರಿಂದ 12 ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಡಿಜಿಟಲ್ ಸಾಕ್ಷರತೆಯನ್ನು ಖಚಿತಪಡಿಸಿಕೊಳ್ಳುವುದು.

2. ಸಾಮಾನ್ಯ ತರಗತಿ ಬೋಧನೆಯಲ್ಲಿ ಐಸಿಟಿಯನ್ನು ಬಳಸುವುದು ಹಾಗೂ ಎಲ್ಲಾ ವಿಷಯಗಳ ಬೋಧನೆ ಮತ್ತು ಕಲಿಕೆಯಲ್ಲಿ, ತಂತ್ರಜ್ಞಾನ ಮತ್ತು ಇ–ಕಂಟೆಂಟ್‌ನ್ನು ಬಳಸಿ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಸುಧಾರಿಸುವುದು. ಜೊತೆಗೆ 1 ಮತ್ತು ಹೆಚ್ಚಿನ ತರಗತಿಗಳ ವಿದ್ಯಾರ್ಥಿಗಳಲ್ಲಿ ಇ–ಕಂಟೆಂಟ್ ಅಭ್ಯಾಸದ ಮೂಲಕ ಕಲಿಕಾ ಫಲಗಳನ್ನು ಹೆಚ್ಚಿಸುವುದು.

3. ಎನ್‌ಸಿಇಆರ್‌ಟಿ ಪಠ್ಯಕ್ರಮದ ಪ್ರಕಾರ ಶಾಲಾ ಮತ್ತು ಕಾಲೇಜು ಮಟ್ಟದಲ್ಲಿ ಶಿಕ್ಷಕರಲ್ಲಿ ಯೋಜನೆಯ ಅನುಷ್ಠಾನಾಧಿಕಾರಿಗಳಾಗುವ ಸಾಮರ್ಥ್ಯವನ್ನು ಬೆಳೆಸುವುದು.

4. ವಿದ್ಯಾರ್ಥಿಗಳ ಕಲಿಕೆಯ ಸಾಧನೆಗಳನ್ನು ಟ್ರ್ಯಾಕ್ ಮಾಡುವ ಜೊತೆಗೆ ಐಟಿಯ ಸಹಾಯದೊಂದಿಗೆ ಆದ ಕಲಿಕೆಯನ್ನು ಕೂಡ ಟ್ರ್ಯಾಕ್ ಮಾಡುವುದು.

5. ಉತ್ತಮ ಕಲಿಕೆ ಸಾಧನೆಗಳ ಮೂಲಕ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಗಳ ಸರಾಸರಿ ಅಂಕವನ್ನು ಶೇಕಡಾ 5 ರಷ್ಟು ಹೆಚ್ಚಿಸುವುದು.

1. ಶಿಕ್ಷಕರ ತರಬೇತಿ: ರಾಜ್ಯವು 4687 ಸರ್ಕಾರಿ ಪ್ರೌಢ ಶಾಲೆಗಳನ್ನು ಹೊಂದಿದ್ದು, 42000 ಶಿಕ್ಷಕರ ಹುದ್ದೆಗಳನ್ನು ಹೊಂದಿದೆ. ಈ ಪೈಕಿ 2016–17 ಮತ್ತು 2019–20ರ ನಡುವೆ 27143 ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. 2020–21ರ ಅವಧಿಯಲ್ಲಿ ಕೋವಿಡ್ –19 ಸಾಂಕ್ರಾಮಿಕದ ಹೊರತಾಗಿಯೂ 11489 ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಇದುವರೆಗೆ ಒಟ್ಟು 38632 ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.

2. ಇ–ಕಂಟೆಂಟ್‌ಗೆ ಪ್ರವೇಶ: ಇ–ಕಂಟೆಂಟ್‌ಅನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿವರಣಾ ವೀಡಿಯೊಗಳು, ಕಾನ್ಸೆಪ್ಟ್ ವೀಡಿಯೊಗಳು, ಪಿಡಿಎಫ್‌ಗಳು, ಪಿಪಿಟಿಗಳು, ಅಭ್ಯಾಸ ಚಟುವಟಿಕೆಗಳು, ಮೌಲ್ಯಮಾಪನ ಚಟುವಟಿಕೆಗಳು ಇತ್ಯಾದಿಗಳನ್ನು ದೀಕ್ಷಾ ಪೋರ್ಟಲ್‌ನಲ್ಲಿ ಅಳವಡಿಸಲಾಗಿದೆ. ಕನ್ನಡ ಮತ್ತು ಇಂಗ್ಲಿಷ್ ಎರಡೂ ಮಾಧ್ಯಮದಲ್ಲಿ, ಅಧ್ಯಾಯ ಮಟ್ಟದ ಕ್ಯೂಆರ್ ಕೋಡ್‌ಗಳನ್ನು ಹೊಂದಿರುವ 1 ರಿಂದ 10 ನೇ ತರಗತಿಯವರೆಗೆ energized ಪಠ್ಯಪುಸ್ತಕಗಳನ್ನು ದೀಕ್ಷಾ ಪ್ಲಾಟ್‌ಫಾರ್ಮ್‌ಗೆ ಅಪ್‌ಲೋಡ್ ಮಾಡಲಾಗಿದೆ ಮತ್ತು ಇದಕ್ಕೆ ಸಂಬಂಧಿಸಿದ ಇ–ಸಂಪನ್ಮೂಲಗಳನ್ನು ಲಿಂಕ್ ಮಾಡಲಾಗಿದೆ.

ಈ ಸಂಪನ್ಮೂಲಗಳನ್ನು ಪ್ರತಿಯೊಂದು ತರಗತಿಯ ಪಠ್ಯಪುಸ್ತಕಗಳಲ್ಲಿ ಹಾಗೂ ಅದರ ಪ್ರತಿಯೊಂದು ಅಧ್ಯಾಯದ ಮೇಲೆ ಮುದ್ರಿಸಲಾದ ಕ್ಯೂಆರ್ ಕೋಡ್‌ಗಳಿಗೆ ಲಿಂಕ್ ಮಾಡಲಾಗಿದೆ. ಇಲ್ಲಿಯವರೆಗೆ ಕನ್ನಡ, ಇಂಗ್ಲಿಷ್, ಉರ್ದು ಮತ್ತು ಮರಾಠಿ ಮಾಧ್ಯಮಗಳ ಪಠ್ಯ ಪುಸ್ತಕಗಳ 317 ಶೀರ್ಷಿಕೆಗಳನ್ನು energized ಮಾಡಲಾಗಿದೆ. 2018–19ರಲ್ಲಿ 33 ಶೀರ್ಷಿಕೆಗಳು, 2019–20ರಲ್ಲಿ 54 ಪ್ರಶಸ್ತಿಗಳು ಮತ್ತು 2020–21ರ ಅವಧಿಯಲ್ಲಿ 230 ಶೀರ್ಷಿಕೆಗಳನ್ನು energized ಮಾಡಲಾಗಿದೆ. ರಾಜ್ಯದ 4687 ಸರ್ಕಾರಿ ಪ್ರೌಢ ಶಾಲೆಗಳ ಕಂಪ್ಯೂಟರ್ ಲ್ಯಾಬ್‌ಗಳಿಗೆ ಸರಬರಾಜು ಮಾಡಲಾದ ಲ್ಯಾಪ್‌ಟಾಪ್‌ಗಳಲ್ಲಿ ಮತ್ತು 2521 ಸರ್ಕಾರಿ ಪ್ರೌಢ ಶಾಲೆಗಳಿಗೆ ಸರಬರಾಜು ಮಾಡಲಾದ ಆಲ್‌ಇನ್‌ಒನ್ ಕಂಪ್ಯೂಟರ್‌ಗಳಲ್ಲಿ ಇ–ಕಂಟೆಂಟ್‌ನ್ನು pre ಲೋಡ್ ಮಾಡಲಾಗಿದೆ.

ಆರಂಭದಲ್ಲಿ ಎನ್‌ಜಿಓಗಳು ಅಭಿವೃದ್ಧಿಪಡಿಸಿದ ಸಂಪನ್ಮೂಲಗಳು ಮತ್ತು ಒ.ಇ.ಆರ್. ಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಸ್ಥಳೀಕರಿಸಲಾಯಿತು. ತರುವಾಯ ಶಿಕ್ಷಕರ ತರಬೇತಿಯ ಪ್ರಗತಿಯೊಂದಿಗೆ, ಶಿಕ್ಷಕರು

ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಪ್ರಾರಂಭಿಸಿದ್ದಾರೆ ಹಾಗೂ ಆ ಸಂಪನ್ಮೂಲಗಳನ್ನು ದೀಕ್ಷಾ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಿದ್ದಾರೆ. ಇಲ್ಲಿಯವರೆಗೆ 37000 ಇ–ಸಂಪನ್ಮೂಲಗಳು ದೀಕ್ಷಾದಲ್ಲಿ ಲಭ್ಯವಿದೆ.

**ದೃಷ್ಟಿಹೀನ ಮತ್ತು ಶ್ರವಣ–ದುರ್ಬಲ ವಿದ್ಯಾರ್ಥಿಗಳಿಗೆ ಇ–ಕಂಟೆಂಟ್:** 10ನೇ ತರಗತಿಯ ಆಡಿಯೊಬುಕ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಶೀಘ್ರದಲ್ಲೇ ದೀಕ್ಷಾ ಪೋರ್ಟಲ್‌ನಲ್ಲಿ ಲಭ್ಯವಾಗಲಿದೆ. ಇತರ ತರಗತಿಗಳಿಗೆ ಆಡಿಯೊ ಪುಸ್ತಕಗಳನ್ನು ಸಹ ಅಭಿವೃದ್ಧಿಪಡಿಸಲಾಗುತ್ತಿದೆ ಮತ್ತು ದೀಕ್ಷಾ ಪೋರ್ಟಲ್‌ಗೆ ಅಪ್‌ಲೋಡ್ ಮಾಡಲಾಗುತ್ತದೆ.

**ಒಲಾಬ್ಸ್:** ಅಮೃತಾ ಒಲಾಬ್ಸ್‌ನ 9–10 ತರಗತಿಯ 45 ವಿಜ್ಞಾನ ಪ್ರಯೋಗಗಳನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಲಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಬಳಕೆಗಾಗಿ ಅಮೃತಾ ಒಲಾಬ್ಸ್ ಲಿಂಕ್ ಅನ್ನು ಡಿ.ಎಸ್.ಇ.ಆರ್.ಟಿ ವೆಬ್‌ಸೈಟ್‌ನಲ್ಲಿ ನೀಡಲಾಗಿದೆ. http://dsert.kar.nic.in/kasp/learning_material.asp.

3. ಐಸಿಟಿ ಸಾಧನಗಳ ಪೂರೈಕೆ – ಇ–ಕಂಟೆಂಟ್‌ನ್ನು ಬಳಸಿಕೊಂಡು ಶಿಕ್ಷಕರು ತಮ್ಮ ತರಗತಿ ಬೋಧನಾ ಪ್ರಕ್ರಿಯೆಯನ್ನು ಸುಧಾರಿಸಲು ಪ್ರತಿ ಸರ್ಕಾರಿ ಪ್ರೌಢ ಶಾಲೆಗೆ ಲ್ಯಾಪ್‌ಟಾಪ್, ಪ್ರೊಜೆಕ್ಟರ್ ನೀಡಲು ಯೋಜಿಸಲಾಗಿದೆ. ಪ್ರತಿಯೊಂದು ಪ್ರೌಢ ಶಾಲೆಯಲ್ಲೂ ಕಂಪ್ಯೂಟರ್ ಲ್ಯಾಬ್ ಇದ್ದು, ಇದರಿಂದ ವಿದ್ಯಾರ್ಥಿಗಳು ಕಂಪ್ಯೂಟರ್ ಬಳಸುವುದನ್ನು ಕಲಿಯುತ್ತಾರೆ ಮತ್ತು ಅವರ ಶೈಕ್ಷಣಿಕ ಕಾರ್ಯಕ್ಷಮತೆಯು ಉತ್ತಮವಾಗುತ್ತದೆ. ಸರಬರಾಜು ಮಾಡಲಾದ ಪ್ರತಿಯೊಂದು ಕಂಪ್ಯೂಟರ್‌ಗಳಲ್ಲೂ ಇ–ಕಂಟೆಂಟ್‌ನ್ನು ಮೊದಲೇ ಸೇರಿಸಲಾಗಿರುತ್ತದೆ

**2022-23ನೇ ಸಾಲಿನ ಪ್ರಗತಿ**

| ಕ್ರಮ ಸಂಖ್ಯೆ | ಚಟುವಟಿಕೆ | ಪಿಎಬಿ ಅನುಮೋದನೆ | | ಒಟ್ಟು ಅನುಮೋದನೆ | ಮಾರ್ಚ 30,2024 ರಂತೆ ಸಾಧನೆ | | ಒಟ್ಟು ಅನುಮೋದನೆ |
|---|---|---|---|---|---|---|---|
| | | ಭೌತಿಕ ಸಂಖ್ಯೆ | ಘಟಕ ವೆಚ್ಚ (ಮೊತ್ತ ಲಕ್ಷಗಳಲ್ಲಿ) | | ಭೌತಿಕ ಸಂಖ್ಯೆ | ಘಟಕ ವೆಚ್ಚ (ಮೊತ್ತ ಲಕ್ಷಗಳಲ್ಲಿ) | |
| 01 | ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸ್ಮಾರ್ಟ ಕ್ಲಾಸ್ ರೂಮ್ ಸ್ಥಾಪಿಸಲು [Type-II] | 1631 | Rs. 2.40 | Rs. 3914.4 | - | - | - |
| 02 | ಮಾಧ್ಯಮಿಕ ಹಾಗೂ ಪದವಿ ಪೂರ್ವ ಶಾಲೆಗಳಲ್ಲಿ ಸ್ಮಾರ್ಟ ಕ್ಲಾಸ್ ರೂಮ್ ಸ್ಥಾಪಿಸಲು [Type-II] | 137 | Rs. 2.40 | Rs. 328.8 | 137 | Rs. 2.40 | Rs. 328.8 |
| 03 | ರಾಜ್ಯದ ಎಲ್ಲಾ ಬಿ.ಆರ್.ಸಿ.ಗಳಿಗೆ Digital hardware & softwareಗಳ ಖರೀದಿ | 204 | Rs. 6.40 | Rs.1305.6 | 204 | Rs. 6.40 | Rs.1305.6 |
| 04 | ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಟ್ಯಾಬ್‌ಗಳನ್ನು ಟೀಚರ್ ರಿಸೋಸ್ ಪ್ಯಾಕೇಜ್‌ರಡಿ ಖರೀದಿ | 138222 | Rs. 0.10 | 1382.22 | - | - | - |



